ಶುಕ್ರವಾರ, ಜನವರಿ 27, 2023 | ₹ 6.00
www.prajavani.net
/prajavani.net @prajavani /prajavani http://bit.ly/Prajavani
ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪರೇಡ್
ಅಗರ್ತಲಾದಲ್ಲಿ ಗುರುವಾರ ನಡೆದ ಗಣರಾಜ್ಯೋತ್ಸವ ಪರೇಡ್‌ನಲ್ಲಿ ತ್ರಿಪುರಾ ಸ್ಟೇಟ್ ರೈಫಲ್ಸ್ ತುಕಡಿ ಪಥ ಸಂಚಲನ ನಡೆಸಿತು







ಬೆಂಗಳೂರಿನ ಮಾಣೆಕ್ ಶಾ ಪರೇಡ್ ಮೈದಾನದಲ್ಲಿ ಗುರುವಾರ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮಾಗಡಿ ರಸ್ತೆಯ ಬಿಬಿಎಂಪಿ ಸಂಯುಕ್ತ ಪದವಿ ಪೂರ್ವ ಕಾಲೇಜು ಮತ್ತು ವಿಜಯನಗರದ ಬಿಬಿಎಂಪಿ ಪ್ರೌಢ ಶಾಲೆ ವಿದ್ಯಾರ್ಥಿಗಳು ನಮ್ಮ ಭಾರತ ಭಾಗ್ಯವಿಧಾತ ರೈತ ನೃತ್ಯ ನಾಟಕ ಪ್ರದರ್ಶಿಸಿದರು (ಎಡ ಚಿತ್ರ) ಉತ್ತರಹಳ್ಳಿಯ ಕರ್ನಾಟಕ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳು ಮಹಾನಾಯಕ ಡಾ. ಬಿ. ಆರ್. ಅಂಬೇಡ್ಕರ್ ನೃತ್ಯ ನಾಟಕವನ್ನು ಪ್ರದರ್ಶಿಸಿದರು

–ಪ್ರಜಾವಾಣಿ ಚಿತ್ರಗಳು/ ಪ್ರಶಾಂತ್ ಎಚ್.ಜಿ.

ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಆಕರ್ಷಕ ಪಥಸಂಚಲನ • ಯೋಧರ ಸಾಹಸ ಪ್ರದರ್ಶನ

ಸಂವಿಧಾನ ಶಿಲ್ಪಿಗೆ ನಮನ: ರೈತನ ಸಂಕಷ್ಟ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಕರ್ಷಕ ಪಥಸಂಚಲನ, ಮಿಲಿಟರಿ ಬ್ಯಾಂಡ್ ಹಿಮ್ಮೇಳ, ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು, ಯೋಧರ ಸಾಹಸ ಪ್ರದರ್ಶನಗಳು 74ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಗಮನಸೆಳೆದವು.

ನಗರದ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಬಿಬಿಎಂಪಿ, ಬೆಂಗಳೂರು ನಗರ ಜಿಲ್ಲಾಡಳಿತ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಲೆಫ್ಟಿನೆಂಟ್ ಕರ್ನಲ್ ವಿಕ್ರಮಾದಿತ್ಯ ಸಿಂಗ್ ನೇತೃತ್ವದಲ್ಲಿ ಪರೇಡ್ ನಡೆಯಿತು.

ವಾಯುಪಡೆ, ಎಂಇಜಿ, ಗಡಿ ಭದ್ರತಾ ಪಡೆ, ಕೇಂದ್ರೀಯ ಮೀಸಲು ಪೊಲೀಸ್ ಪಡೆ, ಕರ್ನಾಟಕ ಕೈಗಾರಿಕಾ ಭದ್ರತಾ ಪಡೆ, ಬೆಂಗಳೂರು ನಗರ ಸಂಚಾರ ಪೊಲೀಸ್ ಸೇರಿ 30 ತುಕಡಿಗಳು ಭಾಗವಹಿಸಿದ್ದವು. ರಮಣ ಮಹರ್ಷಿ ಶಾಲೆಯ ಅಂಧ ಮಕ್ಕಳು ಆತ್ಮವಿಶ್ವಾಸದಿಂದ ಪಥಸಂಚಲನದಲ್ಲಿ ಹೆಜ್ಜೆ ಹಾಕಿದರು. ಶ್ವಾನದಳವೂ ಪಾಲ್ಗೊಂಡಿದ್ದು ವಿಶೇಷವಾಗಿತ್ತು.



ಮದ್ರಾಸ್ ಎಂಜಿನಿಯರಿಂಗ್ ಗ್ರೂಪ್ (ಎಂಇಜಿ) ಸಿಬ್ಬಂದಿ ಪರೇಡ್‌ನಲ್ಲಿ ಪಾಲ್ಗೊಂಡಿದ್ದರು

ಈ ಬಾರಿಯ ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ಕೇರಳ ಪೊಲೀಸ್ ತಂಡವು ಸಬ್‌ಇನ್‌ಸ್ಪೆಕ್ಟರ್ ಅಂಬಿಕಾ ಶ್ರೀಧರನ್ ನೇತೃತ್ವದಲ್ಲಿ ಪಾಲ್ಗೊಂಡಿತ್ತು.

ವಿಧಾನಸಭೆ ಚುನಾವಣೆ ಸಮೀಪಿಸುತ್ತಿರುವುದರಿಂದ ಮತದಾರರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಚುನಾವಣಾ ಆಯೋಗವು ರೂಪಿಸಿದ್ದ ಸ್ತಬ್ಧಚಿತ್ರವು ಕೂಡ ಈ ಸಂದರ್ಭದಲ್ಲಿ ಗಮನಸೆಳೆಯಿತು.

ಸಂವಿಧಾನ ಶಿಲ್ಪಿಗೆ ನಮನ: ಉತ್ತರಹಳ್ಳಿಯ ಕರ್ನಾಟಕ ಪಬ್ಲಿಕ್ ಶಾಲೆಯ 750 ವಿದ್ಯಾರ್ಥಿಗಳು ಪ್ರದರ್ಶಿಸಿದ 'ಮಹಾನಾಯಕ' ನೃತ್ಯರೂಪಕವನ್ನು ಡಾ. ಬಿ.ಆರ್. ಅಂಬೇಡ್ಕರ್ ಅವರ ಬದುಕಿನ ಹೋರಾಟದ ಹಾದಿ, ಸಾಹಸ ಗಾಥೆ ಮತ್ತು ಸ್ಫೂರ್ತಿಯ ಸೆಲೆಯಾಗಿ ಬಿಂಬಿಸಲಾಯಿತು.



ತಿರುವನಂತಪುರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೆಎಸ್‌ಆರ್‌ಪಿ ಮಹಿಳಾ ಪಡೆ ಪಥಸಂಚಲನ ನಡೆಸಿತು

ಮಾಗಡಿ ರಸ್ತೆಯ ಬಿಬಿಎಂಪಿ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜು ಹಾಗೂ ವಿಜಯ ನಗರದ ಬಿಬಿಎಂಪಿ ಪ್ರೌಢಶಾಲೆಯ 650 ವಿದ್ಯಾರ್ಥಿಗಳು ಪ್ರದರ್ಶಿಸಿದ 'ನಮ್ಮ ಭಾರತ ಭಾಗ್ಯ ವಿಧಾತ– ರೈತ' ನೃತ್ಯರೂಪಕವು, ಅನ್ನದಾತ ಎದುರಿಸುತ್ತಿರುವ ಸಂಕಷ್ಟಗಳನ್ನು ಅನಾವರಣಗೊಳಿಸಿತು. ದಲ್ಲಾಳಿಗಳು, ಬಂಡವಾಳಶಾಹಿಗಳು, ಭೂಕಬಳಿಕೆದಾರರ ಕಪಿಮುಷ್ಟಿಯಲ್ಲಿ ಸಿಲುಕಿ ನಲುಗಿರುವ ರೈತನ ಕುರಿತಾದ ಈ ರೂಪಕವು ಕಾಯಕಯೋಗಿಯ ಶ್ರಮವನ್ನು ಬಿಂಬಿಸಿತು.

ಲಗ್ಗೆರೆಯ ಸಿರಿ ಸ್ಕೂಲ್, ವಿಷ್ಣು ಇಂಟರ್‌ನ್ಯಾಷನಲ್ ಸ್ಕೂಲ್, ವಿಷ್ಣು ಸ್ಕೂಲ್‌ನ 600 ವಿದ್ಯಾರ್ಥಿಗಳು 'ಭಾರತಾಂಬೆ ನಿನ್ನ ಜನ್ಮ ದಿನ' ನೃತ್ಯ ರೂಪಕವು ಗಮನಸೆಳೆಯಿತು. ಎಂಇಜಿ ಆ್ಯಂಡ್ ಸೆಂಟರ್ ತಂಡದ ಯೋಧರ ಸಾಹಸ ಪ್ರದರ್ಶನ 'ಕಲರಿ ಪಯಟ್ಟು' ಪ್ರೇಕ್ಷಕರನ್ನು ರಂಜಿಸಿತು.

ಮೈನವಿರೇಳಿಸಿದ ಬೈಕ್ ಸಾಹಸ: ದಿ ಆರ್ಮಿ ಸರ್ವಿಸ್ ಕ್ರಾಪ್ಸ್‌ನ 'ಟಾರ್ನಾಡೊ' ಯೋಧರು ಪ್ರದರ್ಶಿಸಿದ ಬೈಕ್ ಸಾಹಸ ನೋಡುಗರ ಮೈನವಿರೇಳಿಸಿತು. ಸೀಜರ್ ಕ್ರಾಸಿಂಗ್, ಡೈಮಂಡ್ ಕ್ರಾಸಿಂಗ್, ಒನ್ ಲೆಗ್ ರೈಡಿಂಗ್, ಸೈಡ್ ಬ್ಯಾಲೆನ್ಸಿಂಗ್‌ನಂತಹ ಕಸರತ್ತು ಪ್ರದರ್ಶಿಸಿದರು.

ಕೇರಳ: ಕೆಎಸ್‌ಆರ್‌ಪಿ ಮಹಿಳಾ ಪಡೆ ಪಥಸಂಚಲನ

ಕೇರಳದ ತಿರುವನಂತಪುರ ಕೇಂದ್ರ ಮೈದಾನದಲ್ಲಿ ಆಯೋಜಿಸಿದ್ದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆಯ (ಕೆಎಸ್‌ಆರ್‌ಪಿ) ಮಹಿಳಾ ಸಿಬ್ಬಂದಿ ಪಡೆ, ಪೊಲೀಸ್ ಪೇಟ ಧರಿಸಿ ಶಸ್ತ್ರಸಜ್ಜಿತವಾಗಿ ಹೆಜ್ಜೆ ಹಾಕಿತು. ಅಧಿಕಾರಿಗಳು ಸೇರಿದಂತೆ 44 ಸಿಬ್ಬಂದಿ ತಂಡದಲ್ಲಿದ್ದರು.

ಸುದ್ದಿ 2 ನಿಮಿಷ

ಶಿಕ್ಷಕರ ನೇಮಕಾತಿ ಆದೇಶಕ್ಕೆ ಅಭ್ಯರ್ಥಿಗಳ ಅಭಿಯಾನ

ಬೆಂಗಳೂರು: ಪದವೀಧರ ಪ್ರಾಥಮಿಕ ಶಿಕ್ಷಕರ ನೇಮಕಾತಿ ಪ್ರಕ್ರಿಯೆಯನ್ನು ಸರ್ಕಾರ ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದು ಒತ್ತಾಯಿಸಿ ಅಂತಿಮ ಆಯ್ಕೆ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಅಭ್ಯರ್ಥಿಗಳು ಟ್ವಿಟರ್‌ನಲ್ಲಿ ಅಭಿಯಾನ ಆರಂಭಿಸಿದ್ದಾರೆ.

ಶಿಕ್ಷಕರ ನೇಮಕಾತಿ ಪ್ರಕ್ರಿಯೆಗಳು ಈಗಾಗಲೇ ಅಂತಿಮ ಹಂತ ತಲುಪಿವೆ. ಕೋರ್ಟ್‌ನಲ್ಲಿದ್ದ ತಡೆಯಾಜ್ಞೆಯೂ ತೆರವಾಗಿದೆ. ಮಕ್ಕಳ ಗುಣಮಟ್ಟದ ಶಿಕ್ಷಣ ಹಾಗೂ ಅಭ್ಯರ್ಥಿಗಳ ಜೀವನವನ್ನು ಗಮನದಲ್ಲಿ ಇಟ್ಟುಕೊಂಡು ತಕ್ಷಣವೇ ನೇಮಕಾತಿ ಆದೇಶ ನೀಡಬೇಕು ಎಂದು ಕೋರಿದ್ದಾರೆ.

2022ರ ಮಾರ್ಚ್‌ನಲ್ಲಿ 15 ಸಾವಿರ ಶಿಕ್ಷಕರ ನೇಮಕಾತಿಗೆ ಅಧಿಸೂಚನೆ ಹೊರಡಿಸಲಾಗಿತ್ತು. 68,849 ಅಭ್ಯರ್ಥಿಗಳು ಸಿಇಟಿ ಬರೆದಿದ್ದರು. ಅವರಲ್ಲಿ 51,098 ಅಭ್ಯರ್ಥಿಗಳು ಅರ್ಹತೆ ಪಡೆದಿದ್ದರು. 22,432 ಅಭ್ಯರ್ಥಿಗಳನ್ನು ದಾಖಲೆಗಳ ಪರಿಶೀಲನೆಗೆ ಆಯ್ಕೆ ಮಾಡಲಾಗಿತ್ತು. ಅಂತಿಮವಾಗಿ 13,363 ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸಲಾಗಿತ್ತು.

ಯಲಹಂಕ: ತಾಲ್ಲೂಕು ಆಡಳಿತದಿಂದ ಅದ್ದೂರಿ ಗಣರಾಜ್ಯೋತ್ಸವ



ಯಲಹಂಕ: 'ನರೇಂದ್ರ ಮೋದಿಯವರು ಪ್ರಧಾನಿಯಾದ ನಂತರ ಭಾರತ ಹೆಚ್ಚು ಬಲಿಷ್ಠವಾಗುತ್ತಿದೆ. ಆದರೂ ಆಂತರಿಕವಾಗಿ ನಮ್ಮ ದೇಶವನ್ನು ಅಸ್ಥಿರಗೊಳಿಸಬೇಕೆಂದು ಕೆಲವು ಭಯೋತ್ಪಾದಕರು ಹಾಗೂ ದೇಶದ್ರೋಹಿಗಳು ಹುನ್ನಾರ ನಡೆಸುತ್ತಿದ್ದು, ಇಂತಹ ದುಷ್ಟಶಕ್ತಿಗಳ ವಿರುದ್ಧ ನಾವೆಲ್ಲರೂ ಒಗ್ಗಟ್ಟಾಗಿ ಹೋರಾಡಬೇಕು' ಎಂದು ಶಾಸಕ ಎಸ್.ಆರ್.ವಿಶ್ವನಾಥ್ ಹೇಳಿದರು.

ತಾಲ್ಲೂಕು ಆಡಳಿತ ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯ ಆಶ್ರಯದಲ್ಲಿ ಉಪನಗರದ ಹೊಯ್ಸಳ ಕ್ರೀಡಾಂಗಣದಲ್ಲಿ ಏರ್ಪಡಿಸಿದ್ದ 74ನೇ ಗಣರಾಜ್ಯೋತ್ಸವ ದಿನಾಚರಣೆ ಸಮಾರಂಭದಲ್ಲಿ ಅವರು ದೇಶದ ರಕ್ಷಣೆ ಕುರಿತು ಮಾತನಾಡಿದರು.

ತಹಶೀಲ್ದಾರ್ ಅನಿಲ್ ಕುಮಾರ್ ಅರೋಲಿಕರ್ ಧ್ವಜಾರೋಹಣ ನೆರವೇರಿಸಿದರು.

ಅತ್ಯುತ್ತಮ ಸಾಧನೆ ಮಾಡಿದ ಗ್ರಾಮಪಂಚಾಯಿತಿಗಳ ಮೂವರಿಗೆ 'ಗ್ರಾಮ-1' ಪ್ರಶಸ್ತಿ ನೀಡಿ ಗೌರವಿಸಲಾಯಿತು. ವಿವಿಧ ಶಾಲೆಗಳ ವಿದ್ಯಾರ್ಥಿಗಳು, ಪೊಲೀಸ್, ಸಂಚಾರ ಪೊಲೀಸ್, ಎನ್.ಸಿಸಿ, ಸೇವಾದಳ, ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ವಾದ್ಯಗೋಷ್ಠಿ ತಂಡಗಳಿಂದ ಆಕರ್ಷಕ ಪಥಸಂಚಲನ ನಡೆಯಿತು. ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮಗಳು ಜನರ ಗಮನ ಸೆಳೆದವು.

ಬಿಬಿಎಂಪಿ ಯಲಹಂಕ ವಲಯದ ಜಂಟಿ ಆಯುಕ್ತರಾದ ಡಾ.ಪೂರ್ಣಿಮಾ ಪಿ.ವಿ, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಾದ ಅಪೂರ್ವ ಎ.ಕುಲಕರ್ಣಿ, ರಮೇಶ್ ಡಿ.ಒ, ಕ್ಷೇತ್ರಶಿಕ್ಷಣಾಧಿಕಾರಿ ಕೆ.ಎನ್.ಅಶ್ವಥನಾರಾಯಣ, ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಎನ್.ವಿಜಯಕುಮಾರ್, ಉಪ ತಹಶೀಲ್ದಾರ್ ರಮೇಶ್ ಬಾಬು ಮತ್ತಿತರರು ಉಪಸ್ಥಿತರಿದ್ದರು.

ಪ್ರತಿಭಟನೆ ಸ್ಥಳದಲ್ಲಿ ಧ್ವಜಾರೋಹಣ



ಧ್ವಜಾರೋಹಣ ನೆರವೇರಿಸಿದ ಪ್ರತಿಭಟನಕಾರರು ಪ್ರತಿಜ್ಞಾ ವಿಧಿ ಸ್ವೀಕರಿಸಿದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಅನಿರ್ದಿಷ್ಟಾವಧಿ ಪ್ರತಿಭಟನೆ ಆರಂಭಿಸಿರುವ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ಗುರುವಾರ ಧ್ವಜಾರೋಹಣ ನೆರವೇರಿಸಿ, ಗಣರಾಜ್ಯೋತ್ಸವ ಆಚರಿಸಿದರು.

'ಅಂಗನವಾಡಿ ಕಾರ್ಯಕರ್ತೆಯರನ್ನು ಸರ್ಕಾರಿ ಶಿಕ್ಷಕಿಯರೆಂದು ಪರಿಗಣಿಸಬೇಕು. ಅನ್ನದ ಕೇಂದ್ರಗಳಾಗಿರುವ ಅಂಗನವಾಡಿಗಳನ್ನು ಅಕ್ಷರ ಕೇಂದ್ರಗಳಾಗಿ ಮಾರ್ಪಡಿಸಬೇಕು. ಗ್ರ್ಯಾಚ್ಯುಟಿ ಪಾವತಿಸಬೇಕು' ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ನಡೆಯುತ್ತಿರುವ ಪ್ರತಿಭಟನೆ ಗುರುವಾರ ನಾಲ್ಕನೇ ದಿನ ಪೂರೈಸಿತು.

ಪ್ರತಿಭಟನಾ ಸ್ಥಳದಲ್ಲಿ ತಾತ್ಕಾಲಿಕ ಧ್ವಜದ ಕಂಬ ನಿರ್ಮಿಸಿದ್ದ ಪ್ರತಿಭಟನಕಾರರು, ರಾಷ್ಟ್ರ ಧ್ವಜಾರೋಹಣ ನೆರವೇರಿಸಿದರು. ರಾಷ್ಟ್ರಧ್ವಜಕ್ಕೆ ಸೆಲ್ಯೂಟ್ ಮಾಡಿ, ಸಂವಿಧಾನದ ಪೂರ್ವ ಪೀಠಿಕೆ ಪ್ರತಿ ಹಿಡಿದು ಪ್ರತಿಜ್ಞಾ ವಿಧಿ ಸ್ವೀಕರಿಸಿದರು.

ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ಅವರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಪ್ರತಿಭಟನೆಗೆ ಬೆಂಬಲ ಸೂಚಿಸಿದರು. ಜನವಾದಿ ಮಹಿಳಾ ಸಂಘಟನೆಯ ಕೆ.ಎಸ್. ವಿಮಲಾ, ಸುರೇಂದ್ರನಾಥ್ (ಗುಂಡಣ್ಣ), ಪಂಚಮಿ ಗುಬ್ಬಿ, ಚಿಂತನ್ ವಿಕಾಸ್, ಸಿಐಟಿಯು ರಾಜ್ಯ ಅಂಗನವಾಡಿ ನೌಕರರ ಸಂಘದ ರಾಜ್ಯ ಘಟಕದ ಅಧ್ಯಕ್ಷೆ ಎಸ್. ವರಲಕ್ಷ್ಮಿ ಇದ್ದರು.

'ಅಂಗನವಾಡಿ ಕೆಲಸಕ್ಕೆ ಗೈರಾಗಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ಪ್ರತಿಭಟನೆ ನಡೆಸುತ್ತಿದ್ದಾರೆ. ಸರ್ಕಾರದ ಯಾವುದೇ ಅಧಿಕಾರಿ ಹಾಗೂ ಜನಪ್ರತಿನಿಧಿಗಳು ಸ್ಥಳಕ್ಕೆ ಬಂದು ಸಮಸ್ಯೆ ಆಲಿಸುತ್ತಿಲ್ಲ. ಗಣರಾಜ್ಯೋತ್ಸವ ದಿನದಂದೂ ನಾವೆಲ್ಲರೂ ಬೀದಿಯಲ್ಲಿ ಇರುವಂತಾಗಿದೆ' ಎಂದು ವರಲಕ್ಷ್ಮಿ ಅಸಮಾಧಾನ ವ್ಯಕ್ತಪಡಿಸಿದರು.

'ಯಾವುದೇ ಕಾರಣಕ್ಕೂ ನಾವು ಪ್ರತಿಭಟನೆ ಕೈಬಿಡುವುದಿಲ್ಲ. ಬೇಡಿಕೆ ಈಡೇರಿಸುವ ಬಗ್ಗೆ ಲಿಖಿತ ಭರವಸೆ ಸಿಗುವವರೆಗೂ ಉದ್ಯಾನ ಬಿಟ್ಟು ಹೋಗುವುದಿಲ್ಲ' ಎಂದರು.

ಹಾರದ ರಾಷ್ಟ್ರಧ್ವಜ: ಮುಖ್ಯಮಂತ್ರಿ ಸಮ್ಮುಖದಲ್ಲೇ ಗೊಂದಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಬ್ರಿಗೇಡ್ ರಸ್ತೆಯ ಒಪೇರಾ ಹೌಸ್ ಬಳಿ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ರಾಷ್ಟ್ರ ಧ್ವಜ ಹಾರದೆ ಗೊಂದಲ ಸೃಷ್ಟಿಸಿತು. ಇದೇ ಕಾರ್ಯಕ್ರಮದಲ್ಲಿ ರಾಷ್ಟ್ರಗೀತೆಯನ್ನು ಎರಡು ಬಾರಿ ಹಾಡಲಾಯಿತು.

ಶಾಂತಿನಗರ ಕ್ಷೇತ್ರದ ಶಾಸಕ ಎನ್.ಎ. ಹ್ಯಾರಿಸ್ ಅವರು ಆಯೋಜಿಸಿದ್ದ ಈ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾಗವಹಿಸಿದ್ದರು.

ಎತ್ತರದ ಸ್ತಂಭದ ಮೇಲೆ 24*36 ಅಡಿ ವಿಸ್ತೀರ್ಣದ ಧ್ವಜವನ್ನು ಹಾರಿಸಲು ಉದ್ದೇಶಿಸಲಾಗಿತ್ತು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆಗಮಿಸಿ ಧ್ವಜಾರೋಹಣಕ್ಕೆ ಮುಂದಾದರು. ಹಲವು ಬಾರಿ ಎಳೆದರೂ ರಾಷ್ಟ್ರಧ್ವಜ ಬಿಚ್ಚಿಕೊಳ್ಳಲಿಲ್ಲ. ಸ್ಥಳದಲ್ಲಿದ್ದ ಹಲವರು ಸಹ ಮುಂದಾಗಿ ಹಗ್ಗವನ್ನು ಎಷ್ಟು ಜಗ್ಗಿದರೂ ಧ್ವಜ ಹಾರಲೇ ಇಲ್ಲ.



ಬೆಂಗಳೂರಿನ ಬ್ರಿಗೇಡ್ ರಸ್ತೆಯ ಒಪೇರಾ ಹೌಸ್ ಬಳಿ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ರಾಷ್ಟ್ರಧ್ವಜ ಹಾರಿಸಲು ಶಾಸಕ ಎನ್.ಎ. ಹ್ಯಾರಿಸ್ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪ್ರಯತ್ನಿಸಿದರು

ಕೊನೆಗೆ ಧ್ವಜ ಸ್ತಂಭದ ಸಿಬ್ಬಂದಿ ಆಗಮಿಸಿ ಹ್ಯಾಂಡಲ್ ಮೂಲಕ ಧ್ವಜವನ್ನೇ ಕೆಳಗೆ ಇಳಿಸಿದರು. ಕೆಳಭಾಗದಲ್ಲೇ ಧ್ವಜವನ್ನು ಬಿಚ್ಚಿ ನಂತರ ಮೇಲೇರಿಸಲಾಯಿತು. ಅಷ್ಟು ಹೊತ್ತಿಗೆ ಸುಮಾರು 15 ನಿಮಿಷ ವ್ಯಯವಾಯಿತು.

ಧ್ವಜಾರೋಹಣದ ನಂತರ ರಾಷ್ಟ್ರಗೀತೆಗೂ ಆಯೋಜಕರು ಸಿದ್ಧತೆ ಮಾಡಿಕೊಂಡಿರಲಿಲ್ಲ. ರಾಷ್ಟ್ರಗೀತೆ ಆರಂಭವಾದ ಕೆಲ ಹೊತ್ತಿನಲ್ಲಿ ಮೊಟಕುಗೊಳಿಸಲಾಯಿತು. ಬಳಿಕ ಎರಡನೇ ಬಾರಿ ಪೂರ್ಣವಾಗಿ ರಾಷ್ಟ್ರಗೀತೆಯನ್ನು ಹಾಡಲಾಯಿತು.

ಕೆ.ಆರ್. ಪುರದಲ್ಲಿ ಧ್ವಜಾರೋಹಣ

ಕೆ.ಆರ್.ಪುರ: 'ದೇಶದ ಪ್ರತಿಯೊಬ್ಬ ನಾಗರಿಕನೂ ನಿಸ್ವಾರ್ಥದಿಂದ, ರಾಷ್ಟ್ರಪ್ರೇಮದಿಂದ, ಉತ್ತಮ ಪ್ರಜೆಗಳಾಗಿ ನಡೆದುಕೊಂಡಾಗ ಮಾತ್ರ ಗಣರಾಜ್ಯೋತ್ಸವದ ಆಚರಣೆಗೆ ಅರ್ಥ ಬರುತ್ತದೆ' ಎಂದು ಬೆಂಗಳೂರು ಪೂರ್ವ ತಾಲೂಕು ತಹಶೀಲ್ದಾರ್ ಎಸ್.ಆರ್.ಮಹೇಶ್ ಹೇಳಿದರು.

ಕೆ.ಆರ್.ಪುರದ ರಾಜೀವ್‌ಗಾಂಧಿ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದರು. 'ಬೆಂಗಳೂರನ್ನು ವಿಶ್ವದ ಅತ್ಯುತ್ತಮ ಡೈನಾಮಿಕ್ ಸಿಟಿ ಎಂದು ಘೋಷಿಸಲಾಗಿದೆ. ಮಾಹಿತಿ ತಂತ್ರಜ್ಞಾನ, ವೈಜ್ಞಾನಿಕ ಕ್ಷೇತ್ರಕ್ಕೆ ಸಂಬಂಧಿಸಿದ ಕಚೇರಿಗಳು ನಮ್ಮ ಪೂರ್ವ ತಾಲ್ಲೂಕಿನಲ್ಲಿದೆ' ಎಂದು ಹೇಳಿದರು.

'ಸರ್ವರಿಗೂ ಸಮಾನ ಗುಣಮಟ್ಟದ ಶಿಕ್ಷಣ'

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸೆಂಟ್ರಲ್ ಕಾಲೇಜು ಕ್ಯಾಂಪಸ್‌ನಲ್ಲಿ ನಡೆದ 74ನೇ ಗಣರಾಜ್ಯೋತ್ಸವ ಸಮಾರಂಭದಲ್ಲಿ ಕುಲಪತಿ ಪ್ರೊ. ಲಿಂಗರಾಜ ಗಾಂಧಿ ಧ್ವಜಾರೋಹಣ ಮಾಡಿದರು.

ನಂತರ ಮಾತನಾಡಿದ ಅವರು, 'ಸಂವಿಧಾನದ ಆಶಯಗಳು ಮತ್ತು ಕನಸುಗಳ ಸಾಕಾರಕ್ಕಾಗಿ ಭಾರತೀಯರು ಒಗಟ್ಟಾಗಿ ಶ್ರಮಿಸಬೇಕಾಗಿದೆ. ದೇಶ ಮತ್ತು ಸಮಾಜದ ಪ್ರಗತಿಗೆ ಶಿಕ್ಷಣದ ಅಭಿವೃದ್ಧಿ ಬುನಾದಿಯಾಗಿದೆ. ಸರ್ವರಿಗೂ ಸಮಾನ ಗುಣಮಟ್ಟದ ಶಿಕ್ಷಣವನ್ನು ಕಡಿಮೆ ವೆಚ್ಚದಲ್ಲಿ ಒದಗಿಸುವ ಮಹತ್ವದ ಜವಾಬ್ದಾರಿ ಶಿಕ್ಷಣ ಸಂಸ್ಥೆಗಳ ಮೇಲಿದೆ' ಎಂದು ಅವರು ಅಭಿಪ್ರಾಯಪಟ್ಟರು.

'ಕಳೆದ ಐದು ವರ್ಷಗಳ ಅವಧಿಯಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಉತ್ತಮ ಗುಣಮಟ್ಟದ ಉನ್ನತ ಶಿಕ್ಷಣ ಒದಗಿಸುತ್ತಿದೆ. ದೇಶದ ಸಂವಿಧಾನದ ಪೀಠಿಕೆ ಮತ್ತು ಆಶಯಗಳಂತೆ ಮತ್ತು ಇಂದಿನ ವೈಜ್ಞಾನಿಕ ಜಗತ್ತಿಗೆ ಅಗತ್ಯವಿರುವ ಕೌಶಲಗಳ ಬಗ್ಗೆ ತರಬೇತಿ ನೀಡಲಾಗುತ್ತಿದೆ' ಎಂದರು.

ಬೆಂಗಳೂರು ವಿವಿಯಲ್ಲಿ ಗಣರಾಜ್ಯೋತ್ಸವ: ಬೆಂಗಳೂರು ವಿಶ್ವವಿದ್ಯಾಲಯದ ಕೇಂದ್ರ ಕಚೇರಿ ಎದುರು ನಡೆದ ಗಣರಾಜ್ಯೋತ್ಸವದ ಕಾರ್ಯಕ್ರಮದಲ್ಲಿ ಕುಲಪತಿ ಪ್ರೊ. ಎಸ್.ಎಂ. ಜಯಕರ ಅವರು ರಾಷ್ಟ್ರಧ್ವಜಾರೋಹಣ ಮಾಡಿದರು.



ಚಿತ್ರ ಬರೆದ ಚಿಣ್ಣರು

ಗಣರಾಜ್ಯೋತ್ಸವ ಅಂಗವಾಗಿ ಸ್ಪೆಷಲಿಸ್ಟ್ ಹಾಸ್ಪಿಟಲ್ ವತಿಯಿಂದ ಚಿತ್ರಕಲೆ ಸ್ಪರ್ಧೆ ಹಮ್ಮಿಕೊಳ್ಳಲಾಗಿತ್ತು. ವಿಜ್ಞಾನ-ತಂತ್ರಜ್ಞಾನ, ರಕ್ಷಣೆ, ವೈಮಾಂತರಿಕ, ಕ್ರೀಡಾ ಕ್ಷೇತ್ರಗಳಲ್ಲಿ ಭಾರತದ ಸಾಧನೆಯನ್ನು 120ಕ್ಕೂ ಹೆಚ್ಚು ಚಿಣ್ಣರು ಕುಂಚದಲ್ಲಿ ಬಿಡಿಸಿ ಪ್ರದರ್ಶಿಸಿದರು. ಕಲಾವಿದ ಬಾದಲ್ ನಂಜುಂಡಸ್ವಾಮಿ, ಆಸ್ಪತ್ರೆಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಡಾ. ಎ.ಎಂ. ಶಫೀಕ್ ಇದ್ದರು

ಚಿತ್ರಾವಳಿ



ಬ್ರಿಗೇಡ್ ಸೆವೆನ್ ಗಾರ್ಡನ್ಸ್ ಅಪಾರ್ಟ್‌ಮೆಂಟ್ ಸಮುಚ್ಚಯದ ನಿವಾಸಿಗಳು ಸಸಿ ನೆಡುವ ಮೂಲಕ ಗಣರಾಜ್ಯೋತ್ಸವ ಆಚರಿಸಿದರು. ಕರ್ನಲ್ ನರಸಿಂಹ ಅವರು ಸಹಾಯಕ ಸಿಬ್ಬಂದಿಗೆ ಬೆಡ್‌ಶೀಟ್ ವಿತರಿಸಿದರು. ಅಪಾರ್ಟ್‌ಮೆಂಟ್ ಸಮುಚ್ಚಯದ ವ್ಯವಸ್ಥಾಪಕ ಹೊನ್ನಗಂಗಯ್ಯ ಇದ್ದರು



ಗಣರಾಜ್ಯೋತ್ಸವ ಅಂಗವಾಗಿ ಒರಾಯನ್ ಮಾಲ್‌ನಲ್ಲಿ 'ದೇಶಭಕ್ತಿಯ ಹಡಗನ್ನು' ಅನಾವರಣಗೊಳಿಸಲಾಯಿತು

ಚಾಮರಾಜಪೇಟೆ: ಈದ್ಗಾ ಮೈದಾನದಲ್ಲಿ ಧ್ವಜಾರೋಹಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಮರಾಜಪೇಟೆ ಆಟದ ಮೈದಾನದಲ್ಲಿ (ಈದ್ಗಾ) ಗಣರಾಜ್ಯೋತ್ಸವ ಪ್ರಯುಕ್ತ ಬೆಂಗಳೂರು ನಗರ ಜಿಲ್ಲಾಡಳಿತ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಉತ್ತರ ವಲಯ ಉಪ ವಿಭಾಗಾಧಿಕಾರಿ ಎಂ.ಜಿ. ಶಿವಣ್ಣ ಧ್ವಜಾರೋಹಣ ನೆರವೇರಿಸಿದರು.

ಸರ್ಕಾರದ ಸೂಚನೆ ಮೇರೆಗೆ ಬುಧವಾರ ಗಣರಾಜ್ಯೋತ್ಸವ ಆಚರಿಸುವ ತಯಾರಿ ಆರಂಭಿಸಿದ ಜಿಲ್ಲಾಡಳಿತ, ಗುರುವಾರ ಬೆಳಿಗ್ಗೆ ಪೊಲೀಸ್ ಬಂದೋಬಸ್ತ್ ನಡುವೆ ಕಾರ್ಯಕ್ರಮ ನಡೆಸಿತು.

ಬಿಬಿಎಂಪಿ ಶಾಲೆಯ ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ಸಂಸದ ಪಿ.ಸಿ. ಮೋಹನ್, ಶಾಸಕ ಜಮೀರ್ ಅಹಮದ್, ಡಿಸಿಪಿ ಲಕ್ಷ್ಮಣ ನಿಂಬರಗಿ ಭಾಗವಹಿಸಿದ್ದರು.

ಮೈದಾನದಲ್ಲಿ ಒಬ್ಬರು ಡಿಸಿಪಿ, ನಾಲ್ವರು ಎಸಿಪಿ ನೇತೃತ್ವದಲ್ಲಿ 10 ಪಿಐ, 20 ಪಿಎಸ್ಐ, 300 ಸಿಬ್ಬಂದಿ, 6 ಕೆಎಸ್‌ಆರ್‌ಪಿ ತುಕಡಿಯಿಂದ ಬಂದೋಬಸ್ತ್ ಏರ್ಪಡಿಸಲಾಗಿತ್ತು.



ಚಾಮರಾಜಪೇಟೆ ಆಟದ ಮೈದಾನದಲ್ಲಿ ಉತ್ತರ ವಲಯ ಉಪ ವಿಭಾಗಾಧಿಕಾರಿ ಎಂ.ಜಿ. ಶಿವಣ್ಣ ಧ್ವಜಾರೋಹಣ ನೆರವೇರಿಸಿದರು. ಸಂಸದ ಪಿ. ಸಿ. ಮೋಹನ್, ಶಾಸಕ ಜಮೀರ್ ಅಹಮದ್, ಡಿಸಿಪಿ ಲಕ್ಷ್ಮಣ ನಿಂಬರಗಿ ಇದ್ದರು

ಧ್ವಜಾರೋಹಣ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ನಡೆದ 74ನೇ ಗಣರಾಜ್ಯೋತ್ಸವ ದಿನಾಚರಣೆಯ ಅಂಗವಾಗಿ ಆಡಳಿತಾಧಿಕಾರಿ ರಾಕೇಶ್‌ಸಿಂಗ್ ಧ್ವಜಾರೋಹಣ ನೆರವೇರಿಸಿದರು. ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ವಿಶೇಷ ಆಯುಕ್ತರಾದ ಜಯರಾಮ್ ರಾಯಪುರ, ಡಾ. ತ್ರಿಲೋಕ್ ಚಂದ್ರ, ಡಾ. ಹರೀಶ್ ಕುಮಾರ್, ರವೀಂದ್ರ, ಪ್ರೀತಿ ಗೆಹ್ಲೋಟ್, ಉಪ ಆಯುಕ್ತರಾದ ರಾಹುಲ್ ಶರಣಪ್ಪ ಸಂಕನೂರ್ ಇದ್ದರು.

ಕೃಷಿಕ ಸಮಾಜದ ಕಟ್ಟಡ: ಸಮೀಕ್ಷೆಗೆ ನಿರ್ದೇಶನ

ಬೆಂಗಳೂರು: 'ಹಡ್ಸನ್ ವೃತ್ತದಲ್ಲಿರುವ ಕರ್ನಾಟಕ ಪ್ರದೇಶ ಕೃಷಿಕ ಸಮಾಜದ ಕಟ್ಟಡವು (ಹಾಪ್‌ಕಾಮ್ಸ್ ಕಟ್ಟಡ) ಕಬ್ಬನ್ ಪಾರ್ಕ್ ವ್ಯಾಪ್ತಿಯ ಚಕ್ಕುಬಂದಿಗೆ ಒಳಪಡುತ್ತದೆಯೇ ಹೇಗೆ ಎಂಬ ಬಗ್ಗೆ ಸಮೀಕ್ಷೆ ನಡೆಸಿ, ವರದಿ ಸಲ್ಲಿಸಿ' ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

ಈ ಸಂಬಂಧ ಕಬ್ಬನ್ ಪಾರ್ಕ್ ನಡಿಗೆದಾರರ ಸಂಘದ ಅಧ್ಯಕ್ಷ ಎಸ್. ಉಮೇಶ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಹಾಗೂ ನ್ಯಾಯಮೂರ್ತಿ ಅಶೋಕ್ ಎಸ್. ಕಿಣಗಿ ಅವರಿದ್ದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಅರ್ಜಿದಾರರ ವಾದ ಆಲಿಸಿದ ನ್ಯಾಯಪೀಠವು, 'ಲೋಕೋಪಯೋಗಿ ಇಲಾಖೆಯ ಮುಖ್ಯ ಎಂಜಿನಿಯರ್ ಹಾಗೂ ಭೂ ದಾಖಲೆಗಳ ಇಲಾಖೆಯ ಸಹಾಯಕ ನಿರ್ದೇಶಕರು ಜಂಟಿಯಾಗಿ ಫೆಬ್ರುವರಿ 4ರಂದು ಜಂಟಿ ಸಮೀಕ್ಷೆ ನಡೆಸಬೇಕು. ಈ ಸಂದರ್ಭದಲ್ಲಿ ತೋಟಗಾರಿಕೆ ಇಲಾಖೆಯ ನಿರ್ದೇಶಕರು, ಜಂಟಿ ನಿರ್ದೇಶಕರು, ಉಪ ನಿರ್ದೇಶಕರು, ಕಬ್ಬನ್ ಪಾರ್ಕ್ ಪೊಲೀಸ್ ಠಾಣೆಯ ಅಧಿಕಾರಿಗಳು, ಪಶುಸಂಗೋಪನಾ ಇಲಾಖೆ ಕಾರ್ಯದರ್ಶಿಗಳು, ಜಲಮಂಡಳಿ ಅಧಿಕಾರಿಗಳು ಸೇರಿ ಪ್ರಕರಣದಲ್ಲಿ ಕಾಣಿಸಲಾಗಿರುವ ಎಲ್ಲ ಪ್ರತಿವಾದಿಗಳು ಹಾಜರಿರುವಂತೆ ನೋಡಿಕೊಳ್ಳಬೇಕು' ಎಂದು ಆದೇಶಿಸಿದೆ. 'ಸಮೀಕ್ಷೆಯ ವರದಿಯನ್ನು ಫೆಬ್ರುವರಿ 8ರಂದು ನ್ಯಾಯಪೀಠಕ್ಕೆ ಸಲ್ಲಿಸಬೇಕು' ಎಂದು ನಿರ್ದೇಶಿಸಿತಲ್ಲದೆ, ವಿಚಾರಣೆಯನ್ನು ಫೆಬ್ರುವರಿ 10ಕ್ಕೆ ಮುಂದೂಡಿದೆ.

ಮಧ್ಯಂತರ ಅರ್ಜಿ ಸಲ್ಲಿಕೆ: ಇದೇ ವೇಳೆ ಕೃಷಿಕ ಸಮಾಜದ ಪರ ವಕೀಲರು ಮಧ್ಯಂತರ ಅರ್ಜಿ ಸಲ್ಲಿಸಿ, 'ರಾಜ್ಯ ಸರ್ಕಾರವು 1966ರಲ್ಲಿ ಕರ್ನಾಟಕ ಪ್ರದೇಶ ಕೃಷಿಕ ಸಮಾಜಕ್ಕೆ 53,328 ಚದರ ಅಡಿ ಜಮೀನನ್ನು 99 ವರ್ಷಗಳ ಅವಧಿಗೆ ಗುತ್ತಿಗೆ ನೀಡಿದೆ. ಇದರನ್ವಯ ಕೃಷಿಕ ಸಮಾಜ ಆದಾಯ ತೆರಿಗೆ ಪಾವತಿಸುತ್ತಾ ಬರುತ್ತಿದೆ. ರೈತರಿಗೆ ಅನುಕೂಲವಾಗುವಂತಹ ಸೌಲಭ್ಯಗಳನ್ನು ಕಲ್ಪಿಸಲು ಕಾರ್ಯಕ್ರಮ ಹಮ್ಮಿಕೊಳ್ಳುವುದಕ್ಕಾಗಿ ದೊಡ್ಡ ಪ್ರಮಾಣದ ಬಂಡವಾಳ ಹೂಡಿಕೆ ಮಾಡಿ ಇಲ್ಲಿ ಬೃಹತ್ ಕಟ್ಟಡ ನಿರ್ಮಿಸಿದೆ. ಆದರೆ, ನ್ಯಾಯಾಲಯದ ಅನುಮತಿ ಇಲ್ಲದೆ ಕಟ್ಟಡ ಬಳಕೆಗೆ ಅವಕಾಶ ಇಲ್ಲವಾಗಿದ್ದು, ಬಳಕೆಗೆ ಅನುಮತಿ ನೀಡಬೇಕು' ಎಂದು ಕೋರಿದರು.

'ಕರ್ನಾಟಕ ಪ್ರದೇಶ ಕೃಷಿಕ ಸಮಾಜವು ಮೊದಲು ಮೈಸೂರು ಕೃಷಿಕ ಸಮಾಜ ಎಂದಾಗಿತ್ತು. ಇದು ಮೈಸೂರು ಸಹಕಾರ ಸಂಘಗಳ ಕಾಯ್ದೆ ಅಡಿಯಲ್ಲಿ ನೋಂದಣಿಯಾಗಿದೆ. ಈ ಸಂಸ್ಥೆ ರಾಜ್ಯದಲ್ಲಿರುವ ರೈತ ವರ್ಗಕ್ಕೆ ಅಗತ್ಯವಿರುವ ತಾಂತ್ರಿಕ ಸಲಹೆಗಳನ್ನು ನೀಡುತ್ತಿದೆ. ಜತೆಗೆ, ರೈತರಿಗೆ ನೆರವಾಗವಂತಹ ಕೌಶಲ ಹೆಚ್ಚಳಕ್ಕೆ ಶ್ರಮಿಸುತ್ತಿದ್ದು, ಕೃಷಿ ಉತ್ಪನ್ನಗಳಾದ ಹಣ್ಣು ಮತ್ತು ತರಕಾರಿಗಳ ಮಾರಾಟಕ್ಕೆ ವ್ಯವಸ್ಥೆ ಕಲ್ಪಿಸಿದೆ' ಎಂದು ಅವರು ನ್ಯಾಯಪೀಠಕ್ಕೆ ವಿವರಿಸಿದರು.

ಆಕ್ಷೇಪವೇನು?: 'ಉದ್ಯಾನ ಹಾಗೂ ತೋಟಗಳ ಕಾಯ್ದೆಯ ವ್ಯಾಪ್ತಿಗೆ ಬರುವ ಕಬ್ಬನ್ ಪಾರ್ಕ್‌ನಲ್ಲಿ ಯಾವುದೇ ಶಾಶ್ವತ ಕಟ್ಟಡಗಳ ನಿರ್ಮಾಣಕ್ಕೆ ಅವಕಾಶವಿಲ್ಲ. ಹೀಗಿದ್ದರೂ, ಕಟ್ಟಡಗಳನ್ನು ನಿರ್ಮಿಸಲಾಗಿದೆ' ಎಂಬುದು ಅರ್ಜಿದಾರರ ಆಕ್ಷೇಪ.

ಶುಕ್ರವಾರ, ಜನವರಿ 27, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 27 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಅಲೆಮಾರಿ ಸಮುದಾಯಗಳ ವಸತಿ ಯೋಜನೆಗೆ ನಿಗದಿಯಾಗಿದ್ದ ₹ 300 ಕೋಟಿ ವಾಪಸ್

ಸೂರು; ಮತ್ತೊಮ್ಮೆ ತಣ್ಣೀರು

● ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪರಿಶಿಷ್ಟ ಪಂಗಡದಲ್ಲಿನ (ಎಸ್‌ಟಿ) ಅಲೆಮಾರಿ ಸಮುದಾಯಗಳ ಜನರ ವಸತಿ ಯೋಜನೆಗೆ ಮೀಸಲಿಟ್ಟಿದ್ದ ₹ 300 ಕೋಟಿ ಅನುದಾನವನ್ನು ಇತರ ವಸತಿ ಯೋಜನೆಗೆ ವರ್ಗಾವಣೆ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಇದೇ ಯೋಜನೆಯಡಿ 2021- 22ನೇ ಸಾಲಿನಲ್ಲಿ ಮೀಸಲಿಟ್ಟಿದ್ದ ₹ 250 ಕೋಟಿಯನ್ನು ಈ ಹಿಂದೆಯೂ ಸರ್ಕಾರ ವಾಪಸ್ ಪಡೆದಿತ್ತು.

ಅಲೆಮಾರಿ, ಅರೆ ಅಲೆಮಾರಿ ಸಮುದಾಯಗಳಿಗೆ ಆದ್ಯತೆ ಮೇರೆಗೆ ಮನೆ ನಿರ್ಮಿಸಿ ಕೊಡುವುದಾಗಿ 2022-23ನೇ ಸಾಲಿನ ಬಜೆಟ್‌ನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದ್ದರು. ಬಜೆಟ್ ಘೋಷಣೆಯಂತೆ ₹ 300 ಕೋಟಿ ಅನುದಾನ ನಿಗದಿಪಡಿಸಿ ಸಮಾಜ ಕಲ್ಯಾಣ ಇಲಾಖೆ 2022 ಏಪ್ರಿಲ್ 18ರಂದು ಆದೇಶ ಹೊರಡಿಸಿತ್ತು.

‘ಊಟ ಕೊಟ್ಟು ತಟ್ಟೆ ಕಿತ್ತುಕೊಂಡರು’

‘ಕೊರಮ, ಕೊರಚ, ಹಂದಿ ಜೋಗಿ, ಸುಡುಗಾಡು ಸಿದ್ಧ, ಚನ್ನದಾಸರು, ಹೊಲೆಯ ದಾಸರು, ಮಾಲದಾಸರು, ಬುಡುಗ ಜಂಗಮ, ದೊಂಬರು, ಹಕ್ಕಿಪಿಕ್ಕಿ, ಇರುಳಿಗ, ಮೇದ, ಗೊಂಡ ಸೇರಿ 73 ಅಲೆಮಾರಿ ಸಮುದಾಯಗಳಿಗೆ ಅನ್ಯಾಯವಾಗಿದೆ. ಊಟ ಕೊಟ್ಟು ತಟ್ಟೆ ಕಿತ್ತುಕೊಳ್ಳುವ ಕೆಲಸವನ್ನು ಸರ್ಕಾರ ಮಾಡಿದೆ’ ಎಂದು ಎಸ್‌ಸಿ, ಎಸ್‌ಟಿ ಅಲೆಮಾರಿ ವಿಮುಕ್ತ ಬುಡಕಟ್ಟು ಮಹಾಸಭಾದ ಪ್ರಧಾನ ಕಾರ್ಯದರ್ಶಿ ಕಿರಣ್‌ಕುಮಾರ್ ಕೊತ್ತಗೆರೆ ಬೇಸರ ವ್ಯಕ್ತಪಡಿಸಿದರು.

‘ಇನ್ನೊಂದು ವಾರದಲ್ಲಿ ಆದೇಶವನ್ನು ವಾಪಸು ಪಡೆದು ಅನುದಾನ ಮರಳಿ ನೀಡಬೇಕು. ಇಲ್ಲದಿದ್ದರೆ ಈ ಸಮುದಾಯಗಳು ಸರ್ಕಾರದ ವಿರುದ್ಧ ಹೋರಾಟಕ್ಕೆ ಸಜ್ಜಾಗಲಿವೆ’ ಎಂದು ತಿಳಿಸಿದರು.

ಪ್ರಜಾವಾಣಿ ವಿಶೇಷ

ರಾಜೀವ್ ಗಾಂಧಿ ವಸತಿ ಯೋಜನೆಯಡಿ ₹ 2 ಲಕ್ಷ ಘಟಕ ವೆಚ್ಚದಲ್ಲಿ ಮನೆಗಳನ್ನು ನಿರ್ಮಿಸಲಾಗುತ್ತಿದೆ. ಅದರ ಜತೆಗೆ ಹೆಚ್ಚುವರಿಯಾಗಿ ₹ 2 ಲಕ್ಷ ನೀಡಿ ಒಟ್ಟು ₹ 4 ಲಕ್ಷ ಘಟಕ ವೆಚ್ಚದಲ್ಲಿ ಮನೆ ನಿರ್ಮಿಸಲು ₹ 300 ಕೋಟಿ ಮೀಸಲಿಡಲಾಗಿತ್ತು. ಈ ಸಂಬಂಧ ಮನೆ ಮಂಜೂರಾತಿ ಮತ್ತು ಆದೇಶ ಪತ್ರಗಳನ್ನೂ ಶಿವಮೊಗ್ಗದಲ್ಲಿ ಸೆ. 3ರಂದು ಸಾಂಕೇತಿಕವಾಗಿ ಸರ್ಕಾರ ವಿತರಣೆ ಮಾಡಿತ್ತು.


ಆದರೆ, ಜ. 21ರಂದು ಆರ್ಥಿಕ ಇಲಾಖೆ ಟಿಪ್ಪಣಿಯೊಂದನ್ನು ಹೊರಡಿಸಿದ್ದು, ಅಲೆಮಾರಿಗಳ ವಸತಿ ಯೋಜನೆಗೆ ಬಿಡುಗಡೆ ಮಾಡಿರುವ ₹ 300 ಕೋಟಿ ಅನುದಾನವನ್ನು ಅಂಬೇಡ್ಕರ್ ವಸತಿ ಯೋಜನೆಯಡಿ ಈಗಾಗಲೇ ಮಂಜೂರಾತಿ ನೀಡಿರುವ ಮನೆಗಳ ಬಾಕಿ ಕಂತುಗಳಿಗೆ ಬಳಸಿಕೊಳ್ಳಲು ಸೂಚನೆ ನೀಡಿದೆ. ಸಮಾಜ ಕಲ್ಯಾಣ ಇಲಾಖೆ ಪ್ರಸ್ತಾಪಿಸಿರುವ ಅಲೆಮಾರಿ ಫಲಾನುಭವಿಗಳನ್ನು ಹೊಸದಾಗಿ ಮಂಜೂರು ಮಾಡಿದ 5 ಲಕ್ಷ ಮನೆ ನಿರ್ಮಾಣ ಯೋಜನೆಯಲ್ಲಿ ಪರಿಗಣಿಸಬಹುದು ಎಂದು ತಿಳಿಸಿದೆ.

> **ವಸತಿ ಉದ್ದೇಶಕ್ಕೆ ಸಮಾಜ ಕಲ್ಯಾಣ ಇಲಾಖೆ ನಿಗದಿ ಮಾಡಿರುವ ಅನುದಾನವನ್ನು ಬೇರೆ ಉದ್ದೇಶಕ್ಕೆ ಬಳಕೆ ಮಾಡಲು ಸಾಧ್ಯವಿಲ್ಲ. ಆರ್ಥಿಕ ಇಲಾಖೆಗೆ ಪತ್ರ ಬರೆದು ಹಣ ವಾಪಸ್ ತರಿಸುತ್ತೇವೆ**
> **ಕೋಟ ಶ್ರೀನಿವಾಸ ಪೂಜಾರಿ**
> ಸಮಾಜ ಕಲ್ಯಾಣ ಸಚಿವ

‘2021-22ನೇ ಸಾಲಿನಲ್ಲಿ ನಿಗದಿ ಮಾಡಿದ್ದ ₹ 250 ಕೋಟಿಯನ್ನು ಆರ್ಥಿಕ ಇಲಾಖೆ ಇದೇ ರೀತಿ 2022ರ ಜ. 21ರಂದು ವರ್ಗಾಯಿಸಿ ಆದೇಶಿಸಿತ್ತು. ಈ ವರ್ಷ ಕೂಡ ಅದೇ ದಿನಾಂಕದಂದು ₹ 300 ಕೋಟಿ ಅನುದಾನವನ್ನು ವರ್ಗಾಯಿಸಿದೆ. ಅಲೆಮಾರಿ ಸಮುದಾಯಗಳ ಸ್ವಂತ ಸೂರಿನ ಕನಸು ಮತ್ತೊಮ್ಮೆ ಭಗ್ನವಾಗಿದೆ’ ಎಂದು ಅಲೆಮಾರಿ ಸಮುದಾಯಗಳ ಮುಖಂಡರು ಬೇಸರ ವ್ಯಕ್ತಪಡಿಸಿದರು.

‘ಅಂಬೇಡ್ಕರ್ ವಸತಿ ಯೋಜನೆಯಡಿ ಗ್ರಾಮ ಪಂಚಾಯಿತಿಗಳ ಮೂಲಕ ನೀಡುವ ಮನೆಗಳನ್ನು ಈ ಅತಿಸೂಕ್ಷ್ಮ ಸಮುದಾಯಗಳು ಪಡೆಯಲು ಸಾಧ್ಯವಿಲ್ಲ. ಅಲ್ಲದೇ, 14 ರೀತಿಯ ದಾಖಲೆಗಳನ್ನು ಒದಗಿಸಿ ಕೊಡಬೇಕು. ಅಷ್ಟು ದಾಖಲೆ ನೀಡುವುದು ಈ ಸಮುದಾಯಕ್ಕೆ ಕಷ್ಟ. ಆದ್ದರಿಂದ ಸಮಾಜ ಕಲ್ಯಾಣ ಇಲಾಖೆಯಡಿ ಅಂಬೇಡ್ಕರ್ ಅಭಿವೃದ್ಧಿ ನಿಗಮ ಮತ್ತು ವಾಲ್ಮೀಕಿ ಅಭಿವೃದ್ಧಿ ನಿಗಮಗಳ ಮೂಲಕ ಅರ್ಜಿ ಆಹ್ವಾನಿಸಲಾಗಿತ್ತು. 14 ಸಾವಿರ ಅಲೆಮಾರಿ ಕುಟುಂಬಗಳು ಮನೆ ಬಯಸಿ ಅರ್ಜಿ ಸಲ್ಲಿಸಿವೆ’ ಎಂದು ವಿವರಿಸಿದರು.

ಬೋನಿಗೆ ಬಿದ್ದ ಚಿರತೆ ಕೊಲ್ಲಲು ಜನರ ಪಟ್ಟು



ತಿ.ನರಸೀಪುರ (ಮೈಸೂರು ಜಿಲ್ಲೆ): ತಾಲ್ಲೂಕಿನ ಸೋಸಲೆ ಹೋಬಳಿಯ ಹೊರಳಹಳ್ಳಿ ಮತ್ತು ನೆರಗ್ಯಾತನಹಳ್ಳಿ ಗ್ರಾಮಗಳ ನಡುವಿನ ತೋಟದ ಸಮೀಪ ಅರಣ್ಯ ಇಲಾಖೆ ಇಟ್ಟಿದ್ದ ಬೋನಿಗೆ (ತುಮಕೂರು ಕೇಜ್) ಚಿರತೆ ಗುರುವಾರ ಬೆಳಗಿನ ಜಾವ ಬಿದ್ದಿದೆ. ಇದರೊಂದಿಗೆ ಆ ಭಾಗದ ಜನರು ನಿಟ್ಟುಸಿರು ಬಿಟ್ಟಿದ್ದಾರೆ.

ಚಿರತೆ ನೋಡಲು ಸುತ್ತ ಮುತ್ತಲ ಗ್ರಾಮಸ್ಥರು ಜಮಾಯಿಸಿದ್ದರು. ಇದರಿಂದಾಗಿ ತೋಟದ ಬಳಿ ಜನಜಂಗುಳಿ ಕಂಡುಬಂತು.

ಚಿರತೆ ಸ್ಥಳಾಂತರಿಸಲು ಅರಣ್ಯ ಇಲಾಖೆ ಅಧಿಕಾರಿಗಳು ಪ್ರಯತ್ನಿಸಿದಾಗ ಗ್ರಾಮಸ್ಥರು ತಡೆದರು. ‘ಚಿರತೆಯನ್ನು ಇಲ್ಲೇ ಕೊಲ್ಲಬೇಕು’ ಎಂದು ಪಟ್ಟು ಹಿಡಿದರು.

4ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ





ನೌಕಾಪಡೆಯ ತುಕಡಿಯನ್ನು ಮುನ್ನಡೆಸಿದ ಕರ್ನಾಟಕದ ದಿಶಾ ಅಮೃತ್ –ಪಿಟಿಐ ಚಿತ್ರ

ಮೂಗಿನ ಮೂಲಕ ಹಾಕುವ ಕೋವಿಡ್ ಲಸಿಕೆ ಬಿಡುಗಡೆ

ನವದೆಹಲಿ (ಪಿಟಿಐ): ಭಾರತ್ ಬಯೋಟೆಕ್ ಉತ್ಪಾದಿಸಿರುವ ಮೂಗಿನ ಮೂಲಕ ಹಾಕುವ ಕೋವಿಡ್ ಲಸಿಕೆ ‘ಇನ್‌ಕೋವ್ಯಾಕ್’ ಅನ್ನು ಕೇಂದ್ರ ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯಾ ಮತ್ತು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಜಿತೇಂದ್ರ ಸಿಂಗ್ ಅವರು ಗುರುವಾರ ಇಲ್ಲಿ ಬಿಡುಗಡೆಗೊಳಿಸಿದರು.

ಮಾರುಕಟ್ಟೆಯಲ್ಲಿ ಇನ್‌ಕೋವ್ಯಾಕ್‌ಗೆ ₹800 ಮತ್ತು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಮೂಲಕ ಪೂರೈಕೆಯಾಗುವ ಲಸಿಕೆಗೆ ₹325 ನಿಗದಿಪಡಿಸಲಾಗಿದೆ ಎಂದು ಈ ಹಿಂದೆ ಭಾರತ್ ಬಯೋಟೆಕ್ ಹೇಳಿಕೆಯಲ್ಲಿ ತಿಳಿಸಿತ್ತು.

ರಾಷ್ಟ್ರ ರಾಜಧಾನಿಯಲ್ಲಿ 74ನೇ ಗಣರಾಜ್ಯೋತ್ಸವ ಸಡಗರ

ಕರ್ತವ್ಯಪಥ: ನಾರಿಶಕ್ತಿ ವೈಭವ

ನವದೆಹಲಿ (ಪಿಟಿಐ): ರಾಷ್ಟ್ರ ರಾಜಧಾನಿಯಲ್ಲಿ ಗುರುವಾರ 74ನೇ ಗಣರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು. ಕರ್ತವ್ಯಪಥದಲ್ಲಿ ಹಮ್ಮಿಕೊಳ್ಳಲಾಗಿದ್ದ ವರ್ಣರಂಜಿತ ಕಾರ್ಯಕ್ರಮದಲ್ಲಿ ನಾರಿಶಕ್ತಿಯ ಜೊತೆಗೆ ರಕ್ಷಣಾ ಕ್ಷೇತ್ರದಲ್ಲಿ ದೇಶವು ಸಾಧಿಸಿರುವ ಆತ್ಮನಿರ್ಭರತೆಯ ವಿರಾಟ ರೂಪ ಅನಾವರಣಗೊಂಡಿತು.

ಸೈನಿಕರಿಂದ ಮೂಡಿಬಂದ ಮೈನವಿರೇಳಿಸುವ ಸಾಹಸ ಪ್ರದರ್ಶನಗಳನ್ನು ಕಂಡು ನೆರೆದಿದ್ದವರು ಪುಳಕಿತರಾದರು. ಸೇನಾಪಡೆ, ವಾಯುಪಡೆ, ನೌಕಾಪಡೆ ಹಾಗೂ ಎನ್‌ಸಿಸಿಯವರು ನಡೆಸಿದ ಪಥಸಂಚಲನ ನೋಡುಗರ ಮನಸೆಳೆಯಿತು. ನಾರಿಶಕ್ತಿ ಸಾರುವ ಕರ್ನಾಟಕ ಸಹಿತ ವಿವಿಧ ರಾಜ್ಯಗಳ ಸ್ತಬ್ಧಚಿತ್ರಗಳು ಕಾರ್ಯಕ್ರಮಕ್ಕೆ ಮೆರುಗು ನೀಡಿದವು. ದೇಶದ ವೈವಿಧ್ಯಮಯ ಸಂಸ್ಕೃತಿ ಹಾಗೂ ಪರಂಪರೆಯನ್ನು ಕಣ್ತುಂಬಿಕೊಳ್ಳುವ ಅವಕಾಶವೂ ನೆರೆದಿದ್ದವರಿಗೆ ದೊರೆಯಿತು.

‘ನಾರಿಶಕ್ತಿ’ಯ ಧ್ಯೇಯದೊಂದಿಗೆ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಹಲವು ಗಣ್ಯರು ಸಾಕ್ಷಿಯಾದರು. ಈಜಿಪ್ಟ್ ಅಧ್ಯಕ್ಷ ಅಬ್ದೆಲ್ ಫತ್ತಾಹ್ ಅಲ್ ಸಿಸಿ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಈ ದೇಶದ ಅಧ್ಯಕ್ಷರೊಬ್ಬರು ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದು ಇದೇ ಮೊದಲು. ಈಜಿಪ್ಟ್‌ನ ಸೇನಾ ತುಕಡಿಯವರೂ ಪಥಸಂಚಲನದಲ್ಲಿ ಪಾಲ್ಗೊಳ್ಳುವ ಮೂಲಕ ಸಮಾರಂಭದ ಮೆರುಗು ಹೆಚ್ಚಿಸಿದರು. 144 ಮಂದಿ ಸೈನಿಕರಿದ್ದ ತುಕಡಿಯನ್ನು ಕರ್ನಲ್ ಮಹಮೌದ್ ಮೊಹಮ್ಮದ್ ಅಬ್ದೆಲ್‌ಫತ್ತಾ ಅಲ್‌ಖರಸವಿ ಅವರು ಮುನ್ನಡೆಸಿದರು.

ಬೆಳಿಗ್ಗೆ 10.30ರ ಸುಮಾರಿಗೆ ಆರಂಭವಾದ ಸಮಾರಂಭವು ಮಧ್ಯಾಹ್ನದವರೆಗೂ ನಡೆಯಿತು. ಕಾರ್ಯಕ್ರಮಕ್ಕೂ ಮುನ್ನ ರಾಷ್ಟ್ರೀಯ ಯುದ್ಧ ಸ್ಮಾರಕಕ್ಕೆ ಭೇಟಿ ನೀಡಿದ್ದ ಪ್ರಧಾನಿ ಮೋದಿ ಅವರು ಹುತಾತ್ಮ ಯೋಧರಿಗೆ ನಮನ ಸಲ್ಲಿಸಿದರು.

4ನೇ ಪುಟ ನೋಡಿ

ಮಹಿಳೆಯರದ್ದೇ ಮುಂದಾಳತ್ವ

ಮಂಗಳೂರಿನ ದಿಶಾ ಅಮೃತ್ ಅವರು ಪಥಸಂಚಲನದಲ್ಲಿ ನೌಕಾಪಡೆಯ ತುಕಡಿಯನ್ನು ಮುನ್ನಡೆಸಿದರು.

ಅಂಡಮಾನ್ ನಿಕೋಬಾರ್‌ನಲ್ಲಿ ಲೆಫ್ಟಿನೆಂಟ್ ಕಮಾಂಡರ್ ಆಗಿರುವ ದಿಶಾ ಅವರು 144 ಮಂದಿ ಯುವ ಸೈನಿಕರನ್ನೊಳಗೊಂಡ ತುಕಡಿಯ ಸಾರಥ್ಯ ವಹಿಸಿದ್ದರು.

ಲೆಫ್ಟಿನೆಂಟ್ ಚೇತನಾ ಶರ್ಮಾ ಅವರು ಆಕಾಶ್ ಕ್ಷಿಪಣಿ ವ್ಯವಸ್ಥೆಯ ಪ್ರದರ್ಶನದ ವೇಳೆ ಟ್ಯಾಂಕರ್ ಒಂದರ ಮುಂದಾಳತ್ವ ವಹಿಸಿದ್ದರು. ಸ್ಕ್ವಾಡ್ರನ್ ಲೀಡರ್ ಸಿಂಧು ರೆಡ್ಡಿ ಅವರು ವಾಯುಪಡೆಯ ತುಕಡಿಯ ನೇತೃತ್ವ ವಹಿಸಿದ್ದರು.

ಶ್ರಮಯೋಗಿಗಳಿಗೆ ಆಹ್ವಾನ

ಕರ್ತವ್ಯಪಥದ ಪುನರ್ ಅಭಿವೃದ್ಧಿ ಹಾಗೂ ಹೊಸ ಸಂಸತ್ ಭವನ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದ ‘ಶ್ರಮ ಯೋಗಿ’ಗಳನ್ನು ಈ ಬಾರಿಯ ಗಣರಾಜ್ಯೋತ್ಸವದ ಪರೇಡ್ ವೀಕ್ಷಣೆಗೆ ಆಹ್ವಾನಿಸಲಾಗಿತ್ತು. ಕರ್ತವ್ಯಪಥದಲ್ಲಿನ ಹಾಲು, ತರಕಾರಿ ಮಾರಾಟಗಾರರು ಹಾಗೂ ಬೀದಿ ಬದಿ ವ್ಯಾಪಾರಿಗಳಿಗೂ ಆಹ್ವಾನ ನೀಡಲಾಗಿತ್ತು. ಇವರೆಲ್ಲರೂ ಪ್ರೇಕ್ಷಕರ ಗ್ಯಾಲರಿಯ ಮೊದಲ ಸಾಲಿನಲ್ಲಿ ಕುಳಿತಿದ್ದರು.



ಅಕ್ರಮವಾಗಿ ಆಸ್ಪತ್ರೆಯಲ್ಲೇ ಇರುವ ಗುಣಮುಖರಾದ ರೋಗಿಗಳು: ಎನ್‌ಎಚ್‌ಆರ್‌ಸಿ

ಮಾನಸಿಕ ಆರೋಗ್ಯ ಕೇಂದ್ರ –ಸ್ಥಿತಿ ಶೋಚನೀಯ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದಾದ್ಯಂತ ಸರ್ಕಾರ ನಡೆಸುತ್ತಿರುವ 46 ಮಾನಸಿಕ ಆರೋಗ್ಯ ಕೇಂದ್ರಗಳು ಶೋಚನೀಯ ಸ್ಥಿತಿಯಲ್ಲಿವೆ. ಅಲ್ಲಿ ಅಗತ್ಯಕ್ಕೆ ತಕ್ಕಷ್ಟು ವೈದ್ಯರಿಲ್ಲ ಮತ್ತು ಗುಣಮುಖರಾದ ರೋಗಿಗಳನ್ನು ಅಕ್ರಮವಾಗಿ ಆಸ್ಪತ್ರೆಯಲ್ಲೇ ಇರಿಸಿಕೊಳ್ಳಲಾಗುತ್ತಿದೆ ಎಂದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ (ಎನ್‌ಎಚ್‌ಆರ್‌ಸಿ) ಹೇಳಿದೆ.

ಗ್ವಾಲಿಯರ್, ಆಗ್ರಾ ಮತ್ತು ರಾಂಚಿಯಲ್ಲಿನ ಸರ್ಕಾರದ ನಾಲ್ಕು ಮಾನಸಿಕ ಆರೋಗ್ಯ ಕೇಂದ್ರ/ ಆಸ್ಪತ್ರೆಗಳಿಗೆ ಅಧಿಕಾರಿಗಳು ಭೇಟಿ ನೀಡಿದ್ದು, ಉಳಿದ 42 ಕೇಂದ್ರಗಳಿಂದ ವಿಶೇಷ ವರದಿಗಾರರಿಂದ ವರದಿ ತರಿಸಿಕೊಂಡ ನಂತರ ಈ ಮಾಹಿತಿಯನ್ನು ಬಹಿರಂಗ ಮಾಡಿದೆ.

‘ಅಂತರರಾಷ್ಟ್ರೀಯ ಒಡಂಬಡಿಕೆಗಳು ಮತ್ತು ಮಾನಸಿಕ ಆರೋಗ್ಯ ಕಾಯ್ದೆ 2017ರ ಅಡಿಯಲ್ಲಿ ರಾಜ್ಯ ಸರ್ಕಾರಗಳು ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸುವಲ್ಲಿ ವಿಫಲವಾಗಿವೆ ಮತ್ತು ಗುಣಮುಖರಾದ ವ್ಯಕ್ತಿಗಳನ್ನು ಸಮಾಜ ಮತ್ತು ಕುಟುಂಬದೊಂದಿಗೆ ಮರುಸಂಘಟಿಸಲು ವಿಫಲವಾಗಿದೆ’ ಎಂದು ಆಯೋಗ ಆರೋಪಿಸಿದೆ.

‘ಮಾನಸಿಕ ಅಸ್ವಸ್ಥನಾದ ವ್ಯಕ್ತಿಯು ಯಾವುದೇ ಅಡೆತಡೆ ಇಲ್ಲದೇ ಸಮುದಾಯದ ಹಕ್ಕನ್ನು ಚಲಾಯಿಸಬಹುದು ಎಂಬುದನ್ನು ದೃಢಪಡಿಸಲು ಯಾವುದೇ ಸಂಸ್ಥೆಯು ಪರಿಣಾಮಕಾರಿಯಾಗಿ ಮತ್ತು ದೀರ್ಘಕಾಲದ ಕ್ರಮ ಕೈಗೊಂಡಿಲ್ಲ. ಒಬ್ಬ ವ್ಯಕ್ತಿ ಮಾನಸಿಕ ಅಸ್ವಸ್ಥತೆಯಿಂದ ಚೇತರಿಸಿಕೊಂಡ ನಂತರವೂ ಅವರನ್ನು ಸಮಾಜದ ಜತೆ ಬದುಕುವ ಅಥವಾ ಕುಟುಂಬದೊಂದಿಗೆ ಮತ್ತೆ ಒಂದಾಗಲು ಅವಕಾಶ ನೀಡದೆ ಇರುವುದು ಹೆಚ್ಚು ಗಾಸಿ ಮಾಡುತ್ತಿದೆ. ಇದು ಸಂವಿಧಾನದ 21ನೇ ವಿಧಿಯ ಅಡಿಯಲ್ಲಿ ಅಸಾಂವಿಧಾನಿಕವಾಗಿದೆ. ಭಾರತವು ಅಂಗೀಕರಿಸಿದ ಅಂಗವಿಕಲರ ಹಕ್ಕುಗಳಿಗೆ ಸಂಬಂಧಿಸಿದ ವಿವಿಧ ಅಂತರರಾಷ್ಟ್ರೀಯ ಒಪ್ಪಂದಗಳ ಅಡಿಯಲ್ಲಿ ಜವಾಬ್ದಾರಿ ನಿರ್ವಹಿಸುವಲ್ಲಿ ರಾಜ್ಯ ಸರ್ಕಾರಗಳು ಸೋತಿವೆ’ ಎಂದು ಆಯೋಗ ಹೇಳಿದೆ.

ಮಾನಸಿಕ ಆರೋಗ್ಯ ಕಾಯ್ದೆಯಡಿ ಇದೆ ಬೆಂಬಲ: ಮಾನಸಿಕ ಅಸ್ವಸ್ಥರು ತಮ್ಮ ಕುಟುಂಬ ಅಥವಾ ಸಂಬಂಧಿಕರೊಂದಿಗೆ ವಾಸಿಸಲು ಸಾಧ್ಯವಾಗದಿದ್ದಲ್ಲಿ ಅಥವಾ ಮಾನಸಿಕ ಅಸ್ವಸ್ಥರನ್ನು ಅವರ ಕುಟುಂಬ ಮತ್ತು ಸಂಬಂಧಿಕರು ಕೈಬಿಟ್ಟರೆ, ಕಾನೂನು ನೆರವು ಸೇರಿದಂತೆ ಕುಟುಂಬದವರೊಂದಿಗೆ ವಾಸಿಸುವ ಹಕ್ಕನ್ನು ಚಲಾಯಿಸಲು ಅನುಕೂಲವಾಗುವಂತೆ ಸರ್ಕಾರವು ಸೂಕ್ತ ಬೆಂಬಲವನ್ನು ನೀಡಬೇಕು ಎಂದು ಮಾನಸಿಕ ಆರೋಗ್ಯ ಕಾಯ್ದೆಯಲ್ಲಿ ಹೇಳಲಾಗಿದೆ ಎಂದು ಆಯೋಗ ಮಾಹಿತಿ ನೀಡಿದೆ.

ವರದಿ ಕೇಳಿರುವ ಆಯೋಗ

ಕೇಂದ್ರ ಆರೋಗ್ಯ ಕಾರ್ಯದರ್ಶಿ, ಆರೋಗ್ಯ ಸೇವೆಗಳ ಮಹಾನಿರ್ದೇಶಕರು, ರಾಜ್ಯಗಳ ಮುಖ್ಯ ಕಾರ್ಯದರ್ಶಿ ಮತ್ತು ಪ್ರಧಾನ ಕಾರ್ಯದರ್ಶಿ (ಆರೋಗ್ಯ), ಪೊಲೀಸ್ ಮಹಾನಿರ್ದೇಶಕರು, ಎಲ್ಲ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಮಹಾನಗರಗಳ ಪೊಲೀಸ್ ಕಮಿಷನರ್ ಮತ್ತು ನಿರ್ದೇಶಕರಿಂದ ಎನ್‌ಎಚ್‌ಆರ್‌ಸಿ ವರದಿ ಕೇಳಿದೆ.

ಎಲ್ಲ 46 ಕೇಂದ್ರಗಳಲ್ಲಿ ಗುಣಮುಖರಾದ ರೋಗಿಗಳ ಸ್ವಾತಂತ್ರ್ಯವನ್ನು ಮೊಟಕುಗೊಳಿಸಿ, ಅವರನ್ನು ಆಸ್ಪತ್ರೆಗಳಲ್ಲಿ ಹೇಗೆ ಅಕ್ರಮವಾಗಿ ಇರಿಸಲಾಗುತ್ತಿದೆ ಎಂಬುದಕ್ಕೆ ಕಾರಣಗಳನ್ನು ನೀಡುವಂತೆ ಸೂಚಿಸಲಾಗಿದೆ.

ಬೆಂಗಳೂರು ನಗರ

ಶುಕ್ರವಾರದ ಉಷ್ಣಾಂಶ 30° ಗರಿಷ್ಠ 15° ಕನಿಷ್ಠ

ಹವಾಮಾನ ಮುನ್ಸೂಚನೆ
ಬೆಳಿಗ್ಗೆ ಮಂಜು ಕವಿದ ವಾತಾವರಣ. ನಂತರ ಶುಭ್ರ ಆಕಾಶ

ಹವಾಮಾನ	ಶನಿವಾರ	ಭಾನುವಾರ	ಸೋಮವಾರ
	29° 16°	29° 15°	28° 16°

‘ರಾಮನ ಹೆಸರು ಹೇಳಿದರೆ ಕಾಂಗ್ರೆಸ್ಸಿಗೆ ನಡುಕ’

ಪ್ರಜಾವಾಣಿ ವಾರ್ತೆ

ರಾಮನಗರ: ಓಲೈಕೆ ರಾಜಕಾರಣ ಮಾಡುತ್ತಿರುವ ಕಾಂಗ್ರೆಸ್ಸಿಗೆ ಶ್ರೀರಾಮನ ಹೆಸರು ಕೇಳಿದರೆ ನಡುಕ ಶುರುವಾಗುತ್ತದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಲೇವಡಿ ಮಾಡಿದರು.

ಗುರುವಾರ ಇಲ್ಲಿ ಪತ್ರಕರ್ತರ ಜೊತೆ ಮಾತನಾಡಿದ ಅವರು "ಮೊದಲು ಕ್ಲೋಸ್‌ ಪೇಟೆ ಆಗಿದ್ದ ರಾಮನಗರಕ್ಕೆ ಈಗಿನ ಹೆಸರು ಬರಲು ಶ್ರೀರಾಮನೇ ಕಾರಣ. ಹೀಗಾಗಿ ಇಲ್ಲಿನ ರಾಮದೇವರ ಬೆಟ್ಟವನ್ನು ದಕ್ಷಿಣದ ಅಯೋಧ್ಯೆಯಾಗಿ ಬೆಳೆಸಲು ತೀರ್ಮಾನ ಮಾಡಲಾಗಿದೆ. ಡಿಪಿಆರ್‌ಗೆ ಸರ್ಕಾರ ಸೂಚಿಸಿದೆ’ ಎಂದರು.

"ಕಾಂಗ್ರೆಸ್ಸಿನವರು ರಾಮನನ್ನು ನೆನಪಿಸಿಕೊಂಡು, ಗೌರವಿಸಿದ ನಿದರ್ಶನವೇ ಇಲ್ಲ. ಇಲ್ಲಿಯ ರಾಮದುರ್ಗವನ್ನು ಹಿಂದೆ ನಾಡಪ್ರಭು ಕೆಂಪೇಗೌಡರು ಅಭಿವೃದ್ಧಿ ಪಡಿಸಿದ್ದರು. ಶ್ರೀರಾಮನು ಅಯೋಧ್ಯೆಯನ್ನು ಹೊರತುಪಡಿಸಿದರೆ ಹೆಚ್ಚು ಕಾಲ ಓಡಾಡಿದ್ದೇ ಇಂದಿನ ಕರ್ನಾಟಕದಲ್ಲಿ. ಇದನ್ನು ಕಾಂಗ್ರೆಸ್ಸಿಗರು ಮೊದಲು ಅರಿಯಬೇಕು ಎಂದು ಅವರು ನುಡಿದರು.

ಮಾಜಿ ಸಚಿವ ರಮೇಶ್ ಜಾರಕಿಹೊಳಿ ತಮ್ಮ ವಿರುದ್ಧದ ಸಿ.ಡಿ. ಪ್ರಕರಣ ಕುರಿತು ಸಿಬಿಐ ತನಿಖೆಗೆ ಮನವಿ ಮಾಡಿರುವುದರಲ್ಲಿ ತಪ್ಪಿಲ್ಲ. ಸಿ.ಡಿ. ಇಟ್ಟುಕೊಂಡು ಬ್ಲ್ಯಾಕ್ ಮೇಲ್ ರಾಜಕಾರಣ ಮಾಡುವವರಿಗೆ ಇದರಿಂದ ಬುದ್ಧಿ ಕಲಿಸಿದಂತೆ ಆಗುತ್ತದೆ. ಇದರಿಂದ ಸತ್ಯಾಂಶ ಹೊರಬರಲಿದೆ ಎಂದು ಅವರು ಪ್ರತಿಪಾದಿಸಿದರು.

ನಗರದಲ್ಲಿ ಇಂದು

ವಿಜ್ಞಾನ ಮೇಳ-2023ರ ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಕೋಟ ಶ್ರೀನಿವಾಸ ಪೂಜಾರಿ, ಬಿ.ಶ್ರೀರಾಮುಲು, ಅಧ್ಯಕ್ಷತೆ : ಡಾ. ಸಿ.ಎನ್. ಅಶ್ವತ್ಥನಾರಾಯಣ, ಸ್ಥಳ: ತ್ರಿಪುರವಾಸಿನಿ, ಅರಮನೆ ಮೈದಾನ, ಬೆಳಿಗ್ಗೆ 9.30

‘ಕಂಪ್ಯೂಟಿಂಗ್, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್‌ನಲ್ಲಿ ನಾವೀನ್ಯತೆಯ ತಂತ್ರಜ್ಞಾನಗಳು’ ಕುರಿತು ವಿಚಾರಸಂಕಿರಣ: ಅತಿಥಿಗಳು: ಅಲೋಕನಾಥ್ ಡೆ, ಸುಭಾಸ್ ಮುಖ್ಯೋಪಾಧ್ಯಾಯ, ಪೆತೂರು ರಾಜ್ ಚೆಲ್ಲಯ್ಯ, ಅಧ್ಯಕ್ಷತೆ: ನಾರಾಯಣ ರಾವ್ ಆರ್. ಮಾನ್ಯ, ಆಯೋಜನೆ ಮತ್ತು ಸ್ಥಳ: ಬಿಎನ್‌.ಎಂ. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬನಶಂಕರಿ 2ನೇ ಹಂತ, ಬೆಳಿಗ್ಗೆ 10

ಗಣರಾಜ್ಯೋತ್ಸವ ದಿನಾಚರಣೆ, ಕೆ. ಸುಭಾಷ್ ಆಳ್ವ ಸ್ಮಾರಕ ಸಾಂಸ್ಕೃತಿಕ ಕಾರ್ಯಕ್ರಮಗಳು, ನೇತಾಜಿ ಸುಭಾಷ್ ಚಂದ್ರ ಬೋಸ್ ದತ್ತಿನಿಧಿ ಸ್ಪರ್ಧೆಗಳು: ಉದ್ಘಾಟನೆ: ದೊಡ್ಡರಂಗೇಗೌಡ, ಅತಿಥಿ: ಎಚ್.ಜಿ. ದತ್ತಾತ್ರೇಯ (ದತ್ತಣ್ಣ), ಅಧ್ಯಕ್ಷತೆ: ಕೆ. ಮೋಹನ್ ದೇವ್ ಆಳ್ವ, ಆಯೋಜನೆ: ಅಖಿಲ ಕರ್ನಾಟಕ ಮಕ್ಕಳ ಕೂಟ, ಸ್ಥಳ: ಆರ್. ಕಲ್ಯಾಣಮ್ಮ ಮಕ್ಕಳ ಆಟದ ಮೈದಾನ, ಕೋಟೆ, ಸಂಜೆ 4

‘ವೀರಸೇನಾನಿ ಮ. ರಾಮಮೂರ್ತಿ ದತ್ತಿ ಪ್ರಶಸ್ತಿ’ ಪ್ರದಾನ ಸಮಾರಂಭ: ಉದ್ಘಾಟನೆ: ಎಂ.ಎ. ಪೊನ್ನಪ್ಪ, ಅಧ್ಯಕ್ಷತೆ: ಮಹೇಶ ಜೋಶಿ, ಪ್ರಶಸ್ತಿ ಪ್ರದಾನ: ಸಾ.ರಾ. ಗೋವಿಂದು, ಪ್ರಶಸ್ತಿ ಪುರಸ್ಕೃತರು: ಗಾಯತ್ರಿ ರಾಮಣ್ಣ, ಎಂ. ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಚಾಮರಾಜಪೇಟೆ, ಸಂಜೆ 4.30


ಸಾ.ರಾ. ಗೋವಿಂದು

ಪ್ರತಿಭೋತ್ಸವ–2023: ಉದ್ಘಾಟನೆ: ಬಿ.ಆರ್. ಜಗದೀಶ್, ಬಿ.ಎನ್. ಲೋಹಿತ್, ಅತಿಥಿಗಳು: ಎಸ್.ಜಿ. ಗೌಡ, ಪದ್ಮಾವತಿ ನರಸಿಂಹಮೂರ್ತಿ, ಭಾಗ್ಯಮ್ಮ ಕಷ್ಣಯ್ಯ, ಎಚ್.ಎನ್. ಗಂಗಾಧರ್, ಬಿ.ಆರ್. ತೋಂಟದಾರ್ಯ, ಆನಂದ್, ಸುಮಿತ್ರಮ್ಮ, ಟಿ. ಕೃಷ್ಣಪ್ಪ, ಅಧ್ಯಕ್ಷತೆ: ಜಿ. ಮೋಹನ್ ಕುಮಾರ್, ಆಯೋಜನೆ ಮತ್ತು ಸ್ಥಳ: ಅಂಜಲಿ ಕಾನ್ವೆಂಟ್, ನೈಂಟಿಗೇಲ್ ಹೈಸ್ಕೂಲ್, ಸದಾಶಿವನಗರ, ಸುಂಕದಕಟ್ಟೆ, ಸಂಜೆ 5

ಲಾಲ್‌ಬಾಗ್‌ನ ನಾಲ್ಕೂ ಪ್ರವೇಶ ದ್ವಾರಗಳಲ್ಲಿ ಜನಸಂದಣಿ, ಸಂಚಾರ ದಟ್ಟಣೆ

ಫಲಪುಷ್ಪ ಪ್ರದರ್ಶನ: ಹರಿದುಬಂದ ಜನಸಾಗರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಲ್‌ಬಾಗ್ ಗಾಜಿನ ಮನೆಯಲ್ಲಿ ಆಯೋಜಿಸಿರುವ ‘ಬೆಂಗಳೂರು ನಗರದ ಇತಿಹಾಸ ವಿಷಯಾಧಾರಿತ ಫಲಪುಷ್ಪ ಪ್ರದರ್ಶನ’ ವೀಕ್ಷಿಸಲು ಗುರುವಾರ ಜನಸಾಗರವೇ ಹರಿದುಬಂದಿತ್ತು.

ಗಣರಾಜ್ಯೋತ್ಸವದ ಅಂಗವಾಗಿ ಶಾಲಾ–ಕಾಲೇಜು, ಕಚೇರಿಗಳಿಗೆ ರಜೆ ಇದ್ದಿದ್ದರಿಂದ ಬೆಳಿಗ್ಗೆಯಿಂದಲೇ ಸಾರ್ವಜನಿಕರು ತಂಡೋಪ ತಂಡವಾಗಿ ಲಾಲ್‌ಬಾಗ್‌ನತ್ತ ಬರುತ್ತಿದ್ದರು. ಸಂಜೆ ವೇಳೆ ಎತ್ತ ನೋಡಿದರೂ ಜನಜಾತ್ರೆ. ಲಾಲ್‌ಬಾಗ್‌ನ ನಾಲ್ಕೂ ಪ್ರವೇಶ ದ್ವಾರಗಳಲ್ಲಿ ಜನಸಂದಣಿ ಹೆಚ್ಚಿತ್ತು. ಇದರಿಂದ ಸಂಚಾರ ದಟ್ಟಣೆ ಉಂಟಾಗಿತ್ತು. ವಿದ್ಯಾರ್ಥಿಗಳು, ಯುವಕರು ‘ಭಾರತ್ ಮಾತಾ ಕೀ ಜೈ, ವಂದೇ ಮಾತರಂ, ಮೇರಾ ಭಾರತ್ ಮಹಾನ್ ಹೈ’ ಎಂಬ ಜಯಘೋಷ ಕೂಗುತ್ತಿದ್ದರು.

ಲಾಲ್‌ಬಾಗ್ ಮುಖ್ಯ ಗೇಟಿನ ರಸ್ತೆಯಲ್ಲಿ ಸಂಚಾರ ದಟ್ಟಣೆ ನಿಯಂತ್ರಿಸಲು ಏಕಮುಖ ಸಂಚಾರಕ್ಕೆ ಅವಕಾಶ ಕಲ್ಪಿಸಿದ್ದರೂ, ಬೀದಿ ವ್ಯಾಪಾರಿಗಳ ಹಾವಳಿಯಿಂದಾಗಿ ಸಂಚಾರ ದಟ್ಟಣೆ ಉಂಟಾಗಿತ್ತು.


ಲಾಲ್‌ಬಾಗ್ ಗಾಜಿನ ಮನೆಯಲ್ಲಿ ಆಯೋಜಿಸಿರುವ ಫಲಪುಷ್ಪ ಪ್ರದರ್ಶನ ವೀಕ್ಷಿಸಲು ಗುರುವಾರ ಜನಸಾಗರವೇ ಹರಿದುಬಂದಿತ್ತು
–ಪ್ರಜಾವಾಣಿ ಚಿತ್ರ/ ಪ್ರಜ್ವಲ್ ಭಾರದ್ವಾಜ್ ಎನ್. ವಿ

ಲಾಲ್‌ಬಾಗ್ ಮೆಟ್ರೊ ನಿಲ್ದಾಣದಲ್ಲಿ ಟಿಕೆಟ್ ಖರೀದಿಗೆ ಪ್ರಯಾಣಿಕರು ಹರಸಾಹಸ ಪಡುತ್ತಿದ್ದರು. ಉದ್ಯಾನದ ನಾಲ್ಕು ಪ್ರವೇಶ ದ್ವಾರಗಳ ಪಾದಚಾರಿ ಮಾರ್ಗಗಳಲ್ಲಿ ಕಿರು ಮಾರುಕಟ್ಟೆಗಳೇ ಸೃಷ್ಟಿ ಆಗಿದ್ದು ಜನದಟ್ಟಣೆಗೆ ಕಾರಣವಾಗಿತ್ತು.

ಪ್ರತಿಭೋತ್ಸವ ಅನಾವರಣಕ್ಕೆ ವೇದಿಕೆ: ಲಾಲ್‌ಬಾಗ್‌ನ ಫಲಪುಷ್ಪ ಪ್ರದರ್ಶನದ ಅಂಗವಾಗಿ ಬ್ಯಾಂಡ್ ಸ್ಟ್ಯಾಂಡ್‌ನಲ್ಲಿ ಪ್ರತಿಭೆ ಅನಾವರಣ ಗೊಳಿಸಲು ವೇದಿಕೆಯೊಂದನ್ನು ಕಲ್ಪಿಸಲಾಗಿತ್ತು. ಇದರಲ್ಲಿ ಚಿಣ್ಣರು, ಯುವತಿರು, ಯುವಕರು, ಮಹಿಳೆಯರು, ಪುರುಷರು ಕುಣಿದು ಕುಪ್ಪಳಿಸಿದರು. ಫಲಪುಷ್ಪ ಪ್ರದರ್ಶನಕ್ಕಿಂತ ಹೆಚ್ಚು ಜನರು ಚಿಣ್ಣರ ನೃತ್ಯ, ಸಂಗೀತ ಮತ್ತು ಇತರ ಕಲಾಪ್ರದರ್ಶನಗಳನ್ನು ಆಸ್ವಾದಿಸಿದರು.

ಗುರುವಾರ ಸಸ್ಯಕಾಶಿಗೆ ಭೇಟಿ ನೀಡಿದವರು	
ವಯಸ್ಕರು	59,108
ಮಕ್ಕಳು	7,523
ಒಟ್ಟು	66,631
ಸಂಗ್ರಹವಾದ ಹಣ	₹46,58,540

ಸ್ವಾಮೀಜಿ ಕೈಯಿಂದ ಮೈಕ್ ಕಸಿದ ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಭರವಸೆಯನ್ನಷ್ಟೆ ಕೊಟ್ಟರೆ ಒಪ್ಪುವುದಿಲ್ಲ’ ಎಂದು ಕಾಗಿನೆಲೆ ಹೊಸದುರ್ಗ ಶಾಖಾ ಮಠದ ಈಶ್ವರಾನಂದಪುರಿ ಸ್ವಾಮೀಜಿ ಹೇಳುತ್ತಿದ್ದಂತೆ, ಅವರ ಕೈಯಿಂದ ಮೈಕ್ ಕಸಿದುಕೊಂಡು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸ್ಪಷ್ಟನೆ ನೀಡಿದ ಪ್ರಸಂಗ ಗುರುವಾರ ನಡೆಯಿತು.

ಮಹದೇವಪುರ ಕ್ಷೇತ್ರದ ಗರುಡಾಚಾರ್‌ಪಾಳ್ಯ ಮಂಜುನಾಥಸ್ವಾಮಿ ದೇಗುಲದಲ್ಲಿನ ಧಾರ್ಮಿಕ ಕಾರ್ಯಕ್ರಮದಲ್ಲಿ ಮಾತನಾಡಿದ ಸ್ವಾಮೀಜಿ, ‘ಬೆಂಗಳೂರಿನಲ್ಲಿ ಮಳೆ ಬಂದಾಗಲೆಲ್ಲ ಜನ ತೊಂದರೆಗೆ ಸಿಲುಕುತ್ತಿದ್ದಾರೆ. ಶಾಶ್ವತ ಪರಿಹಾರ ಕಂಡುಕೊಳ್ಳುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ. ಕೇವಲ ಭರವಸೆ ನೀಡುವುದನ್ನು ನಾವು ಒಪ್ಪುವುದಿಲ್ಲ. ಅದನ್ನು ಚಾಚೂತಪ್ಪದೆ ಮಾಡಬೇಕು’ ಎಂದು ಹೇಳಿದರು.

ಆಗ ಅಸಮಾಧಾನಗೊಂಡ ಮುಖ್ಯಮಂತ್ರಿ, ‘ಕೊಡಿ ಇಲ್ಲಿ’ ಎಂದು ಮೈಕ್ ಪಡೆದುಕೊಂಡರು. ‘ಇದು ಭರವಸೆಯಲ್ಲ. ಈಗಾಗಲೇ ಯೋಜನೆ ಸಿದ್ಧಪಡಿಸಿ ಹಣ ಕೊಟ್ಟಿದ್ದೇನೆ. ಕಾಮಗಾರಿಯೂ ನಡೆಯುತ್ತಿದೆ ಬುದ್ಧಿ. ಭರವಸೆ ನೀಡುವ ಮುಖ್ಯಮಂತ್ರಿ ನಾನಲ್ಲ. ಸಾಧ್ಯವಿದ್ದರೆ ಮಾಡುತ್ತೇನೆ ಎನ್ನುತ್ತೇನೆ, ಇಲ್ಲದಿದ್ದರೆ ಇಲ್ಲ. ನನಗೆ ಯಾರ ಭಯವೂ ಇಲ್ಲ. ನಾನು ಆ ರೀತಿಯ ಮುಖ್ಯಮಂತ್ರಿಯೂ ಅಲ್ಲ. ನನಗೆ ಆ ಪದ ಬಳಸಬೇಡಿ’ ಎಂದು ಮುಖ ಗಂಟಿಕ್ಕಿದರು.



ಮತ್ತೆ ಮೈಕ್ ಪಡೆದ ಸ್ವಾಮೀಜಿ, ‘ನಾನು ಹಾಗೆ ಹೇಳಲಿಲ್ಲ. ಪೂರ್ತಿ ಹೇಳುವಷ್ಟರಲ್ಲಿ ನೀವು ಮೈಕ್ ಪಡೆದು ಕೊಂಡಿರಿ. ಮುಖ್ಯಮಂತ್ರಿಯವರ ಕಾರ್ಯವೈಖರಿಯನ್ನು ನಾನು ಗಮನಿಸಿದ್ದೇನೆ. ಹಿಂದುಳಿದ ವರ್ಗಗಳ ಮಠಗಳಿಗೆ ನೂರಾರು ಕೋಟಿ ಹಣ ಕೊಟ್ಟು ಶಾಲಾ–ಕಾಲೇಜುಗಳನ್ನು ಕಟ್ಟಲು ಸಹಕಾರ ನೀಡಿದ್ದೀರಿ. ನಿಮ್ಮನ್ನುಆ ಗುಂಪಿಗೆ ನಾವು ಸೇರಿಸುವುದಿಲ್ಲ’ ಎಂದರು. ಆಗ ನಗುಮುಖದಿಂದ ಬೊಮ್ಮಾಯಿ ಕೈಮುಗಿದರು.

‘ಅವರ ಎಲ್ಲ ಭಾಷಣಗಳನ್ನೂ ಗಮನಿಸುತ್ತಿದ್ದೇನೆ. ಅವರು ರಾಜಕಾರಣಿಯಂತೆ ಮಾತನಾಡದೆ, ಜನರ ಸಂಕಷ್ಟಕ್ಕೆ ಮಿಡಿಯುತ್ತಿದ್ದಾರೆ. ಯಾರನ್ನೂ ಹೊಗಳುವುದಿಲ್ಲ, ತೆಗಳುವುದೂ ಇಲ್ಲ. ತಮ್ಮ ಕೆಲಸವನ್ನು ಮಾಡುತ್ತಿದ್ದಾರೆ’ ಎಂದು ಬಣ್ಣಿಸಿದರು.

ಶಾಸಕ ಶ್ರೀನಿವಾಸ್‌ಗೆ ಪಿತೃ ವಿಯೋಗ

ಗುಬ್ಬಿ: ಶಾಸಕ ಎಸ್.ಆರ್.ಶ್ರೀನಿವಾಸ್ ಅವರ ತಂದೆ ರಾಮೇಗೌಡ (85) ವಯೋಸಹಜ ಅನಾರೋಗ್ಯದಿಂದ ಗುರುವಾರ ಸಂಜೆ ನಿಧನರಾದರು.


ರಾಮೇಗೌಡ

ಮಣ್ಣಮ್ಮ ದೇವಿ ಟ್ರಸ್ಟ್ ಹಾಗೂ ತಾಲ್ಲೂಕು ಒಕ್ಕಲಿಗರ ಸಂಘದ ಅಧ್ಯಕ್ಷರಾಗಿದ್ದರು. ಸಹಕಾರಿ, ರಾಜಕೀಯ ಕ್ಷೇತ್ರದಲ್ಲಿಯೂ ಸಕ್ರಿಯರಾಗಿದ್ದರು. ಗುಬ್ಬಿ ವಿಎಸ್‌ಎಸ್‌ಎನ್ ಹಾಗೂ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು.

ಶಾಸಕ ಶ್ರೀನಿವಾಸ್ ಸೇರಿದಂತೆ ಇಬ್ಬರು ಪುತ್ರರು ಹಾಗೂ ಪುತ್ರಿ ಇದ್ದಾರೆ. ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮ ಸೇರ್ವೆಗಾರನ ಪಾಳ್ಯದಲ್ಲಿ ಅಂತ್ಯಕ್ರಿಯೆ ನಡೆಯಲಿದೆ.



ವಿವಿಧ ಸ್ಪರ್ಧೆಗಳಲ್ಲಿ ವಿದ್ಯಾರ್ಥಿಗಳು ಭಾಗಿ • ವಿಜೇತರಿಗೆ ಬಹುಮಾನ

ಕೆಂಗುಂಟೆಯಲ್ಲಿ ಕ್ರೀಡಾಕೂಟ ಸಂಭ್ರಮ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಮಲ್ಲತ್ತಹಳ್ಳಿ ಸಮೀಪದ ಕೆಂಗುಂಟೆ ಕನ್ಯಾಕುಮಾರಿ ಶಾಲಾ ಮೈದಾನದಲ್ಲಿ ಎಲ್ಲ ವಯಸ್ಸಿನವರಿಗೆ ಕ್ರೀಡಾಕೂಟ ಆಯೋಜಿಸಲಾಗಿತ್ತು.

ಪುರುಷರ ವಿಭಾಗದಲ್ಲಿ ಥ್ರೋ ಬಾಲ್, ಮ್ಯೂಸಿಕಲ್ ಚೇರ್, ಶಾಟ್‌ಪಟ್, ಗೋಣಿಚೀಲದ ಓಟ, ಬಕೆಟ್‌ಗೆ ಬಾಲ್ ಹಾಕುವುದು, ಮಹಿಳೆಯರ ವಿಭಾಗದಲ್ಲಿ ಥ್ರೋಬಾಲ್, ಶಾಟ್‌ಪಟ್, ಲೆಮನ್ ಅಂಡ್ ಸ್ಪೂನ್, ಕೆರೆ ದಡ, ಮ್ಯೂಸಿಕಲ್ ಚೇರ್ ಹಮ್ಮಿಕೊಳ್ಳಲಾಗಿತ್ತು. ಕಿರಿಯ, ಹಿರಿಯ ಸೇರಿ 560, ವಿವಿಧ ಶಾಲಾ-ಕಾಲೇಜುಗಳ 210 ವಿದ್ಯಾರ್ಥಿಗಳು ಕ್ರೀಡಾಕೂಟದಲ್ಲಿ ಭಾಗವಹಿಸಿದರು.

ನಾಲ್ವಡಿ ಕೃಷ್ಣರಾಜ ಒಡೆಯರ್ ಪಾರ್ಕ್‌ನ ಕಾಂಗ್ರೆಸ್ ಅಧ್ಯಕ್ಷ ಡಾ.ಎಚ್. ತುಕಾರಾಂ ಬಹುಮಾನ ವಿತರಿಸಿದರು.



ಮಲ್ಲತ್ತಹಳ್ಳಿ ಸಮೀಪದ ಕೆಂಗುಂಟೆ ಕನ್ಯಾಕುಮಾರಿ ಶಾಲಾ ಮೈದಾನದಲ್ಲಿ ಹಮ್ಮಿಕೊಂಡಿದ್ದ ಕ್ರೀಡಾ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಡಾ.ಎಚ್.ತುಕಾರಾಂ ಬಹುಮಾನ ವಿತರಿಸಿದರು. ಲಲಿತಾ ರುದ್ರಸ್ವಾಮಿ, ಪುಟ್ಟಮ್ಮ ಸುವರ್ಣ ತುಕಾರಾಂ, ರಾಮಮೂರ್ತಿ ಇದ್ದರು.

ಕನ್ಯಾಕುಮಾರಿ ಶಾಲೆಯ ಮುಖ್ಯಸ್ಥರಾದ ಸಿ.ಪಿ.ಸುವರ್ಣ ತುಕಾರಾಂ, ಕಾಂಗ್ರೆಸ್ ನಾಯಕಿ ಕಾವ್ಯಾ ರಘುಗೌಡ, ಕಾರ್ಮಿಕ ವಿಭಾಗದ ಅಧ್ಯಕ್ಷ ಕೆಂಪರಾಜು, ಪರಿಶಿಷ್ಟ ವಿಭಾಗದ ಕಾಂಗ್ರೆಸ್ ಅಧ್ಯಕ್ಷ ಪರುಶುರಾಮ, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಲಲಿತಾ ರುದ್ರಸ್ವಾಮಿ, ಮುಖಂಡರಾದ ಭದ್ರೇಗೌಡ, ಪುಟ್ಟಮ್ಮ, ರಾಮಮೂರ್ತಿ, ಸುಹಾಸ್, ನಿರಂಜನ, ಸುಮ, ಗೀತಾಂಜಲಿ, ಚಂದ್ರಿಕಾ ಇದ್ದರು.

‘ಸಂವಿಧಾನ ಬದಲಿಸಲು ಆಗದು’

ಎಚ್.ಡಿ.ಕೋಟೆ (ಮೈಸೂರು ಜಿಲ್ಲೆ): ‘ಸಂವಿಧಾನ ಉಟ್ಟ ಬಟ್ಟೆಯಲ್ಲ. ಅದನ್ನು ಬದಲಿಸುವವರು ಭಾರತದಲ್ಲಿ ಹುಟ್ಟಿಲ್ಲ. ಮುಂದೆಯೂ ಹುಟ್ಟುವುದಿಲ್ಲ’ ಎಂದು ಸಂಸದ ವಿ.ಶ್ರೀನಿವಾಸ ಪ್ರಸಾದ್ ಹೇಳಿದರು.

ತಾಲ್ಲೂಕಿನ ಯರಹಳ್ಳಿಯಲ್ಲಿ ಡಾ.ಬಿ. ಆರ್.ಅಂಬೇಡ್ಕರ್ ಕ್ಷೇಮಾಭಿವೃದ್ಧಿ ಸಂಘದಿಂದ ಗುರುವಾರ ಆಯೋಜಿಸಿದ್ದ ಅಂಬೇಡ್ಕರ್ ಪುತ್ಥಳಿ ಅನಾವರಣ ಹಾಗೂ ಸ್ಮಾರಕ ಉದ್ಘಾಟನೆ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ಸಂವಿಧಾನವನ್ನು ಬದಲಿಸುತ್ತೇವೆ ಎಂದು ಕೆಲವರು ಹೇಳುತ್ತಾರೆ. ಆದರೆ, ಅದು ಸಾಧ್ಯವಿಲ್ಲ’ ಎಂದರು.

‘ವಿದ್ಯೆ, ಬುದ್ಧಿ ಇಲ್ಲದೆ ಬಡತನದಿಂದಾಗಿ ಉಳ್ಳವರ ಜೀತದಾಳುಗಳಾಗಿದ್ದ ಶೋಷಿತರನ್ನು ಅಂಬೇಡ್ಕರ್ ಕನಸುಗಳು ಮುಖ್ಯವಾಹಿನಿಗೆ ತಂದಿವೆ. ಆದರೆ, ಇನ್ನೂ ಅಸ್ಪೃಶ್ಯತೆ ತಾಂಡವವಾಡುತ್ತಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

ರಾಜ್ಯಮಟ್ಟದ ಕವನ, ಕಥಾ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಸಮತಾ ಅಧ್ಯಯನ ಕೇಂದ್ರವು ಸ್ಥಾಪಕ ಅಧ್ಯಕ್ಷೆ ಡಾ.ವಿಜಯಾ ದಬ್ಬೆ ಸ್ಮರಣಾರ್ಥ ವಿದ್ಯಾರ್ಥಿಗಳಿಗೆ ರಾಜ್ಯಮಟ್ಟದ ಕವನ ಮತ್ತು ಕಥಾ ಸ್ಪರ್ಧೆ-2023ಯನ್ನು ಆಯೋಜಿಸಿದೆ.

ಮಹಿಳಾ ಕೇಂದ್ರಿತ ವಸ್ತು ವಿಷಯ ನಿಗದಿಪಡಿಸಲಾಗಿದೆ. ಕವನ ಸ್ಪರ್ಧೆಗೆ ಎರಡು ಕವನ, ಕಥಾ ಸ್ಪರ್ಧೆಗೆ ಒಂದು ಕಥೆ ಕಳುಹಿಸಬೇಕು. ಈ ಮೊದಲು ಎಲ್ಲೂ ಪ್ರಸಾರ ಅಥವಾ ಪ್ರಕಟವಾಗಿರಬಾರದು. ಕಥೆಗೆ ಗರಿಷ್ಠ ಪದಮಿತಿ 2,500 ಪದಗಳು. 26 ವರ್ಷ ವಯಸ್ಸಿನವರಾಗಿರಬೇಕು. ಫೆ.28ರ ಒಳಗೆ ಕಳುಹಿಸಬೇಕು.

ಮೊದಲ ಮೂರು ಬಹುಮಾನ ಪಡೆದವರಿಗೆ ಕ್ರಮವಾಗಿ ₹5ಸಾವಿರ, ₹3ಸಾವಿರ, ₹2ಸಾವಿರ ನೀಡಲಾಗುವುದು. ತೀರ್ಪುಗಾರರು ಮೆಚ್ಚಿದ ಹತ್ತು ಕಥೆಗಳಿಗೆ ತಲಾ ₹1ಸಾವಿರ ಪ್ರೋತ್ಸಾಹಕರ ಬಹುಮಾನ ಕೊಡಲಾಗುವುದು. ವಿಜೇತರು ಮತ್ತು ಪ್ರೋತ್ಸಾಹಕರ ಬಹುಮಾನ ಪಡೆದವರಿಗೆ ಮೇ ಕೊನೆ ವಾರದಲ್ಲಿ ಕಾವ್ಯ ಮತ್ತು ಕಥಾ ಕಮ್ಮಟ ನಡೆಸಲಾಗುವುದು. ಮಾಹಿತಿಯನ್ನು samathaadhyayanakendra2023@gmail.com ಮೂಲಕ ಪಡೆಯಬಹುದು ಎಂದು ಸಮತಾ ಅಧ್ಯಯನ ಕೇಂದ್ರದ ಅಧ್ಯಕ್ಷೆ ಸಬಿಹಾ ಭೂಮಿಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೀರಿನ ಅದಾಲತ್ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (ಬಿಡಬ್ಲ್ಯುಎಸ್‌ಎಸ್‌ಬಿ) ವತಿಯಿಂದ ವಿವಿಧ ಉಪವಿಭಾಗಗಳಲ್ಲಿ 27ರಂದು ನೀರಿನ ಅದಾಲತ್ ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 9.30ರಿಂದ 11 ಗಂಟೆಯವರೆಗೆ ಅದಾಲತ್ ನಡೆಯಲಿದೆ. ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ಸಹಾಯವಾಣಿ 1916ಕ್ಕೆ ಕರೆ ಮಾಡಬಹುದು ಅಥವಾ ವಾಟ್ಸ್‌ಆ್ಯಪ್ ಸಂಖ್ಯೆ 8762228888ಕ್ಕೆ ಸಂದೇಶ ಕಳುಹಿಸುವ ಮೂಲಕವೂ ದೂರು ದಾಖಲಿಸಬಹುದು ಎಂದು ಮಂಡಳಿಯ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ಜಿಲ್ಲಾ ಸಾಹಿತ್ಯ ಸಮ್ಮೇಳನ: ಸರ್ವಾಧ್ಯಕ್ಷರಾಗಿ ಶ್ರೀಮತಿ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 16ನೇ ಬೆಂಗಳೂರು ನಗರ ಜಿಲ್ಲಾ ಸಾಹಿತ್ಯ ಸಮ್ಮೇಳನ ಸರ್ವಾಧ್ಯಕ್ಷರಾಗಿ ಲೇಖಕಿ ಪ್ರೊ.ಎಚ್. ಎಸ್. ಶ್ರೀಮತಿ ಅವರನ್ನು ಆಯ್ಕೆ ಮಾಡಲಾಗಿದೆ.

ಇತ್ತೀಚೆಗೆ ನಡೆದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಸರ್ವಾನುಮತದಿಂದ ಪ್ರೊ. ಎಚ್.ಎಸ್. ಶ್ರೀಮತಿ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಅಧ್ಯಕ್ಷ ಎಂ. ಪ್ರಕಾಶಮೂರ್ತಿ ತಿಳಿಸಿದ್ದಾರೆ.

ಸೃಜನಶೀಲ, ಸಂಶೋಧನೆ ಹಾಗೂ ಅನುವಾದ ಸಾಹಿತ್ಯಗಳ ಮೂಲಕ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿರುವ ಶ್ರೀಮತಿ ಅವರು ಹೊಸಕೋಟೆಯವರು. ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿ ನಿವೃತ್ತರಾಗಿದ್ದಾರೆ.



ಪ್ರೊ.ಎಚ್.ಎಸ್. ಶ್ರೀಮತಿ

‘ಸ್ತ್ರೀವಾದ ತಾತ್ವಿಕತೆ’, ‘ಸ್ತ್ರೀವಾದ ಚಿಂತನೆ ಮತ್ತು ಹೋರಾಟ’, ‘ಮಹಿಳಾ ಆರ್ಥಿಕತೆ’ ಸೇರಿ ಹತ್ತಕ್ಕೂ ಹೆಚ್ಚು ಕೃತಿಗಳನ್ನೂ ರಚಿಸಿದ್ದಾರೆ. ಸಿಮೋನ್ ದ ಬೋವ್ ಅವರ ‘ದಿ ಸೆಕೆಂಡ್ ಸೆಕ್ಸ್’, ಜೆರಾಲ್ಡಿನ್ ಫೋರ್ಬ್ಸ್ ಅವರ ‘ಆಧುನಿಕ ಭಾರತದಲ್ಲಿ ಮಹಿಳೆ’ ಸೇರಿ ಹತ್ತಕ್ಕೂ ಹೆಚ್ಚು ಅನುವಾದ ಕೃತಿಗಳು ಹಾಗೂ ‘ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ’ ಎಂಬ ಬೃಹತ್ ಗ್ರಂಥವನ್ನು ಸಂಪಾದಿಸಿದ್ದಾರೆ ಎಂದು ತಿಳಿಸಿದ್ದಾರೆ.

ಇದುವರೆಗೆ ನಡೆದಿರುವ ಬೆಂಗಳೂರು ನಗರ ಜಿಲ್ಲೆಯ ಹದಿನೈದು ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಬಿ.ಟಿ.ಲಲಿತಾನಾಯಕ್, ಕೆ.ಆರ್.ಸಂಧ್ಯಾರೆಡ್ಡಿ, ಲೀಲಾವತಿ ಆರ್. ಪ್ರಸಾದ್ ಸಮ್ಮೇಳನಾಧ್ಯಕ್ಷರಾಗಿದ್ದರು. ಎಚ್.ಎಸ್. ಶ್ರೀಮತಿ ಅವರು ನಾಲ್ಕನೆಯವರಾಗಿದ್ದಾರೆ.

ಬಳ್ಳಾರಿಯ ಪರಿಶಿಷ್ಟ ಪಂಗಡದ ಹಾಸ್ಟೆಲ್‌ನಲ್ಲಿ ಕಳಪೆ ಊಟದ ವಿರುದ್ಧ ದನಿ ಎತ್ತಿದವರಿಗೆ ಶಿಕ್ಷೆ

ವಿದ್ಯಾರ್ಥಿ ನಿಲಯದಿಂದ 25 ವಿದ್ಯಾರ್ಥಿಗಳು ಹೊರಕ್ಕೆ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ‘ಇಲ್ಲಿನ ಕೌಲ್‌ಬಜಾರ್ ಪ್ರದೇಶದ ಪರಿಶಿಷ್ಟ ಪಂಗಡದ ವಿದ್ಯಾರ್ಥಿ ನಿಲಯದಲ್ಲಿ ‘ಕಳಪೆ ಊಟ’ದ ವಿರುದ್ಧ ದನಿ ಎತ್ತಿದ 25 ವಿದ್ಯಾರ್ಥಿಗಳನ್ನು ಗುರುವಾರ ಹಾಸ್ಟೆಲ್‌ನಿಂದ ಹೊರಹಾಕಲಾಗಿದೆ.

ಬುಧವಾರ ರಾತ್ರಿ ಕೋಳಿ ಸಾರು ಮಾಡಲಾಗಿತ್ತು. ಸಾರು ಕಳಪೆಯಾಗಿದ್ದನ್ನು ಕೆಲವು ವಿದ್ಯಾರ್ಥಿಗಳು ಪ್ರಶ್ನಿಸಿದರು. ವಾರ್ಡನ್, ಕಿರಿಯ ವಾರ್ಡನ್ ಹಾಗೂ ತಾಲ್ಲೂಕು ಅಧಿಕಾರಿ ಊಟ ಮಾಡಿ, ‘ಸಾರು ಚೆನ್ನಾಗಿಲ್ಲ’ ಎಂದು ಒಪ್ಪಿಕೊಂಡರು. ಅನಂತರ ವಿದ್ಯಾರ್ಥಿಗಳು ಎರಡು ಬಕೆಟ್‌ಗಳಲ್ಲಿ ಸಾರು ಹಿಡಿದುಕೊಂಡು ರಾತ್ರಿ 10 ಗಂಟೆಗೆ ಜಿಲ್ಲಾಧಿಕಾರಿ ಮನೆಗೆ ಹೋಗಿ ಕೆಲ ಹೊತ್ತಿನ ಬಳಿಕ ಅವರನ್ನು ಕಂಡರು. ರಾತ್ರಿ ಹೊತ್ತಿನಲ್ಲಿ ತಮ್ಮ ಮನೆಗೇ ಭೇಟಿಗೆ ಬಂದ ವಿದ್ಯಾರ್ಥಿಗಳನ್ನು ಕಂಡು ಗರಂ ಆದ ಡಿಸಿ, ಅವರನ್ನೆಲ್ಲ ಹಾಸ್ಟೆಲ್‌ನಿಂದ ಹೊರ ಹಾಕುವುದಾಗಿ ಗದರಿದ್ದರು.

> **ಸಮಸ್ಯೆ ಹೇಳಿಕೊಳ್ಳುವುದಕ್ಕೆ ವಿಧಿವಿಧಾನಗಳಿವೆ. ಇದರ ಹಿಂದೆ ಯಾರದೋ ಚಿತಾವಣೆ ಇದ್ದಂತಿದೆ. ವಿದ್ಯಾರ್ಥಿಗಳಲ್ಲಿ ಶಿಸ್ತು ಬರಲಿ ಎಂಬ ಉದ್ದೇಶದಿಂದ ಕಠಿಣ ಕ್ರಮ ಕೈಗೊಳ್ಳಲಾಗಿದೆ**
> **ಪವನ್ ಕುಮಾರ್ ಮಾಲಪಾಟಿ**, ಜಿಲ್ಲಾಧಿಕಾರಿ, ಬಳ್ಳಾರಿ

ಕೈ ಚೆಲ್ಲಿದ ಸಚಿವ ಶ್ರೀರಾಮುಲು

ಬಳ್ಳಾರಿ ಜಿಲ್ಲೆಯವರೇ ಆದ ಪರಿಶಿಷ್ಟ ಜಾತಿ ಮತ್ತು ಪಂಗಡದ ಕಲ್ಯಾಣ ಇಲಾಖೆ ಸಚಿವ ಬಿ. ಶ್ರೀರಾಮುಲು ಅವರನ್ನು ಹಾಸ್ಟೆಲ್ ವಿದ್ಯಾರ್ಥಿಗಳು ಮಧ್ಯಾಹ್ನ ಭೇಟಿಯಾದರು.

ಸಮಾಜ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ, ತಾಲ್ಲೂಕು ಅಧಿಕಾರಿ ಮತ್ತಿತರರನ್ನು ಕರೆಸಿಕೊಂಡು ಸಚಿವರು ಸುದೀರ್ಘವಾಗಿ ಚರ್ಚಿಸಿದರು. ‘ಶುಕ್ರವಾರ ಜಿಲ್ಲಾಧಿಕಾರಿ ಅವರನ್ನು ಭೇಟಿ ಮಾಡಿ ಕ್ರಮ ಕೇಳಿ. ಅವರು ಒಪ್ಪಿಕೊಂಡರೆ ನೀವು ಹಾಸ್ಟೆಲ್‌ನಲ್ಲಿ ಇರಬಹುದು’ ಎಂದು ಸಚಿವರು ಹೇಳಿದ್ದಾಗಿ ವಿದ್ಯಾರ್ಥಿಗಳು ತಿಳಿಸಿದ್ದಾರೆ.

‘ಹಾಸ್ಟೆಲ್‌ನಲ್ಲಿ ಕಳಪೆ ಊಟ ಕೊಡುತ್ತಿರುವುದು ಇದೇ ಮೊದಲಲ್ಲ. ಹಿಂದೆ ಅನೇಕ ಸಲ ದೂರು ಕೊಡಲಾಗಿದೆ. ಆದರೆ, ಯಾರೂ ಕಿವಿ ಮೇಲೆ ಹಾಕಿಕೊಳ್ಳುತ್ತಿಲ್ಲ’ ಎಂದು ವಿದ್ಯಾರ್ಥಿಗಳು ದೂರಿದ್ದಾರೆ.

ಗುರುವಾರ ಬೆಳಿಗ್ಗೆ ಹಾಸ್ಟೆಲ್‌ಗೆ ಬಂದ ವಾರ್ಡನ್, ರಾತ್ರಿ ಜಿಲ್ಲಾಧಿಕಾರಿ ಮನೆಗೆ ಹೋಗಿದ್ದ ವಿದ್ಯಾರ್ಥಿಗಳನ್ನು ಲಗೇಜ್ ಸಮೇತ ಹಾಸ್ಟೆಲ್‌ನಿಂದ ಹೊರಹಾಕಿದರು. ಡಿವೈಎಸ್‌ಪಿ ನೇತೃತ್ವದ ಪೊಲೀಸರ ತಂಡವೂ ಅದೇ ಸಮಯಕ್ಕೆ ಅಲ್ಲಿಗೆ ಧಾವಿಸಿದ್ದರಿಂದ ವಿದ್ಯಾರ್ಥಿಗಳು ಗಾಬರಿಯಾಗಿದ್ದರು.

‘ಸಮಾಜ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಸಕೀನಾ ಅವರ ಸೂಚನೆ ಮೇಲೆ ವಿದ್ಯಾರ್ಥಿಗಳನ್ನು ಹಾಸ್ಟೆಲ್‌ನಿಂದ ಹೊರ ಹಾಕಲಾಗಿದೆ. ಈಗ 13 ವಿದ್ಯಾರ್ಥಿಗಳನ್ನು ಹೊರ ಕಳಿಸಲಾಗಿದೆ. ಇನ್ನೂ ಕೆಲವರನ್ನು ಹೊರ ಕಳುಹಿಸಲಾಗುವುದು. ಈ ವಿದ್ಯಾರ್ಥಿಗಳ ತಂದೆ, ತಾಯಿ ಬಂದು ಕ್ಷಮಾಪಣೆ ಪತ್ರ ಕೊಟ್ಟರೆ ಮರಳಿ ಸೇರ್ಪಡೆ ಮಾಡಿಕೊಳ್ಳಲಾಗುವುದು’ ಎಂದು ವಾರ್ಡನ್ ಶಿವಪ್ಪ ಅವರು ಸ್ಪಷ್ಟಪಡಿಸಿದರು.


ಸುದ್ದಿ 2 ನಿಮಿಷ

ಕೃಷ್ಣಾ ಮೇಲ್ದಂಡೆ ಯೋಜನೆ ಶೀಘ್ರ ನನಸು: ಗೋವಿಂದ ಕಾರಜೋಳ

ಬೆಳಗಾವಿ: ‘ಕೃಷ್ಣಾ ಮೇಲ್ದಂಡೆ ಯೋಜನೆಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್‌ನಲ್ಲಿ ಕರ್ನಾಟಕ, ಮಹಾರಾಷ್ಟ್ರ ಹಾಗೂ ತೆಲಂಗಾಣ ರಾಜ್ಯಗಳ ವಾದಗಳು ಮುಗಿದಿವೆ. ಆಂಧ್ರದ ವಾದ ಮಾತ್ರ ಬಾಕಿ ಇದೆ. ಕೆಲವೇ ದಿನಗಳಲ್ಲಿ ಇದೂ ಬಗೆಹರಿಯಲಿದೆ’ ಎಂದು ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ವಿಶ್ವಾಸ ವ್ಯಕ್ತಪಡಿಸಿದರು.

‘ಎರಡನೇ ನ್ಯಾಯಾಧೀಕರಣವು 2013ರಲ್ಲಿ ನಮಗೆ 130 ಟಿಎಂಸಿ ಅಡಿ ನೀರು ಬಳಸಿಕೊಳ್ಳಲು ಅನುಮತಿ ನೀಡಿತ್ತು. ಆದರೆ, ಬಳಸಿಕೊಳ್ಳಲು ಆಗಿಲ್ಲ. ಸದ್ಯ ನಾಲ್ಕೂ ರಾಜ್ಯಗಳಿಂದ ಸುಪ್ರೀಂಕೋರ್ಟ್‌ನಲ್ಲಿ ದಾವೆಗಳಿವೆ. ಮೇಲಾಗಿ, ಯೋಜನೆ ಅನುಷ್ಠಾನಕ್ಕಾಗಿ ಗೆಜೆಟ್ ನೋಟಿಫಿಕೇಷನ್ ಹೊರಡಿಸಬೇಕು ಎಂದು ಕರ್ನಾಟಕ ಹಾಗೂ ಮಹಾರಾಷ್ಟ್ರ ಸರ್ಕಾರಗಳಿಂದ ಜಂಟಿಯಾಗಿ ಕೇಂದ್ರ ಸರ್ಕಾರ ಮತ್ತು ನ್ಯಾಯಾಲಯಕ್ಕೆ ಮನವಿ ಮಾಡಲಾಗಿದೆ. ಎರಡೂ ರಾಜ್ಯಗಳ ವಾದ ಒಂದೇ ಆಗಿದ್ದರಿಂದ ಶೀಘ್ರ ನೀರು ಬಳಕೆ ಸಾಧ್ಯವಾಗಲಿದೆ’ ಎಂದು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ರಾಜ್ಯದಲ್ಲಿ ಒಟ್ಟಾರೆ 66.66 ಲಕ್ಷ ಹೆಕ್ಟೇರ್ ನೀರಾವರಿಗೆ ಅವಕಾಶವಿದ್ದು, ಬೃಹತ್ ನೀರಾವರಿ ಯೋಜನೆಗೆ 40 ಲಕ್ಷ ಹೆಕ್ಟೇರ್ ಒಳಪಡುತ್ತದೆ. ಈಗಾಗಲೇ 30 ಲಕ್ಷ ಹೆಕ್ಟೇರ್ ಪೂರ್ಣಗೊಂಡಿದೆ. ಇನ್ನೂ 10 ಲಕ್ಷ ಹೆಕ್ಟೇರ್ ಬಾಕಿಯಿದೆ. ಕೃಷ್ಣಾ ಮೇಲ್ದಂಡೆ ಯೋಜನೆ ಕಾರ್ಯಗತವಾದರೆ 5.91 ಲಕ್ಷ ಹೆಕ್ಟೇರ್ ನೀರಾವರಿ ಆಗಲಿದೆ ’ ಎಂದರು.



ಕೆಕೆಆರ್‌ಡಿಬಿ ಅಧಿಕಾರಿಗಳೊಂದಿಗೆ ಶೀಘ್ರ ಸಭೆ: ಮುರುಗೇಶ ನಿರಾಣಿ

ಕಲಬುರಗಿ: ‘ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ನೀಡಲಾದ ಅನುದಾನವನ್ನು ಬಹುತೇಕ ಬಳಕೆ ಮಾಡದಿರುವ ಬಗ್ಗೆ ‘ಪ್ರಜಾವಾಣಿ’ ವರದಿ ಕಣ್ಣು ತೆರೆಸಿದ್ದು, ಇದರ ಬಗ್ಗೆ ಎರಡು ದಿನಗಳಲ್ಲಿ ಅಧಿಕಾರಿಗಳ ಜೊತೆ ಸಭೆ ನಡೆಸಿ ಕಾಮಗಾರಿ ಚುರುಕುಗೊಳಿಸಲು ಸೂಚಿಸಲಾಗುವುದು’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಮುರುಗೇಶ ನಿರಾಣಿ ತಿಳಿಸಿದರು.

‘ಅವಧಿ ಮುಗಿದರೂ ಶುರುವಾಗದ ಕಾಮಗಾರಿಗಳನ್ನು ರದ್ದುಪಡಿಸಿ ಕಡಿಮೆ ಅವಧಿಯ ಟೆಂಡರ್ ಮೂಲಕ ಕೆಲಸ ಪೂರ್ಣ ಮಾಡಲು ಸೂಚಿಸಲಾಗುವುದು. ರಾಜ್ಯ ಸರ್ಕಾರ ಈ ಭಾಗದ ಸಮಗ್ರ ಅಭಿವೃದ್ಧಿಗೆ ವರ್ಷಕ್ಕೆ ನೀಡುವ ₹ 3 ಸಾವಿರ ಕೋಟಿ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಸೂಚಿಸುವೆ’ ಎಂದು ಗುರುವಾರ ಸುದ್ದಿಗಾರರಿಗೆ ತಿಳಿಸಿದರು.

‘ಮುಂದಿನ ಆರ್ಥಿಕ ವರ್ಷದಿಂದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಂಡಳಿಗೆ ₹ 5 ಸಾವಿರ ಕೋಟಿ ನೀಡಲು ಉದ್ದೇಶಿಸಿದ್ದಾರೆ. ಅದಕ್ಕಾಗಿ ಈಗಿನಿಂದಲೇ ಕ್ರಿಯಾ ಯೋಜನೆ ರೂಪಿಸಲೂ ಅಧಿಕಾರಿಗಳಿಗೆ ಸೂಚಿಸಲಾಗುವುದು’ ಎಂದರು.

ಕರ್ತವ್ಯಪಥ: ನಾರಿಶಕ್ತಿ ವೈಭವ

ಒಂದನೇ ಪುಟದಿಂದ...

ಸಂಪ್ರದಾಯದಂತೆ ತ್ರಿವರ್ಣ ಧ್ವಜ ಹಾರಿಸಲಾಯಿತು. ಬಳಿಕ ರಾಷ್ಟ್ರಗೀತೆ ಮೊಳಗಿತು. 105 ಎಂ.ಎಂ ಫೀಲ್ಡ್ ಗನ್‌ಗಳ ಮೂಲಕ ‘ಗನ್ ಸೆಲ್ಯೂಟ್’ ನೀಡಿದ್ದು ಈ ಬಾರಿಯ ಗಣರಾಜ್ಯೋತ್ಸವದ ವಿಶೇಷತೆಗಳಲ್ಲಿ ಒಂದಾಗಿತ್ತು. ದೇಶವು ರಕ್ಷಣಾ ಕ್ಷೇತ್ರದಲ್ಲಿ ‘ಆತ್ಮ ನಿರ್ಭರತೆ’ ಸಾಧಿಸುತ್ತಿರುವುದರ ಧ್ಯೋತಕವಾಗಿ ಈ ಗನ್ ಬಳಸಲಾಯಿತು.

ಕರ್ತವ್ಯಪಥದ ಸುತ್ತಲೂ ದಟ್ಟ ಮಂಜು ಕವಿದಿತ್ತು. ಹೀಗಾಗಿ ವಾಯುಪಡೆಯ ‘ಲೋಹದ ಹಕ್ಕಿ’ಗಳು ಆಗಸದಲ್ಲಿ ಮೂಡಿಸುವ ಬಣ್ಣ ಬಣ್ಣದ ಚಿತ್ತಾರಗಳನ್ನು ಕಣ್ತುಂಬಿಕೊಳ್ಳುವ ಹಂಬಲ ಹೊತ್ತು ಬಂದಿದ್ದ ಪ್ರೇಕ್ಷಕರಿಗೆ ನಿರಾಸೆ ಕಾಡಿತು.

ಸ್ವದೇಶಿ ನಿರ್ಮಿತ ಸೇನಾ ಸಲಕರಣೆಗಳನ್ನು ಪ್ರದರ್ಶಿಸಲಾಯಿತು. ಸೇನೆಯ ಪ್ರಮುಖ ಯುದ್ಧ ಟ್ಯಾಂಕ್‌ಗಳಾದ ಅರ್ಜುನ್ ಮತ್ತು ಕೆ–9 ವಜ್ರ, ಕರ್ತವ್ಯಪಥದಲ್ಲಿ ಸಾಗಿದವು. ನಾಗ್ ಕ್ಷಿಪಣಿ ವ್ಯವಸ್ಥೆ (ಎನ್‌ಎಎಂಐಎಸ್) ಹಾಗೂ ಆಕಾಶ್ ಕ್ಷಿಪಣಿ ವ್ಯವಸ್ಥೆಯನ್ನೂ ಪ್ರದರ್ಶಿಸಲಾಯಿತು.

ಗಣರಾಜ್ಯೋತ್ಸವ ಭಾಷಣದಲ್ಲಿ ಸರ್ಕಾರದ ಸಾಧನೆ ತೆರೆದಿಟ್ಟ ಥಾವರ್‌ಚಂದ್ ಗೆಹಲೋತ್

100 ಪಿಎಚ್‌ಸಿ ಮೇಲ್ದರ್ಜೆಗೆ: ರಾಜ್ಯಪಾಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ, ತೋಟಗಾರಿಕೆ, ಆರೋಗ್ಯ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿನ ರಾಜ್ಯ ಸರ್ಕಾರದ ಸಾಧನೆಗಳನ್ನು ಗಣರಾಜ್ಯೋತ್ಸವ ಭಾಷಣದಲ್ಲಿ ಬಿಚ್ಚಿಟ್ಟ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್, ‘ವಿಭಿನ್ನ ಮತ್ತು ಸರ್ವರನ್ನು ಒಳಗೊಂಡ ಯೋಜನೆಗಳಿಂದಾಗಿ ಕರ್ನಾಟಕ ಅಗ್ರಸ್ಥಾನದಲ್ಲಿದೆ’ ಎಂದು ಪ್ರತಿಪಾದಿಸಿದರು.

ನಗರದ ಫೀಲ್ಡ್ ಮಾರ್ಷಲ್ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ಗುರುವಾರ ನಡೆದ 74ನೇ ಗಣರಾಜ್ಯೋತ್ಸವದ ಸಮಾರಂಭದಲ್ಲಿ ರಾಷ್ಟ್ರ ಧ್ವಜಾರೋಹಣದ ಬಳಿಕ ಹಿಂದಿಯಲ್ಲಿ ಭಾಷಣ ಮಾಡಿದ ಅವರು, ‘ಸುಲಲಿತ ವ್ಯಾಪಾರದಲ್ಲಿ ಶ್ರೇಷ್ಠ ಸಾಧಕ ರಾಜ್ಯವಾಗಿ ಕರ್ನಾಟಕ ಹೊರಹೊಮ್ಮಿದೆ. ಇದೇ ರೀತಿ ನವೋದ್ಯಮ ವಲಯದಲ್ಲಿ ಅತ್ಯುತ್ತಮ ಕಾರ್ಯನಿರ್ವಹಣೆಯ ರಾಜ್ಯ ಎಂದು ಘೋಷಿಸಲಾಗಿದೆ’ ಎಂದರು.

ಆರೋಗ್ಯ ಕ್ಷೇತ್ರದ ಸಾಧನೆ ಮತ್ತು ಮುನ್ನೋಟ ವಿವರಿಸಿದ ರಾಜ್ಯಪಾಲರು, ‘ರಾಷ್ಟ್ರೀಯ ಆರೋಗ್ಯ ಮಿಷನ್ ಯೋಜನೆ ಅಡಿ ರಾಜ್ಯದಲ್ಲಿ ತಾಯಂದಿರ ಮರಣ ಪ್ರಮಾಣವು 83ರಿಂದ 69ಕ್ಕೆ ಇಳಿದಿದೆ. ಒಟ್ಟು ₹1 ಸಾವಿರ ಕೋಟಿ ವೆಚ್ಚದಲ್ಲಿ 100 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು (ಪಿಎಚ್‌ಸಿ) 30 ಹಾಸಿಗೆಯ ಮಾದರಿ ಸಮುದಾಯ ಆರೋಗ್ಯ ಕೇಂದ್ರಗಳಾಗಿ 2 ವರ್ಷಗಳಲ್ಲಿ ಮೇಲ್ದರ್ಜೆಗೇರಿಸಲಾಗುವುದು’ ಎಂದರು.



ಬೆಂಗಳೂರಿನಲ್ಲಿ ಮಾಣೆಕ್ ಶಾ ಪರೇಡ್‌ನಲ್ಲಿ ನಡೆದ ಗಣರಾಜ್ಯೋತ್ಸವ ಪರೇಡ್‌ನಲ್ಲಿ ಸಮರ ಕಲೆ ‘ಕಲರಿಪಯಟ್ಟು’ವನ್ನು ಮದ್ರಾಸ್ ಎಂಜಿನಿಯರಿಂಗ್ ಗ್ರೂಪ್ ಸಿಬ್ಬಂದಿ ಪ್ರದರ್ಶಿಸಿದರು – ಪ್ರಜಾವಾಣಿ ಚಿತ್ರ

> **ಎಲ್ಲ ಸರ್ಕಾರಿ ಕಾಲೇಜಿನಲ್ಲಿ ಸಂಗೊಳ್ಳಿ ರಾಯಣ್ಣ ಮತ್ತು ನೇತಾಜಿ ಸುಭಾಷ್‌ಚಂದ್ರ ಬೋಸ್ ಪ್ರತಿಮೆ ಸ್ಥಾಪಿಸಲು ಆದೇಶ ಹೊರಡಿಸಲಾಗುವುದು**
> **ಬಸವರಾಜ ಬೊಮ್ಮಾಯಿ,** ಮುಖ್ಯಮಂತ್ರಿ

‘ಮರು ಜಾರಿಗೊಳಿಸಿರುವ ‘ಯಶಸ್ವಿನಿ’ ಯೋಜನೆ ಅಡಿಯಲ್ಲಿ 2023ರ ಜ.17ರ ಅಂತ್ಯಕ್ಕೆ 32.32 ಲಕ್ಷ ಸದಸ್ಯರನ್ನು ನೋಂದಾಯಿಸಲಾಗಿದೆ’ ಎಂದು ವಿವರಿಸಿದರು.

‘ರಾಜ್ಯದಾದ್ಯಂತ ಇರುವ ಸಣ್ಣ ಮತ್ತು ಅತಿ ಸಣ್ಣ, ಮಧ್ಯಮ ಹಾಗೂ ದೊಡ್ಡ ಹಿಡುವಳಿದಾರರನ್ನು ಗುರುತಿಸಲು ಕಳೆದ ವರ್ಷ ಅ.1ರಿಂದ 11ನೇ ಕೃಷಿ ಗಣತಿ ಕಾರ್ಯ ಆರಂಭಿಸಲಾಗಿದೆ. 2022–23ನೇ ಸಾಲಿಗೆ ಒಟ್ಟು 20.19 ಲಕ್ಷ ರೈತರಿಗೆ ಕೃಷಿ ಸಾಲ ಯೋಜನೆ ಅಡಿಯಲ್ಲಿ ₹ 15,066 ಕೋಟಿ ಮೊತ್ತದಷ್ಟು ಬೆಳೆ ಸಾಲವನ್ನು 2022ರ ಡಿಸೆಂಬರ್ ಅಂತ್ಯದವರೆಗೆ ನೀಡಲಾಗಿದೆ. ಮಹಿಳಾ ಸ್ವಸಹಾಯ ಗುಂಪುಗಳಿಗೆ ₹5 ಲಕ್ಷಗಳವರೆಗೆ ಸಾಲವನ್ನು ಶೂನ್ಯ ಬಡ್ಡಿದರದಲ್ಲಿ ನೀಡಲಾಗಿದೆ’ ಎಂದರು.

‘2020–21ನೇ ‘ಸುಸ್ಥಿರ ಅಭಿವೃದ್ಧಿ ಗುರಿ’ (ಎಸ್‌ಜಿಡಿ) ಸೂಚ್ಯಂಕ ವರದಿ ಪ್ರಕಾರ ಕರ್ನಾಟಕ ನಾಲ್ಕನೇ ಸ್ಥಾನದಲ್ಲಿದೆ. ದೇಶದ ಪ್ರಗತಿಪರ ರಾಜ್ಯಗಳಲ್ಲಿ ಕರ್ನಾಟಕ ಒಂದಾಗಿದ್ದು, ಸ್ವಸ್ಥ ಮತ್ತು ಸಮೃದ್ಧ ನಾಡು ಕಟ್ಟುವಲ್ಲಿ ಕೈಜೋಡಿಸೋಣ. ದೇಶದ ಸಾರ್ವಭೌಮತ್ವ, ಏಕತೆ ಮತ್ತು ಅಖಂಡತೆಯನ್ನು ಬಲಿಷ್ಠಗೊಳಿಸುವ ಸಂಕಲ್ಪ ಮಾಡೋಣ‘ ಎಂದು ಕರೆ ನೀಡಿದರು.

ಸ್ಫೂರ್ತಿ ಯೋಜನೆ ವಿಸ್ತರಣೆ; ‘ಬಾಲ್ಯ ವಿವಾಹ ತಡೆಗಟ್ಟುವ ಉದ್ದೇಶದಿಂದ ಕೊಪ್ಪಳ ಜಿಲ್ಲೆಯಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಂಡಿರುವ ಸ್ಫೂರ್ತಿ ಯೋಜನೆಯನ್ನು ಬಾಗಲಕೋಟೆ, ವಿಜಯಪುರ, ರಾಯಚೂರು, ಬೆಳಗಾವಿ ಮತ್ತು ಕಲಬುರಗಿ ಜಿಲ್ಲೆಗಳ 11 ತಾಲ್ಲೂಕುಗಳಿಗೂ ವಿಸ್ತರಿಸಲಾಗುವುದು. ಈ ಯೋಜನೆಗೆ ₹ 12.51 ಕೋಟಿ ವೆಚ್ಚದಲ್ಲಿ ಮೀಸಲಿಡಲಾಗುವುದು’ ಎಂದು ರಾಜ್ಯಪಾಲರು ತಿಳಿಸಿದರು.



ಗ್ರೇಟ್ ಇಂಡಿಯನ್ ಹಾರ್ನ್‌ಬಿಲ್

ಚಾಮರಾಜನಗರ ಜಿಲ್ಲೆಯ ಬಿಳಿಗಿರಿರಂಗನಾಥಸ್ವಾಮಿ ಹುಲಿ ಅಭಯಾರಣ್ಯದ ಕೆ.ಗುಡಿ ವಲಯದಲ್ಲಿ ಗುರುವಾರ ಮೊದಲ ಬಾರಿಗೆ ಗ್ರೇಟ್ ಇಂಡಿಯನ್ ಹಾರ್ನ್‌ಬಿಲ್ ಜಂಗಲ್ ಲಾಡ್ಜಸ್ ಸಫಾರಿ ವೇಳೆ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಈ ಪಕ್ಷಿಗಳು ಸಾಮಾನ್ಯವಾಗಿ ದಾಂಡೇಲಿ ಅರಣ್ಯದಲ್ಲಿ ಹೆಚ್ಚಿವೆ.
ಚಿತ್ರಕೃಪೆ– ಯತೀನ್ ಸಾಲಿಯಾನ್

ಬೋನಿಗೆ ಬಿದ್ದ ಚಿರತೆ ಕೊಲ್ಲಲು ಜನರ ಪಟ್ಟು

ಒಂದನೇ ಪುಟದಿಂದ...

ವಾಹನವನ್ನು ಸುತ್ತುವರಿದು ಪ್ರತಿಭಟಿಸಿದರು. ಕೆಲವರು ವಾಹನದ ಮುಂದೆ ಮಲಗಿ ಪ್ರತಿರೋಧ ವ್ಯಕ್ತಪಡಿಸಿದರು. ಈ ವೇಳೆ, ಗ್ರಾಮಸ್ಥರು ಮತ್ತು ಅರಣ್ಯ ಇಲಾಖೆ ಅಧಿಕಾರಿಗಳ ನಡುವೆ ಮಾತಿನ ಚಕಮಕಿ ನಡೆಯಿತು.

‘ಚಿರತೆ ಕೊಲ್ಲಲು ಅವಕಾಶವಿಲ್ಲ. ಅದನ್ನು ಬೇರೆಡೆಗೆ ಸಾಗಿಸಲು ಅವಕಾಶ ಕೊಡಿ’ ಎಂದು ಉಪ ವಿಭಾಗಾಧಿಕಾರಿ ಕಮಲಾ ಬಾಯಿ, ಎಎಸ್ಪಿ ನಂದಿನಿ ಜನರನ್ನು ಕೋರಿದರು. ಬಳಿಕ, ಚಿರತೆಯನ್ನು ಕಾರ್ಯಪಡೆ ಅಧಿಕಾರಿಗಳು ಮತ್ತೊಂದು ಬೋನಿಗೆ ಸ್ಥಳಾಂತರಿಸಿ ವಾಹನದಲ್ಲಿ ಸಾಗಿಸಿದರು. ಇದು 6 ವರ್ಷದ ಗಂಡು ಚಿರತೆ’ ಎಂದರು.

‘ಹೊರಳಹಳ್ಳಿಯಲ್ಲಿ ಈಚೆಗೆ ಬಾಲಕನನ್ನು ಕೊಂದ ಚಿರತೆ ಇದಾಗಿದೆ. ಕ್ಯಾಮೆರಾ ಟ್ರ್ಯಾಪ್‌ನಲ್ಲೂ ಎರಡು ಬಾರಿ ಕಾಣಿಸಿಕೊಂಡಿತ್ತು. ಅದನ್ನು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನಕ್ಕೆ ಕಳುಹಿಸಲಾಗಿದೆ’ ಎಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮಾಲತಿ ಪ್ರಿಯ ‘ಪ್ರಜಾವಾಣಿ’ಗೆ ತಿಳಿಸಿದರು.

‘2024, 2029ರಲ್ಲೂ ಮೋದಿಯೇ ಗೆಲ್ಲಬೇಕು’

ಪ್ರಜಾವಾಣಿ ವಾರ್ತೆ

ಮೈಸೂರು: ‘2024 ಹಾಗೂ 2029ರ ಲೋಕಸಭಾ ಚುನಾವಣೆಯಲ್ಲೂ ನರೇಂದ್ರ ಮೋದಿ ಹೆಚ್ಚೆಚ್ಚು ಬಹುಮತದಿಂದ ಗೆಲ್ಲಬೇಕು. ನಂತರ ನಿವೃತ್ತಿಗೊಳ್ಳಬೇಕು. ಅಲ್ಲಿಯವರೆಗೆ, ಅವರಂತೆಯೇ ಇರುವವರನ್ನು ತಯಾರು ಮಾಡಬೇಕು’ ಎಂದು ಕಾದಂಬರಿಕಾರ ಡಾ.ಎಸ್.ಎಲ್.ಭೈರಪ್ಪ ಹೇಳಿದರು.

ಪದ್ಮಭೂಷಣ ಪುರಸ್ಕಾರ ದೊರೆತಿದ್ದಕ್ಕೆ, ಇಲ್ಲಿನ ಕುವೆಂಪುನಗರದ ತಮ್ಮ ನಿವಾಸದಲ್ಲಿ ಜಿಲ್ಲಾಡಳಿತದಿಂದ ಗುರುವಾರ ಅಭಿನಂದನೆ ಸ್ವೀಕರಿಸಿದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದರು.

‘ಮೋದಿ ಕಾರಣದಿಂದಲೇ ನನಗೆ ಪುರಸ್ಕಾರ ದೊರೆತಿದೆ. ಇಲ್ಲದಿದ್ದರೆ ಬರುತ್ತಿರಲಿಲ್ಲ. ಇದರಿಂದ ಖುಷಿಯಾಗಿದೆ. ಪ್ರಶಸ್ತಿ ಕೊಟ್ಟರೆಂಬ ಕಾರಣಕ್ಕೆ ಅವರ ಸರ್ಕಾರವನ್ನು ಹೊಗಳುವುದಿಲ್ಲ. ದೇಶದಲ್ಲಿ ಮೋದಿ ಸರ್ಕಾರದಂತಹ ಸರ್ಕಾರ ಇದುವರೆಗೆ ಬಂದಿರಲಿಲ್ಲ. ಸೇವೆಯನ್ನೇ ದೃಷ್ಟಿಯಲ್ಲಿಟ್ಟುಕೊಂಡವರು, ಧೈರ್ಯ ಇರುವಂಥವರು ಇದುವರೆಗೆ ಯಾರೂ ಬಂದಿರಲಿಲ್ಲ’ ಎಂದರು.



ಡಾ. ಎಸ್‌.ಎಲ್. ಭೈರಪ್ಪ

‘ಪದ್ಮಭೂಷಣ ಪುರಸ್ಕಾರ ಸಿಕ್ಕಿದ್ದಕ್ಕಿಂತಲೂ, ನನ್ನ ಪುಸ್ತಕಗಳನ್ನು ಲಕ್ಷಾಂತರ ಮಂದಿ ಓದಿ ಸಂತೋಷಪಟ್ಟಿರುವುದು ಹೆಚ್ಚಿನ ಖುಷಿ ಕೊಡುತ್ತದೆ. ನನಗೀಗ 92 ವರ್ಷ. ನಾನು ಸತ್ತ ಮೇಲೂ ನನ್ನ ಪುಸ್ತಕಗಳು ಬದುಕುತ್ತವೆಯೇ, ಪ್ರಸ್ತುತವಾಗಿರುತ್ತವೆಯೇ? ಪ್ರಸ್ತುತವಾದರೆ ಅದೇ ನಿಜವಾದ ಪ್ರಶಸ್ತಿ’ ಎಂದು ಹೇಳಿದರು.

‘ಈಗ ದೇಶ ಬಹಳ ಪ್ರಗತಿ ಸಾಧಿಸಿದೆ. ಅಂತೆಯೇ ಸವಾಲುಗಳೂ ಇವೆ. ವಿದೇಶದಲ್ಲಿ ಸೋತವರು ಗೆದ್ದವರನ್ನು ಅಭಿನಂದಿಸುತ್ತಾರೆ. ಆದರೆ, ನಮ್ಮಲ್ಲಿ ಆ ರೀತಿ ಇಲ್ಲ. ವಿರೋಧ ಪಕ್ಷದಲ್ಲಿರುವವರು ಜವಾಬ್ದಾರಿ ತಿಳಿಯದೇ ಸದಾ ಬೈಗುಳದಲ್ಲಿ ತೊಡಗುತ್ತಿದ್ದಾರೆ’ ಎಂದು ವಿಷಾದಿಸಿದರು.

‘ಬೈಗುಳ ಬಿಟ್ಟು ಅಧ್ಯಯನ ಮಾಡಿ, ಅಂಕಿ–ಅಂಶಗಳನ್ನು ಇಟ್ಟುಕೊಂಡು, ಸರ್ಕಾರವು ಯಾವ್ಯಾವುದನ್ನು ಮಾಡಿಲ್ಲ ಎಂದು ಚರ್ಚಿಸಲಿ, ಆಗ, ಉತ್ತಮ ಪ್ರಜಾಪ್ರಭುತ್ವ ಸಾಧ್ಯವಾಗುತ್ತದೆ’ ಎಂದರು.

ಏಕರೂಪ ನಾಗರಿಕ ಸಂಹಿತೆ ಜಾರಿಗೊಳಿಸಿ: ‘ಏಕರೂಪ ನಾಗರಿಕ ಸಂಹಿತೆಯನ್ನು ಖಂಡಿತ ಜಾರಿಗೊಳಿಸಬೇಕು. ಎಲ್ಲ ಕಾನೂನು ಎಲ್ಲರಿಗೂ ಅನ್ವಯವಾಗಬೇಕು. ಮತಕ್ಕೋಸ್ಕರ ಒಂದು ವರ್ಗದ ಓಲೈಕೆ ಸರಿಯಲ್ಲ. ಅಲ್ಪಸಂಖ್ಯಾತರು ಬೇರೆ ಎಂದು ಮಾಡಿದ್ದೇಕೆ? ಸ್ವಾತಂತ್ರ್ಯ ಬಂದ ನಂತರ ದೇಶಕ್ಕೆ ಸರಿಯಾದ ಅಡಿಪಾಯ ಹಾಕಲಿಲ್ಲ. ಇದರಿಂದ ಹಲವು ಸಮಸ್ಯೆಗಳಾಗಿವೆ’ ಎಂದು ಅವರು ಹೇಳಿದರು.

‘ಬಿಬಿಸಿ ಸಾಕ್ಷ್ಯಚಿತ್ರ ಈಗ ಹೊರಬಂದಿದ್ದೇಕೆ?’

‘2002ರ ಗುಜರಾತ್ ಗಲಭೆಯಲ್ಲಿ ನರೇಂದ್ರ ಮೋದಿ ಪಾತ್ರವಿತ್ತು’ ಎಂದು ಆರೋಪಿಸಿ ಬಿಬಿಸಿ ಹೊರತಂದಿರುವ ಸಾಕ್ಷ್ಯಚಿತ್ರದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಅವರು, ‘ಈಗ ಅದು ಹೊರಬಂದಿದ್ದೇಕೆ? ಜಿ–20 ಶೃಂಗಸಭೆಗೆ ಉತ್ತಮ ಅರ್ಥಶಾಸ್ತ್ರಜ್ಞರನ್ನು ಆಯ್ಕೆ ಮಾಡಿದ್ದನ್ನು ತಡೆಯಲಾಗದೇ ಇಂಥದ್ದೆಲ್ಲ ಶುರು ಮಾಡಿಕೊಂಡಿದ್ದಾರೆ. ಹಳೆಯದ್ದನ್ನೆಲ್ಲಾ ಈಗ ತೆಗೆದಿದ್ದಾರೆ’ ಎಂದು ಸಾಹಿತಿ ಎಸ್.ಎಲ್. ಭೈರಪ್ಪ ಹೇಳಿದರು.

‘ಪಠಾಣ್’: ಮೊದಲ ದಿನವೇ ₹ 55 ಕೋಟಿ ಗಳಿಕೆ

ನವದೆಹಲಿ (ಪಿಟಿಐ): ಬಾಲಿವುಡ್ ನಟ ಶಾರುಕ್ ಖಾನ್ ಅಭಿನಯದ ‘ಪಠಾಣ್’ ಸಿನಿಮಾವು ಮೊದಲ ದಿನವೇ ₹55 ಕೋಟಿ ಗಳಿಸಿ ದಾಖಲೆ ನಿರ್ಮಿಸಿದೆ. ಸಿನಿಮಾದ ‘ಬೇಷರಂ ರಂಗ್’ ಹಾಡಿನಲ್ಲಿ ನಟಿ ದೀಪಿಕಾ ಪಡುಕೋಣೆ ಅವರು ಧರಿಸಿದ್ದ ಕೇಸರಿ ಬಿಕಿನಿ ಕಾರಣದಿಂದಾಗಿ ಸಿನಿಮಾವನ್ನು ನಿಷೇಧಿಸುವಂತೆ ದೇಶದಲ್ಲಿ ಪ್ರತಿಭಟನೆಗಳು ನಡೆದಿದ್ದವು.

‘ಹಿಂದಿ ಸಿನಿಮಾವೊಂದು ಮೊದಲ ದಿನವೇ ಇಷ್ಟೊಂದು ದೊಡ್ಡ ಮೊತ್ತದ ಹಣ ಗಳಿಸಿರುವುದು ಇದೇ ಮೊದಲು’ ಎಂದು ‘ಪಠಾಣ್’ ಸಿನಿಮಾವನ್ನು ನಿರ್ಮಿಸಿದ ಯಶ್ ರಾಜ್ ಫಿಲ್ಮ್ಸ್ ಹೇಳಿದೆ.

> **ಜಗತ್ತಿನಾದ್ಯಂತ ಸಿನಿಮಾ ಕುರಿತು ಜನರು ತೋರಿಸುತ್ತಿರುವ ಪ್ರೀತಿ, ಮೆಚ್ಚುಗೆಗೆ ನಾವು ಆಭಾರಿ. ಭಾರತೀಯ ಸಿನಿಮಾಕ್ಕೆ ಇದೊಂದು ಐತಿಹಾಸಿಕ ದಿನ**
> **ಯಶ್ ರಾಜ್ ಫಿಲ್ಮ್ಸ್**

‘ಈ ಸಿನಿಮಾವು ತೆಲುಗು, ತಮಿಳಿನಲ್ಲೂ ಬಿಡುಗಡೆಯಾಗಿದ್ದು, ₹2 ಕೋಟಿ ಹೆಚ್ಚುವರಿ ಲಾಭವನ್ನು ತಂದುಕೊಟ್ಟಿದೆ’ ಎಂದೂ ಗುರುವಾರ ಹೇಳಿದೆ.

‘ಸಿನಿಮಾವು ಹಲವು ಮೊದಲುಗಳಿಗೆ ಕಾರಣವಾಗಿದೆ. ‘ಭಾರತದ 5 ಸಾವಿರ ಚಿತ್ರಮಂದಿರಗಳಲ್ಲಿ ಬಿಡುಗಡೆಯಾದ ಮೊದಲ ಹಿಂದಿ ಸಿನಿಮಾ’, ‘ರಜಾ ಇಲ್ಲದ ದಿನದಲ್ಲಿ ಬಿಡುಗಡೆಯಾದ ಮೊದಲ ದಿನವೇ ಅತ್ಯಂತ ಹೆಚ್ಚು ಮೊತ್ತದ ಹಣ ಗಳಿಸಿದ ಸಿನಿಮಾ’ ಎಂಬ ದಾಖಲೆಯನ್ನು ‘ಪಠಾಣ್’ ಬರೆದಿದೆ ಎಂದಿದೆ.

ನಾಲ್ಕು ವರ್ಷಗಳ ಬಳಿಕ ‘ಪಠಾಣ್’ ಮೂಲಕ ಶಾರುಕ್ ಖಾನ್ ಬೆಳ್ಳಿತೆರೆಗೆ ಮರಳಿದ್ದಾರೆ. ಬಾಕ್ಸ್‌ಆಫೀಸ್‌ನಲ್ಲಿ ಹಣ ಗಳಿಸಲು ಹೆಣಗುತ್ತಿದ್ದ ಬಾಲಿವುಡ್‌ಅನ್ನು ‘ಪಠಾಣ್’ ಮೇಲೆತ್ತಲಿದೆ ಎಂದು ಸಿನಿಮಾ ಕ್ಷೇತ್ರದ ತಜ್ಞರು ನಿರೀಕ್ಷಿಸಿದ್ದರು. ಆದರೆ, ಈ ಸಿನಿಮಾವು ಎಲ್ಲಾ ನಿರೀಕ್ಷೆಗಳನ್ನು ಮೀರಿ ಮುನ್ನಡೆದಿದೆ.

ಸಂಭವನೀಯರ ಪಟ್ಟಿ: ಫೆ.2ರಂದು ಸಭೆ


ಪ್ರಜಾ ಮತ ಜನತಂತ್ರದ ಹಬ್ಬ
ಕರ್ನಾಟಕ ವಿಧಾನಸಭಾ ಚುನಾವಣೆ - 2023

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಇನ್ನೇನು ಮೂರು ತಿಂಗಳಲ್ಲಿ ಎದುರಾಗಲಿರುವ ವಿಧಾನಸಭೆ ಚುನಾವಣೆಗೆ ಪಕ್ಷದ ಸಂಭವನೀಯ ಅಭ್ಯರ್ಥಿಗಳ ಪಟ್ಟಿ ಸಿದ್ಧಪಡಿಸಲು ಕೆಪಿಸಿಸಿ ಚುನಾವಣಾ ಸಮಿತಿಯ ಸಭೆ ಫೆ.2ರಂದು ನಡೆಯಲಿದೆ. ಕನಿಷ್ಠ 100 ಕ್ಷೇತ್ರಗಳಿಗೆ ಸಂಭವನೀಯ ಅಭ್ಯರ್ಥಿಗಳ ಪಟ್ಟಿ ಸಿದ್ಧಪಡಿಸಿ, ಹೈಕಮಾಂಡ್‌ಗೆ ರವಾನಿಸುವ ಬಗ್ಗೆ ಕಾಂಗ್ರೆಸ್ ನಾಯಕರು ಈ ಸಭೆಯಲ್ಲಿ ಚರ್ಚೆ ನಡೆಸಲಿದ್ದಾರೆ.

‘ಕೆಲವು ಕ್ಷೇತ್ರಗಳಲ್ಲಿ ಟಿಕೆಟ್‌ಗಾಗಿ ಸ್ಥಳೀಯ ನಾಯಕರ ಮಧ್ಯೆ ಭಾರಿ ಪೈಪೋಟಿ ಏರ್ಪಟ್ಟಿದೆ. ಅಂಥ ಕ್ಷೇತ್ರಗಳನ್ನು ಹೊರತುಪಡಿಸಿ, ಇತರ ಕ್ಷೇತ್ರಗಳಿಗೆ 2–3 ಆಕಾಂಕ್ಷಿಗಳ ಮೊದಲ ಪಟ್ಟಿಯನ್ನು ಸಿದ್ಧಪಡಿಸಲು ನಿರ್ಧರಿಸಲಾಗಿದೆ. ಬಹುತೇಕ ಎಲ್ಲ ಹಾಲಿ ಶಾಸಕರಿಗೆ ಟಿಕೆಟ್ ಸಿಗುವುದು ಖಚಿತ. ಫೆಬ್ರುವರಿ ಎರಡನೇ ವಾರದಲ್ಲಿ ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆಯಾಗುವ ಸಾಧ್ಯತೆ ಇದೆ. ಹಾಲಿ ಶಾಸಕರು ಸ್ಪರ್ಧೆಯಿಂದ ಹಿಂದೆ ಸರಿಯಲು ಬಯಸಿದ ಕ್ಷೇತ್ರಗಳಲ್ಲಿ ಯಾರಿಗೆ ಟಿಕೆಟ್ ನೀಡಬೇಕೆಂಬ ಬಗ್ಗೆ ಮುಂದಿನ ದಿನಗಳಲ್ಲಿ ತೀರ್ಮಾನ ಆಗಲಿದೆ’ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಕಾಂಗ್ರೆಸ್‌ನ ಎರಡನೇ ಹಂತದ ‘ಪ್ರಜಾಧ್ವನಿ’ ಯಾತ್ರೆ ಫೆ. 3ರಿಂದ ಆರಂಭವಾಗಲಿದೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಪ್ರತ್ಯೇಕವಾಗಿ ದಕ್ಷಿಣ ಕರ್ನಾಟಕ ಮತ್ತು ಉತ್ತರ ಕರ್ನಾಟಕದಿಂದ ಈ ಯಾತ್ರೆ ಆರಂಭಿಸಲಿದ್ದಾರೆ. ಕೋಲಾರದ ಕುರುಡಮಲೆ ಗಣೇಶ ದೇವಸ್ಥಾನದಿಂದ ಶಿವಕುಮಾರ್ ಮತ್ತು ಬಸವಕಲ್ಯಾಣದಿಂದ ಸಿದ್ದರಾಮಯ್ಯ ನೇತೃತ್ವದಲ್ಲಿ ಪಕ್ಷದ ನಾಯಕರು ಪ್ರವಾಸ ಆರಂಭಿಸಲಿದ್ದು, ಇಬ್ಬರೂ ರಾಜ್ಯದ ಎಲ್ಲ 224 ಕ್ಷೇತ್ರಗಳಲ್ಲಿ ಸುತ್ತಾಡಲು ನಿರ್ಧರಿಸಿದ್ದಾರೆ. ಈ ಪ್ರವಾಸ, ಈ ಇಬ್ಬರು ನಾಯಕರಿಗೂ ಪ್ರತಿಷ್ಠೆಯ ವಿಷಯ ಆಗಲಿದೆ ಎಂಬ ಚರ್ಚೆಯೂ ಕಾಂಗ್ರೆಸ್ ವಲಯದಲ್ಲಿ ನಡೆದಿದೆ.



ಮೈಸೂರಿನಲ್ಲಿ ಗುರುವಾರ ಕಾಂಗ್ರೆಸ್ ‘ಪ್ರಜಾಧ್ವನಿ’ ಯಾತ್ರೆಗೆ ಆಗಮಿಸಿದ ಸಿದ್ದರಾಮಯ್ಯ ಅವರಿಗೆ ಅಭಿಮಾನಿಗಳು ‘ಮೈಸೂರು ಪಾಕ್’ ಹಾರ ಹಾಕಿದಾಗ ಅದರಲ್ಲಿನ ಒಂದು ತುಂಡನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತಿನ್ನಿಸಿದರು. ಕಾರ್ಯಕರ್ತರೂ ಕಿತ್ತುಕೊಳ್ಳಲು ಮುಗಿಬಿದ್ದರು — ಪ್ರಜಾವಾಣಿ ಚಿತ್ರ

ವಿಧಾನಸಭೆ ಚುನಾವಣೆಯ ಹಿನ್ನೆಲೆಯಲ್ಲಿ ಪ್ರಚಾರ ಕಾರ್ಯತಂತ್ರಗಳ ಕುರಿತು ಚರ್ಚಿಸಲು ಕೆಪಿಸಿಸಿ ಪ್ರಚಾರ ಸಮಿತಿಯ ಸಭೆ ಶುಕ್ರವಾರ (ಜ. 27) ನಡೆಯಲಿದೆ. ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ ನೇತೃತ್ವದಲ್ಲಿ ಕೆಪಿಸಿಸಿ ಕಚೇರಿಯ ಹಿಂಭಾಗದಲ್ಲಿ ನಿರ್ಮಿಸಿರುವ ನೂತನ ಕಟ್ಟಡದ ಸಭಾಂಗಣದಲ್ಲಿ ಮಧ್ಯಾಹ್ನ1 ಗಂಟೆಗೆ ಈ ಸಭೆ ನಡೆಯಲಿದೆ. ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ, ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಪ್ರಚಾರ ಸಮಿತಿಯ ಸಹ ಅಧ್ಯಕ್ಷರು, ಮುಖ್ಯ ಸಂಯೋಜಕರು, ಸಂಯೋಜಕರು, ಜಂಟಿ ಸಂಯೋಜಕರು, ಜಿಲ್ಲಾ ಘಟಕಗಳ ಅಧ್ಯಕ್ಷರು ಮತ್ತು ಪ್ರಚಾರ ಸಮಿತಿಯ ಮಾಧ್ಯಮ ಮತ್ತು ಸಾಮಾಜಿಕ ಜಾಲ ವಿಭಾಗದ ಪದಾಧಿಕಾರಿಗಳು ಈ ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಮಧ್ಯಾಹ್ನ 3 ಗಂಟೆಗೆ ಕೆಪಿಸಿಸಿ ಪದಾಧಿಕಾರಿಗಳ ಸಭೆ ನಡೆಯಲಿದೆ. ಈ ಸಭೆಯಲ್ಲಿ ಟಿಕೆಟ್ ಆಕಾಂಕ್ಷಿಗಳೂ ಭಾಗವಹಿಸಲಿದ್ದಾರೆ. ಇನ್ನಿರುವ ದಿನಗಳಲ್ಲಿ ಚುನಾವಣೆ ಎದುರಿಸಲು ಹಮ್ಮಿಕೊಳ್ಳಬೇಕಾದ ಕಾರ್ಯಕ್ರಮಗಳು, ರಣತಂತ್ರದ ಕುರಿತು ಎರಡೂ ಸಭೆಗಳಲ್ಲಿ ಚರ್ಚೆ ನಡೆಯಲಿದೆ. ಬೂತ್‌ಮಟ್ಟದಲ್ಲಿ ಸಂಘಟನೆ ಚುರುಕು ಮುಟ್ಟಿಸುವ ಜೊತೆಗೆ ಸ್ಥಳೀಯ ನಾಯಕರನ್ನು ಚುನಾವಣೆಗೆ ಸಜ್ಜುಗೊಳಿಸುವ ಕುರಿತು ನಾಯಕರು ವಿಚಾರ ವಿನಿಮಯ ನಡೆಸಲಿದ್ದಾರೆ. ಅಲ್ಲದೆ, ಬಿಜೆಪಿ, ಜೆಡಿಎಸ್‌ನ ಕೆಲವು ಮುಖಂಡರು ಕಾಂಗ್ರೆಸ್ ಸೇರಲು ಮುಂದಾಗಿದ್ದು, ಕೆಲವರನ್ನು ಫೆಬ್ರುವರಿ ಮೊದಲ ವಾರದಲ್ಲಿಯೇ ಪಕ್ಷಕ್ಕೆ ಸೇರಿಸಿಕೊಳ್ಳಲು ತೀರ್ಮಾನಿಸಲಾಗಿದೆ. ಇತರ ಪಕ್ಷಗಳಿಂದ ಕಾಂಗ್ರೆಸ್ ಸೇರುವವರಿಂದ ಪಕ್ಷಕ್ಕೆ ಆಗಬಹುದಾದ ಲಾಭದ ಬಗ್ಗೆಯೂ ಚರ್ಚೆ ನಡೆಯಲಿದೆ’ ಎಂದೂ ಮೂಲಗಳು ಹೇಳಿವೆ.

ಡಿಕೆಶಿ ಬಾಯಲ್ಲಿ ಭ್ರಷ್ಟಾಚಾರದ ಮಾತೇ?: ಮುನಿರತ್ನ

ಕೋಲಾರ: ‘ಬೇರೆ ಯಾರಾದರೂ ಭ್ರಷ್ಟಾಚಾರದ ಬಗ್ಗೆ ಆರೋಪ ಮಾಡಿದರೆ ಉತ್ತರ ಕೊಡಬಹುದು. ಡಿ.ಕೆ. ಶಿವಕುಮಾರ್ ಭ್ರಷ್ಟಾಚಾರದ ಬಗ್ಗೆ ಮಾತನಾಡಿದರೆ ಏನೆಂದು ಹೇಳುವುದು. ನನಗಂತೂ ಗೊತ್ತಿಲ್ಲ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಮುನಿರತ್ನ ವ್ಯಂಗ್ಯವಾಗಿ ಪ್ರತಿಕ್ರಿಯಿಸಿದ್ದಾರೆ.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು,‘ಶೇ 40 ಕಮಿಷನ್ ಎಂದು ವೇದಿಕೆಗಳಲ್ಲಿ ಮಾತನಾಡುವುದಲ್ಲ, ನ್ಯಾಯಾಲಯಕ್ಕೆ ಹೋಗಲಿ. ದಾಖಲೆ ಸಲ್ಲಿಸಲಿ. ಆರೋಪ ಮಾಡಿ ತಪ್ಪಿಸಿಕೊಂಡು ಹೋಗಲು ಸಾಧ್ಯವಿಲ್ಲ. ಪ್ರಾಯಶ್ಚಿತ ಅನುಭವಿಸಬೇಕಾಗುತ್ತದೆ’ ಎಂದರು.

‘ಕಾಂಗ್ರೆಸ್‌ನಲ್ಲಿ, ನನ್ನ ಬೆಡ್‌ರೂಂನಲ್ಲೇ ಇದ್ದವರು ಈಗ ಬಿಜೆಪಿಗೆ ಹೋಗಿ ಆರೋಪ ಮಾಡುತ್ತಿದ್ದಾರೆ’ ಎಂಬ ಡಿ.ಕೆ. ಶಿವಕುಮಾರ್ ಟೀಕೆಗೆ, ‘ನಾನು ಯಾರ ಬೆಡ್‌ರೂಂನಲ್ಲೂ ಇರಲಿಲ್ಲ. ಯಾರಿದ್ದರೋ ಅವರನ್ನೇ ಕೇಳಿಕೊಳ್ಳಲಿ’ ಎಂದು ಹೇಳಿದರು.

‘ಯಡಿಯೂರಪ್ಪ ವಿರುದ್ಧದ ಸಂಘರ್ಷಕ್ಕೆ ಪೂರ್ಣ ವಿರಾಮ’



ಯತ್ನಾಳ

ವಿಜಯಪುರ:‘ಶಾಸಕ ಬಿ.ಎಸ್.ಯಡಿಯೂರಪ್ಪ ಅವರ ಜೊತೆಗಿನ ರಾಜಕೀಯ ಸಂಘರ್ಷಕ್ಕೆ ಇನ್ನು ಪೂರ್ಣ ವಿರಾಮ ನೀಡುತ್ತೇನೆ’ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಯಡಿಯೂರಪ್ಪ ಜೊತೆ ರಾಜಿ ಮಾಡಿಕೊಂಡಿಲ್ಲ. ಆದರೆ, ಹೈಕಮಾಂಡ್ ಸೂಚನೆ ಮೇರೆಗೆ ಇದನ್ನು ಪಾಲಿಸುತ್ತಿದ್ದೇನೆ’ ಎಂದರು.

‘ಬಿಎಸ್‌ವೈ ಕುರಿತು ನನಗೆ ಇನ್ನು ಪ್ರಶ್ನೆಗಳನ್ನೇ ಕೇಳಬೇಡಿ, ಅವರ ಬಗ್ಗೆ ಅಪಾರ ಗೌರವ ಇದೆ’ ಎಂದು ವ್ಯಂಗ್ಯವಾಡಿದರು.

‘ಯಡಿಯೂರಪ್ಪಗೆ ಬಯ್ಯೋದು ಬೇಡ, ಅವರು ಹಿರಿಯರು ಇದ್ದಾರೆ. ಅವರ ಬಗ್ಗೆ ಮಾತನಾಡಬೇಡಿ. ಅಲ್ಲದೇ, ಚಿಲ್ಲರೆ ರಾಜಕಾರಣಿಗಳ ಬಗ್ಗೆಯೂ ಪ್ರತಿಕ್ರಿಯೆ ನೀಡದಂತೆ ಹೈಕಮಾಂಡ್ ಸೂಚಿಸಿದೆ’ ಎಂದರು.

‘ಪಕ್ಷದಿಂದ ನನಗೆ ಯಾವುದೇ ನೋಟಿಸ್ ಬಂದಿಲ್ಲ. ನೋಟಿಸ್ ನೀಡಲಾಗಿದೆ ಎಂಬ ಊಹಾಪೋಹಗಳೆಲ್ಲ ಮಾಧ್ಯಮಗಳ ಸೃಷ್ಟಿ’ ಎಂದರು.

ಪ್ರಜಾಧ್ವನಿ ಹೆಸರಿನಲ್ಲಿ ಪ್ರಜಾದ್ರೋಹ: ಸಿ.ಟಿ. ರವಿ

ಚಿಕ್ಕಮಗಳೂರು: ‘ಕಾಂಗ್ರೆಸ್‌ನವರು ಹತಾಶರಾಗಿದ್ದಾರೆ, ಪ್ರಜಾಧ್ವನಿ ಹೆಸರಿನಲ್ಲಿ ಪ್ರಜಾದ್ರೋಹದಲ್ಲಿ ತೊಡಗಿದ್ದಾರೆ. ರಾಜ್ಯದಲ್ಲಿ ಉಚಿತ ಕೊಡುಗೆಗಳು, ಸುಳ್ಳು ಭರವಸೆಗಳ ಮಹಾಪೂರವನ್ನೇ ಹರಿಸಿದ್ದಾರೆ’ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಲೇವಡಿ ಮಾಡಿದರು.

‘2018ರಲ್ಲಿ ನಡೆದ ರಾಜಸ್ಥಾನ ವಿಧಾನಸಭೆ ಚುನಾವಣೆ ಸಮಯದಲ್ಲಿ ಕಾಂಗ್ರೆಸ್ ಆಡಳಿತ ಚುಕ್ಕಾಣಿ ಹಿಡಿದರೆ 10 ದಿನಗಳಲ್ಲಿ ರೈತರ ಸಾಲಮನ್ನಾ ಮಾಡುವುದಾಗಿ ರಾಹುಲ್ ಗಾಂಧಿ ಭರವಸೆ ನೀಡಿದ್ದರು. ಈವರೆಗೆ ಈಡೇರಿಸಿಲ್ಲ. ಕಾಂಗ್ರೆಸ್‌ನ ಸುಳ್ಳು ಭರವಸೆಗಳಿಗೆ ಇದೊಂದು ಉದಾಹರಣೆ’ ಎಂದು ಗುರುವಾರ ಸಿ.ಟಿ.ರವಿ ಅವರು ಪತ್ರಿಕಾಗೋಷ್ಠಿಯಲ್ಲಿ ಟೀಕಿಸಿದರು.

ಇ– ಬಯೋಟೋರಿಯಂ ನೆಟ್‌ವರ್ಕ್ ಕಂಪನಿ ವಿರುದ್ಧ ಎಫ್‌ಐಆರ್

ಉತ್ಪನ್ನ ಮಾರಿದರೆ ಲಾಭದ ಆಮಿಷ: ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಯೋ ಮ್ಯಾಗ್ನೆಟಿಕ್ ಉತ್ಪನ್ನಗಳನ್ನು ಮಾರಿದರೆ ಕಮಿಷನ್ ಲೆಕ್ಕದಲ್ಲಿ ಉತ್ತಮ ಲಾಭ ನೀಡುವುದಾಗಿ ಹೇಳಿ ವಂಚಿಸುತ್ತಿದ್ದ ಆರೋಪದಡಿ ‘ಇ-ಬಯೋಟೋರಿಯಂ ನೆಟ್‌ವರ್ಕ್’ ಕಂಪನಿ ವಿರುದ್ಧ ಪ್ರಕರಣ ದಾಖಲಾಗಿದ್ದು, ನಾಲ್ವರು ಆರೋಪಿಗಳನ್ನು ಹೈಗ್ರೌಂಡ್ಸ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕಂಪನಿಯ ನಿರ್ದೇಶಕ ಮಧ್ಯಪ್ರದೇಶದ ಸುನೀಲ್ ಜೋಶಿ (58), ವಿತರಕರಾದ ಗೋವಾದ ಪ್ರಮೋದ್ ಗೋಪಿನಾಥ್ (51), ಬೆಂಗಳೂರು ಸುಭಾಷ್‌ನಗರದ ಶೇಖ್ ಸಾದಿಕ್ ಅಲಿ (32) ಮತ್ತು ಎನ್. ಯೋಗೇಶ್ (44) ಬಂಧಿತರು.

‘ಇ- ಬಯೋಟೋರಿಯಂ ನೆಟ್‌ವರ್ಕ್ ಕಂಪನಿ ವತಿಯಿಂದ ಅಂಬೇಡ್ಕರ್ ಭವನದಲ್ಲಿ ಜ. 15ರಂದು ಕಾರ್ಯಕ್ರಮ ಆಯೋಜಿಸಲಾಗಿತ್ತು. 100ಕ್ಕೂ ಹೆಚ್ಚು ಜನರು ಸೇರಿದ್ದರು. ಮಾನವನ ಆರೋಗ್ಯಕ್ಕೆ ಸಂಬಂಧಿಸಿದ ಬಯೋ ಮ್ಯಾಗ್ನೆಟಿಕ್ ಉತ್ಪನ್ನಗಳನ್ನು ಚೈನ್ ಲಿಂಕ್ ಮೂಲಕ ಮಾರಿದರೆ ಹೆಚ್ಚು ಲಾಭ ನೀಡುವುದಾಗಿ ಆರೋಪಿಗಳು ಹೇಳುತ್ತಿದ್ದರು. ವಸ್ತುಗಳನ್ನು ಖರೀದಿಸಲು ಪ್ರಚೋದಿಸುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ಕಾರ್ಯಕ್ರಮದ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಸಿಬ್ಬಂದಿ ಸ್ಥಳಕ್ಕೆ ಹೋಗಿ ಪರಿಶೀಲಿಸಿದ್ದರು. ವಂಚನೆ ಉದ್ದೇಶದಿಂದ ಕಾರ್ಯಕ್ರಮ ಸಂಘಟಿಸಿರುವುದು ಗೊತ್ತಾಯಿತು. ಬಳಿಕ, ನಾಲ್ವರೂ ಆರೋಪಿಗಳನ್ನು ವಶಕ್ಕೆ ಪಡೆಯಲಾಯಿತು. ಆರೋಪಿಗಳು ಜನರನ್ನು ವಂಚಿಸುತ್ತಿದ್ದ ಬಗ್ಗೆ ಪುರಾವೆಗಳು ಲಭ್ಯವಾಗಿದ್ದು, ನಾಲ್ವರನ್ನು ಬಂಧಿಸಲಾಗಿದೆ. ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ಪಡೆಯಲಾಗಿದೆ’ ಎಂದು ತಿಳಿಸಿದರು.

ಟೆಕ್ಸ್‌ಟೈಲ್ಸ್ ಹೆಸರಿನಲ್ಲಿ ಅಕ್ರಮ ವ್ಯವಹಾರ: ‘ಇ-ಬಯೋಟೋರಿಯಂ ನೆಟ್‌ವರ್ಕ್ ಕಂಪನಿಯ ಪ್ರಧಾನ ಕಚೇರಿ ಮುಂಬೈನಲ್ಲಿದೆ. ಟೆಕ್ಸ್‌ಟೈಲ್ಸ್ ಹೆಸರಿನಲ್ಲಿ ಅಕ್ರಮವಾಗಿ ಬಯೋ ಮ್ಯಾಗ್ನೆಟಿಕ್ ಉತ್ಪನ್ನಗಳನ್ನು ಕಂಪನಿಯಿಂದ ಮಾರಲಾಗುತ್ತಿತ್ತು’ ಎಂದು ಪೊಲೀಸರು ಹೇಳಿದರು.

‘ಬಯೋ ಮ್ಯಾಗ್ನೆಟಿಕ್ ಬ್ರೇಸ್‌ಲೆಟ್ (ಒಂದಕ್ಕೆ ₹ 8,800), ನಿದ್ದೆ ವೇಳೆ ಗೊರಕೆ ತಪ್ಪಿಸುವ ಪಟ್ಟಿ (ಒಂದಕ್ಕೆ ₹5,760) ದಿಂಬು (ಒಂದಕ್ಕೆ ₹7,400ರಿಂದ ₹ 19,080) ಹಾಗೂ ನೀರಿನ ಬಾಟಲಿ ಹೊದಿಕೆ (ಒಂದಕ್ಕೆ ₹5,100) ಉತ್ಪನ್ನಗಳನ್ನು ಕಂಪನಿಯವರು ಬಿಡುಗಡೆ ಮಾಡಿದ್ದರು.’

‘ಯಾವುದಾದರೊಂದು ಉತ್ಪನ್ನ ಖರೀದಿಸುವ ವ್ಯಕ್ತಿ, ತನ್ನಿಂದ ಮೂರು ಜನರಿಗೆ ಉತ್ಪನ್ನಗಳನ್ನು ಮಾರಿದರೆ ಲಾಭ ನೀಡುವುದಾಗಿ ಕಂಪನಿ ಹೇಳಿತ್ತು. ಇದನ್ನು ನಂಬಿದ್ದ 2 ಸಾವಿರ ಮಂದಿ ಕಂಪನಿ ಸೇರಿದ್ದರು. ಇತ್ತೀಚಿನ ದಿನಗಳಲ್ಲಿ ಜನರಿಗೆ ಲಾಭ ನೀಡದೇ ಕಂಪನಿ ವಂಚಿಸಿರುವ ಬಗ್ಗೆ ಮಾಹಿತಿ ಇದೆ’ ಎಂದು ಪೊಲೀಸರು ತಿಳಿಸಿದರು.



ಆರೋಪಿಗಳಾದ ಸುನೀಲ್ ಜೋಶಿ, ಪ್ರಮೋದ್ ಗೋಪಿನಾಥ್, ಶೇಖ್ ಸಾದಿಕ್ ಅಲಿ, ಎನ್. ಯೋಗೇಶ್

‘ಕಂಪನಿ ಸ್ಥಾಪಕ ಜೋಶಿಗೆ ನೋಟಿಸ್’

‘2007ರಲ್ಲಿ ಕಂಪನಿ ಸ್ಥಾಪಿಸಿದ್ದ ಬಗ್ಗೆ ಮಾಹಿತಿ ಇದೆ. ಕಂಪನಿ ಸ್ಥಾಪಕ ಎನ್ನಲಾದ ಸಾಗರ್ ಕುಮಾರ್ ಜೋಶಿ ಎಂಬುವವರಿಗೆ ವಿಚಾರಣೆಗೆ ಬರುವಂತೆ ನೋಟಿಸ್ ನೀಡಲಾಗಿದೆ’ ಎಂದು ಪೊಲೀಸರು ತಿಳಿಸಿದರು.

₹38 ಲಕ್ಷ ಹಣವಿದ್ದ ಖಾತೆ ಜಪ್ತಿ

‘ಕಂಪನಿ ಖಾತೆಗೆ ಇದುವರೆಗೂ ₹ 2 ಕೋಟಿಯಿಂದ ₹ 3 ಕೋಟಿವರೆಗೆ ಹಣ ಜಮೆ ಆಗಿರುವ ಮಾಹಿತಿ ಇದೆ. ಕಂಪನಿಯಿಂದ ವಂಚನೆ ಆಗಿರುವುದಾಗಿ 50 ಮಂದಿ ಹೇಳಿಕೆ ನೀಡಿದ್ದಾರೆ. ₹ 38 ಲಕ್ಷ ಹಣವಿದ್ದ ಬ್ಯಾಂಕ್ ಖಾತೆಯನ್ನು ಜಪ್ತಿ ಮಾಡಿ, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ಅಡುಗೆ ಅನಿಲ ಸ್ಫೋಟ; ಮೂವರಿಗೆ ಗಾಯ

ಮುಳಗುಂದ (ಗದಗ ಜಿಲ್ಲೆ) : ಇಲ್ಲಿನ ಚಿಂದಿಪೇಟಿ ಓಣಿಯ ಬಸವಣ್ಣೆಪ್ಪ ಹಡಪದ ಅವರ ಮನೆಯಲ್ಲಿ ಗುರುವಾರ ರಾತ್ರಿ ಅಡುಗೆ ಸಿಲಿಂಡರ್ ಸೋರಿಕೆಯಾಗಿ ಸ್ಫೋಟಗೊಂಡು ಬಾಲಕ ಸೇರಿದಂತೆ ಮೂವರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಬಸವಣ್ಣೆಪ್ಪ ಹಡಪದ, ಬಾಲಕ ಆದರ್ಶ ಮತ್ತು ಆತನ ತಾಯಿ ಯಶೋಧಾ ಬೆಂತೂರ ಅವರಿಗೆ ಸುಟ್ಟ ಗಾಯಗಳಾಗಿವೆ. ಸ್ಫೋಟದ ತೀವ್ರತೆಗೆ ಮನೆಯ ಚಾವಣಿ ಕಿತ್ತು, ಪಕ್ಕದ ಮನೆಯ ಗೋಡೆಗೂ ಹಾನಿಯಾಗಿದೆ. ತಕ್ಷಣ ಸ್ಥಳಿಯರು ಬಂದು ಗಾಯಾಳುಗಳನ್ನು ರಕ್ಷಿಸಿ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಘಟನಾ ಸ್ಥಳಕ್ಕೆ ಸಿಪಿಐ ಅಶೋಕ ಸದಸಲಗಿ, ಭಾರತ್ ಗ್ಯಾಸ್ ವಿತರಕ ಅನುಪ ಕೆಂಚನಗೌಡ್ರ ಭೇಟಿ ನೀಡಿ ಪರಿಶೀಲಿಸಿದರು.

₹ 9.60 ಕೋಟಿ ವಂಚನೆ: ಲೆಕ್ಕಾಧಿಕಾರಿಗಳ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಎಸ್‌ಟಿ (ಸರಕು ಮತ್ತು ಸೇವಾ ತೆರಿಗೆ) ಹೆಸರಿನಲ್ಲಿ ಕಂಪನಿಗೆ ₹ 9.60 ಕೋಟಿ ವಂಚಿಸಿದ ಆರೋಪದಡಿ ಇಬ್ಬರು ಲೆಕ್ಕಾಧಿಕಾರಿಗಳನ್ನು ಸಂಜಯನಗರ ಪೊಲೀಸರು ಬಂಧಿಸಿದ್ದಾರೆ.

ನಿಖಿಲ್ ಹಾಗೂ ವಿನಯ್ ಬಾಬು ಬಂಧಿತರು. ಇವರಿಬ್ಬರೂ ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ.

‘ಆಟೋಮೇಟಿವ್ ಪ್ರೈವೇಟ್ ಲಿಮಿಟೆಡ್ ಮಾಲೀಕರು ವಂಚನೆ ಸಂಬಂಧ ಸದಾಶಿವನಗರ ಠಾಣೆಗೆ 2022ರ ನವೆಂಬರ್‌ನಲ್ಲಿ ದೂರು ನೀಡಿದ್ದರು. ಕಂಪನಿ ಕಚೇರಿ ಇರುವ ಸ್ಥಳದ ಆಧಾರದಲ್ಲಿ ಸಂಜಯನಗರ ಠಾಣೆಗೆ ಪ್ರಕರಣ ವರ್ಗಾವಣೆಗೊಂಡಿತ್ತು.’

ಅಪರಾಧ ಸುದ್ದಿ

‘ಕಂಪನಿಯ ಮೂರು ವರ್ಷಗಳ ಅವಧಿಯ ಲೆಕ್ಕ ಪರಿಶೋಧನಾ ವರದಿ ಸಿದ್ಧಪಡಿಸಿದ್ದ ಆರೋಪಿಗಳು, ಸರ್ಕಾರಕ್ಕೆ ₹ 9.60 ಕೋಟಿ ಜಿಎಸ್‌ಟಿ ಪಾವತಿ ಮಾಡಬೇಕೆಂದು ಹೇಳಿದ್ದರು. ಅದನ್ನು ನಂಬಿದ್ದ ದೂರುದಾರರು, ಹಂತ ಹಂತವಾಗಿ ಹಣ ನೀಡಿದ್ದರು. ಇತ್ತೀಚೆಗೆ ಆರೋಪಿಗಳ ಲೆಕ್ಕದ ಬಗ್ಗೆ ದೂರುದಾರರಿಗೆ ಅನುಮಾನ ಬಂದಿತ್ತು. ಬೇರೊಬ್ಬ ಲೆಕ್ಕಾಧಿಕಾರಿ ಬಳಿ ಪರಿಶೀಲನೆ ನಡೆಸಿದಾಗ, ಆರೋಪಿಗಳ ಕೃತ್ಯ ಬಯಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆಸ್ತಿ ಖರೀದಿ, ಐಷಾರಾಮಿ ಜೀವನ: ‘ವಂಚನೆಯಿಂದ ಪಡೆದಿದ್ದ ಹಣವನ್ನು ಹಂಚಿಕೊಂಡಿದ್ದ ಆರೋಪಿಗಳು, ಹಲವೆಡೆ ಆಸ್ತಿ ಖರೀದಿಸಿದ್ದಾರೆ. ಅವುಗಳಿಗೆ ಸಂಬಂಧಪಟ್ಟ ದಾಖಲೆಗಳನ್ನು ಜಪ್ತಿ ಮಾಡಲಾಗಿದ್ದು, ಪರಿಶೀಲನೆ ನಡೆಸಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಅಪಾರ್ಟ್‌ಮೆಂಟ್ ಸಮುಚ್ಚಯವೊಂದರಲ್ಲಿ ಫ್ಲ್ಯಾಟ್ ಸಹ ಖರೀದಿಸಿದ್ದಾರೆ. ಜೊತೆಗೆ, ಇಬ್ಬರೂ ಐಷಾರಾಮಿ ಜೀವನ ನಡೆಸುತ್ತಿದ್ದರು’ ಎಂದು ತಿಳಿಸಿವೆ.



ಮ್ಯಾರಾಥಾನ್ ಕೆ.ಆರ್. ಪುರ ವಿಧಾನಸಭೆ ಕ್ಷೇತ್ರದಲ್ಲಿ ಆಯೋಜಿಸಿದ್ದ ‘ಭ್ರಷ್ಟಾಚಾರರಹಿತ– ಸ್ವಚ್ಛ ಕೆ.ಆರ್. ಪುರ’ ಮ್ಯಾರಾಥಾನ್ ಅನ್ನು ಸ್ಥಳೀಯ ಮುಖಂಡ ಡಿ.ಕೆ. ಮೋಹನ್ ಉದ್ಘಾಟಿಸಿದರು

ಪ್ರಜಾವಾಣಿ ಚಿತ್ರ

ವಿಚಾರಣಾಧೀನ ಕೈದಿಗಾಗಿ ತಂದಿದ್ದ ಮೊಬೈಲ್ ಜಪ್ತಿ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ವಿಚಾರಣಾಧೀನ ಮಹಿಳಾ ಕೈದಿಯೊಬ್ಬರಿಗೆ ನೀಡಲು ತಂದಿದ್ದ ಮೊಬೈಲ್ ಜಪ್ತಿ ಮಾಡಲಾಗಿದ್ದು, ಎಫ್‌ಐಆರ್ ದಾಖಲಾಗಿದೆ.

‘ವಿಚಾರಣಾಧೀನ ಕೈದಿ ಜಯಮ್ಮ ಎಂಬುವವರನ್ನು ಭೇಟಿಯಾಗಲು ಬಂದಿದ್ದ ರಾಮನಗರದ ಗುರು ಲಕ್ಷ್ಮಮ್ಮ ಎಂಬುವವರ ಬ್ಯಾಗ್‌ನಲ್ಲಿ ಮೊಬೈಲ್ ಪತ್ತೆಯಾಗಿದೆ. ಈ ಬಗ್ಗೆ ಜೈಲಿನ ಸಿಬ್ಬಂದಿ ದೂರು ನೀಡಿದ್ದಾರೆ. ಜಯಮ್ಮ ಹಾಗೂ ಗುರು ಲಕ್ಷ್ಮಮ್ಮ ಇಬ್ಬರ ವಿರುದ್ಧವೂ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪರಪ್ಪನ ಅಗ್ರಹಾರ ಠಾಣೆ ಪೊಲೀಸರು ಹೇಳಿದರು.

‘ಜ. 23ರಂದು ಮಧ್ಯಾಹ್ನ ಗುರು ಲಕ್ಷ್ಮಮ್ಮ ಜೈಲಿಗೆ ಬಂದಿದ್ದರು. ಬ್ಯಾಗ್‌ನಲ್ಲಿ ನೋಕಿಯಾ ಮೊಬೈಲ್, ಚಾರ್ಜರ್ ಹಾಗೂ ಇಯರ್ ಫೋನ್ ಇಟ್ಟುಕೊಂಡಿದ್ದರು. ಅದನ್ನು ಜಯಮ್ಮ ಅವರಿಗೆ ನೀಡುವುದು ಉದ್ದೇಶವಾಗಿತ್ತು. ಅನುಮಾನಗೊಂಡ ಸಿಬ್ಬಂದಿ, ಬ್ಯಾಗ್ ಪರಿಶೀಲಿಸಿದಾಗ ಮೊಬೈಲ್ ಪತ್ತೆಯಾಗಿದೆ’ ಎಂದು ಅವರು ತಿಳಿಸಿದರು.

ಘಾಟಿ ಸುಬ್ರಹ್ಮಣ್ಯ ಸ್ವಾಮಿ ತೆಪ್ಪೋತ್ಸವ

ಪ್ರಜಾವಾಣಿ ವಾರ್ತೆ

ತೂಬಗೆರೆ (ದೊಡ್ಡಬಳ್ಳಾಪುರ): ಇತಿಹಾಸ ಪ್ರಸಿದ್ಧ ಘಾಟಿ ಕ್ಷೇತ್ರದಲ್ಲಿ ಕುಮಾರ ಷಷ್ಠಿ ಅಂಗವಾಗಿ ಗುರುವಾರ ಸಂಜೆ ಸುಬ್ರಹ್ಮಣ್ಯ ಸ್ವಾಮಿ ತೆಪ್ಪೋತ್ಸವ ಕಾರ್ಯಕ್ರಮ ಅದ್ದೂರಿಯಾಗಿ ನಡೆಯಿತು.

ಕಲ್ಯಾಣಿಯನ್ನು ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ತೆಪ್ಪೋತ್ಸವ ಪ್ರಯುಕ್ತ ಭರತ ನಾಟ್ಯ, ಸುಗಮ ಸಂಗೀತ ಕಾರ್ಯಕ್ರಮ ನಡೆದವು. ತುಳು ಷಷ್ಠಿಯಂದು ಬ್ರಹ್ಮ ರಥೋತ್ಸವ ಮುಗಿದ ಒಂದು ತಿಂಗಳಿಗೆ ಬರುವ ಮಾಘ ಶುದ್ಧ ಪಂಚಮಿಯಂದು ತೆಪ್ಪೋತ್ಸವ ಆಚರಿಸುವುದು ವಾಡಿಕೆಯಾಗಿದೆ.

ಜ. 27ರಂದು ಕುಮಾರ ಷಷ್ಠಿ ಅಂಗವಾಗಿ ಸ್ವಾಮಿಗೆ ವಿಶೇಷ ಅಲಂಕಾರ ಸಹ ನಡೆಯಲಿದೆ.

ಗುರುವಾರ ಸಂಜೆ ಘಾಟಿ ಕ್ಷೇತ್ರದಲ್ಲಿ ಸ್ವಾಮಿಯ ಉತ್ಸವ ಮೂರ್ತಿಯನ್ನು ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಯಿತು. ನಂತರ ದೇವಾಲಯದ ಹೊರಭಾಗದಲ್ಲಿರುವ ಕಲ್ಯಾಣಿಯಲ್ಲಿ ತೆಪ್ಪೋತ್ಸವ ಕಾರ್ಯಕ್ರಮ ನಡೆಯಿತು.

ಅಪಾರ್ಟ್‌ಮೆಂಟ್ ಸಮುಚ್ಚಯವೊಂದರಲ್ಲಿ ಕಾರ್ಯನಿರ್ವಹಿಸುತಿದ್ದ ಕಾರ್ಪೆಂಟರ್

10ನೇ ಮಹಡಿಯಿಂದ ಬಿದ್ದು ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊಡಿಗೇಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ನಿರ್ಮಾಣ ಹಂತದ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ 10ನೇ ಮಹಡಿಯಿಂದ ಬಿದ್ದು ಕಾರ್ಪೆಂಟರ್ ಬಿಸ್ವಜಿತ್ ಸಹಾ (31) ಎಂಬುವವರು ಮೃತಪಟ್ಟಿದ್ದಾರೆ.

‘ಪಶ್ಚಿಮ ಬಂಗಾಳದ ಬಿಸ್ವಜಿತ್, ಕೆಲ ತಿಂಗಳ ಹಿಂದೆಯಷ್ಟೇ ನಗರಕ್ಕೆ ಬಂದಿದ್ದರು. ರಾಜೀವ್ ಗಾಂಧಿ ನಗರದ ಕೆನರಾ ಬ್ಯಾಂಕ್ ಬಡಾವಣೆಯಲ್ಲಿ ನಿರ್ಮಿಸುತ್ತಿರುವ ‘ಸುಹಾನ್ ಎಕ್ಸೊಟಿಕಾ’ ಅಪಾರ್ಟ್‌ಮೆಂಟ್ ಸಮುಚ್ಚಯದ ಕಟ್ಟಡದಲ್ಲಿ ಕೆಲಸ ಮಾಡುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ಜ. 21ರಂದು ಬೆಳಿಗ್ಗೆ ಕೆಲಸಕ್ಕೆ ಬಂದಿದ್ದ ಬಿಸ್ವಜಿತ್, 10ನೇ ಮಹಡಿಯಲ್ಲಿ ಕೆಲಸ ಮಾಡುತ್ತಿದ್ದರು. ಇದೇ ಸಂದರ್ಭದಲ್ಲಿ ಆಯತಪ್ಪಿ ನೆಲಮಹಡಿಗೆ ಬಿದ್ದಿದ್ದರು. ತೀವ್ರ ಗಾಯಗೊಂಡಿದ್ದ ಅವರನ್ನು ಸಮೀಪದ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ತಪಾಸಣೆ ನಡೆಸಿದ್ದ ವೈದ್ಯರು, ಮಾರ್ಗಮಧ್ಯೆಯೇ ಬಿಸ್ವಜಿತ್ ಮೃತಪಟ್ಟಿರುವುದಾಗಿ ಹೇಳಿದರು’ ಎಂದು ಪೊಲೀಸರು ಮಾಹಿತಿ ನೀಡಿದರು.

‘ಕೆಲಸದ ಸ್ಥಳದಲ್ಲಿ ಯಾವುದೇ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿರಲಿಲ್ಲ. ಇದರಿಂದಾಗಿಯೇ ಬಿಸ್ವಜಿತ್ ಮೃತಪಟ್ಟಿರುವುದಾಗಿ ಸಹ ಕಾರ್ಮಿಕ ದೂರು ನೀಡಿದ್ದಾರೆ. ಕಟ್ಟಡ ನಿರ್ಮಾಣದ ಗುತ್ತಿಗೆ ಪಡೆದಿದ್ದ ಫಾರ್ಚ್ಯೂನಾ ಅರ್ಬನ್ ಸ್ಕ್ಯಾಪ್ ಕಂಪನಿ, ಉಪ ಗುತ್ತಿಗೆ ಪಡೆದಿದ್ದ ಎಎನ್‌ಎಸ್ ಎಂಟರ್‌ಪ್ರೈಸಸ್ ಹಾಗೂ ಮಾರ್ವೆಲ್ ಕನ್‌ಸ್ಟ್ರಕ್ಷನ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.

ಕದ್ದ ಬೈಕ್‌ನಲ್ಲಿ ಸುತ್ತಾಡಿ ಸರ ಕಳವು

ಬೆಂಗಳೂರು: ನಗರದ ಹಲವೆಡೆ ನಡೆದಿದ್ದ ಕಳ್ಳತನ ಪ್ರಕರಣ ಸಂಬಂಧ ಮೂವರು ಆರೋಪಿಗಳನ್ನು ಅಶೋಕನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಚಾಮರಾಜಪೇಟೆಯ ಸೈಯದ್ ಖಾಸೀಫ್ (22), ಫರೀದ್ ಅಹ್ಮದ್ (20) ಹಾಗೂ ಪಾದರಾಯನಪುರದ ಸುಲ್ತಾನ್ ಪಾಷಾ (27) ಬಂಧಿತರು. ಇವರಿಂದ 48.50 ಗ್ರಾಂ ಚಿನ್ನದ ಸರ, ಮೊಬೈಲ್ ಹಾಗೂ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಬಿಟಿಎಂ ಬಡಾವಣೆಯಲ್ಲಿ ಬೈಕ್ ಕದ್ದಿದ್ದ ಆರೋಪಿಗಳು, ಅದರಲ್ಲಿಯೇ ನಗರದ ಹಲವೆಡೆ ಸುತ್ತಾಡುತ್ತಿದ್ದರು. ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದವರ ಮೊಬೈಲ್ ಹಾಗೂ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗುತ್ತಿದ್ದರು’ ಎಂದು ತಿಳಿಸಿದರು.

‘ವೃದ್ಧೆಯೊಬ್ಬರ ಚಿನ್ನದ ಸರವನ್ನು ಆರೋಪಿಗಳು ಇತ್ತೀಚೆಗೆ ಕಿತ್ತುಕೊಂಡು ಹೋಗಿದ್ದರು. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು, ಕೃತ್ಯ ನಡೆದ ಸ್ಥಳದಲ್ಲಿದ್ದ ಸಿ.ಸಿ.ಟಿ.ವಿ ಕ್ಯಾಮೆರಾ ಪರಿಶೀಲಿಸಲಾಗಿತ್ತು. ಕೆಲ ಸುಳಿವು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ. ಬಂಧಿತ ಸುಲ್ತಾನ್ ಪಾಷಾ, ಕದ್ದ ವಸ್ತುಗಳನ್ನು ವಿಲೇವಾರಿ ಮಾಡುತ್ತಿದ್ದ’ ಎಂದು ಪೊಲೀಸರು ಹೇಳಿದರು.

ನಿವೃತ್ತ ನ್ಯಾಯಮೂರ್ತಿ ಗೋಪಾಲಗೌಡ ಅಭಿಮತ

ಸಂವಿಧಾನದ ಮರುವ್ಯಾಖ್ಯಾನಕ್ಕೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶ್ರಮ, ತಾಳ್ಮೆ ಹಾಗೂ ದೂರದೃಷ್ಟಿಯಿಂದ ರೂಪಿಸಿದ ಸಂವಿಧಾನವನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಮರು ವ್ಯಾಖ್ಯಾನ ಮಾಡಲಾಗುತ್ತಿದೆ' ಎಂದು ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ ಹೇಳಿದರು.

ಸೌಹಾರ್ದ ಭಾರತ ಸಂಸ್ಥೆ, ಹಶಿ ಥಿಯೇಟರ್ ಫೋರಂ ಗುರುವಾರ ಆಯೋಜಿಸಿದ್ದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಭಾರತದ ಮಹಾನಾಯಕರು ಸೌಹಾರ್ದ, ಸಮಾನತೆ, ಜಾತ್ಯತೀತ, ಸಾಮಾಜವಾದ, ನ್ಯಾಯ, ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವವಿರುವ ಅಭೂತಪೂರ್ವ ಲಿಖಿತ ಸಂವಿಧಾನವನ್ನು ದೇಶದ ಜನರಿಗೆ ನೀಡಿದ್ದಾರೆ. ಪ್ರಸ್ತಾವನೆಯೇ ಸಂವಿಧಾನದ ಆಶಯವನ್ನು ಬಿಂಬಿಸುತ್ತದೆ. ಅಂತಹ ಸಂವಿಧಾನವನ್ನು ಬದಲಾಯಿಸುವ ಸಾಹಸ ಮಾಡಬಾರದು' ಎಂದು ಹೇಳಿದರು.



ನಗರದಲ್ಲಿ ಗುರುವಾರ ಸೌಹಾರ್ದ ಭಾರತ ಸಂಸ್ಥೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಾಹಿತಿ ಬರಗೂರು ರಾಮಚಂದ್ರಪ್ಪ, ನಿವೃತ್ತ ನ್ಯಾ.ವಿ.ಗೋಪಾಲ ಗೌಡ, ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ ಬಿ.ಎಲ್. ಶಂಕರ್, ಸೌಹಾರ್ದ ಭಾರತದ ಸಂಚಾಲಕ ಎಸ್.ಆರ್. ಮೆಹ್ರುಜ್ ಖಾನ್ ಇದ್ದಾರೆ. –ಪ್ರಜಾವಾಣಿ ಚಿತ್ರ.

ಸಾಹಿತಿ ಬರಗೂರು ರಾಮಚಂದ್ರಪ್ಪ, 'ಸಾಮಾಜಿಕ ನ್ಯಾಯ, ಹಕ್ಕಿನ ಕುರಿತು ಸದಾ ಧ್ವನಿ ಎತ್ತುತ್ತಿದ್ದ ದೇಶದಲ್ಲಿ ಸೌಹಾರ್ದ ಕುರಿತು ಮಾತನಾಡಬೇಕಿರುವುದು ವಿಪರ್ಯಾಸ. ಒಟ್ಟಿಗೆ ಬಾಳುವ ನಾವು ನಮ್ಮವರ ಎದುರೇ ನ್ಯಾಯ ಕೇಳುವ ಪರಿಸ್ಥಿತಿ ಇಂದು ಸೃಷ್ಟಿಯಾಗಿದೆ' ಎಂದು ಹೇಳಿದರು.

'ಕನ್ನಡ ಸಾಹಿತ್ಯ ಪರಂಪರೆಯಲ್ಲೂ ಸಾಮಾಜಿಕ ನ್ಯಾಯ ಚರ್ಚೆಯ ವಿಷಯವಾಗಿತ್ತು. ಅದನ್ನು ಹಿಮ್ಮೆಟ್ಟಿಸಿ ಸಾಮರಸ್ಯದ ಚರ್ಚೆ ನಡೆಸಲಾಗುತ್ತಿದೆ' ಎಂದು ಹೇಳಿದರು.

ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ. ಎಲ್. ಶಂಕರ್, 'ಸಂವಿಧಾನ ರಚನಾ ಸಭೆಯ ಸದಸ್ಯರ ಸ್ಥಿತಿ ಪ್ರಜ್ಞೆಯ ಕಾರಣದಿಂದಾಗಿ ಸುಭದ್ರ ಸಂವಿಧಾನ ರಚಿಸಲು ಸಾಧ್ಯವಾಯಿತು. ವಿಭಜನೆ, ಕೋಮು ಸಂಘರ್ಷ, ಕಲುಷಿತ ವಾತಾವರಣ ಇದ್ದರೂ, ವೈವಿಧ್ಯ ಬಹುತ್ವದ ಭಾರತಕ್ಕೆ ಶ್ರೇಷ್ಠ ಸಂವಿಧಾನ ನೀಡಿದ್ದಾರೆ. ನಿಷ್ಪಕ್ಷಪಾತ ಚುನಾವಣೆ, ಶಾಂತಿಯುತ ಅಧಿಕಾರ ಬದಲಾವಣೆ ಸಾಧ್ಯವಾಗಿರುವುದೇ ಸಂವಿಧಾನದ ಗಟ್ಟಿತನಕ್ಕೆ ಸಾಕ್ಷಿ' ಎಂದು ಬಣ್ಣಿಸಿದರು.

ನಂತರ ನಡೆದ ಸೌಹಾರ್ದ ಮತ್ತು ಬಹುತ್ವದ ಚರ್ಚೆಯಲ್ಲಿ ಮಾಜಿ ಐಎಎಸ್ ಅಧಿಕಾರಿ ಸಸಿಕಾಂತ್ ಸೆಂಥಿಲ್, ಸಾಮಾಜಿಕ ಹೋರಾಟಗಾರ್ತಿ ಶಬ್ನಂ ಹಶ್ಮಿ, ಇತಿಹಾಸ ತಜ್ಞೆ ಮೃದುಲಾ ಮುಖರ್ಜಿ, ಪತ್ರಕರ್ತೆ ಸಭಾ ನಖ್ವಿ ಅವರು ಚರ್ಚೆ ನಡೆಸಿದರು. ಕಾಲೇಜು ವಿದ್ಯಾರ್ಥಿಗಳು, ಯುವಜನರು ಬೀದಿನಾಟಕ, ಸಾಂಸ್ಕೃತಿಕ ವೇಷಭೂಷಣ, ನೃತ್ಯಗಳನ್ನು ಪ್ರದರ್ಶಿಸಿದರು. ಭೂಮಿತಾಯಿ ಬಳಗದವರು ಗೀತೆಗಳನ್ನು ಹಾಡಿದರು.

ಸಂಚಾಲಕರಾದ ಮೆಹ್ರುಜ್ ಖಾನ್, ಡಾ.ಟಿ.ಎಚ್.ಲವಕುಮಾರ್, ವಿಜಯ್ ಸೀತಪ್ಪ ಉಪಸ್ಥಿತರಿದ್ದರು.

ಕೆಯುಡಬ್ಲ್ಯುಜೆ: ದತ್ತಿ ನಿಧಿ ಪ್ರಶಸ್ತಿಗೆ ಪಾಗೋಜಿ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿಯ ಮಾಧ್ಯಮ ಸಂಯೋಜಕರಾಗಿದ್ದ ಗುರುಲಿಂಗ ಸ್ವಾಮಿ ಹೊಳಿಮಠ ಅವರ ಹೆಸರಿನಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ (ಕೆಯುಡಬ್ಲ್ಯುಜೆ) ಸ್ಥಾಪಿಸಿರುವ ವಾರ್ಷಿಕ ದತ್ತಿ ನಿಧಿ ಪ್ರಶಸ್ತಿಗೆ ಪತ್ರಕರ್ತ ಶಂಕರ ಪಾಗೋಜಿ ಅವರನ್ನು ಆಯ್ಕೆ ಮಾಡಲಾಗಿದೆ.

ಸದ್ಯ ಮುಖ್ಯಮಂತ್ರಿಯ ಮಾಧ್ಯಮ ಸಂಯೋಜಕರಾಗಿರುವ ಪಾಗೋಜಿ, ವಿವಿಧ ಮುದ್ರಣ ಮತ್ತು ದೃಶ್ಯ ಮಾಧ್ಯಮಗಳಲ್ಲಿ ಕೆಲಸ ಮಾಡಿದ್ದಾರೆ. ವಿಜಯಪುರದಲ್ಲಿ ಫೆ.4 ಮತ್ತು 5 ರಂದು ನಡೆಯಲಿರುವ ಪತ್ರಕರ್ತರ 37ನೇ ರಾಜ್ಯ ಸಮ್ಮೇಳನದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ದಿವಂಗತ ಗುರುಲಿಂಗ ಸ್ವಾಮಿ ಹೊಳಿಮಠ ಹೆಸರಿನ ದತ್ತಿನಿಧಿಗೆ ಚಾಲನೆ ನೀಡಿ, ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಖಾದಿ ಉತ್ಸವಕ್ಕೆ ಮುಖ್ಯಮಂತ್ರಿ ಚಾಲನೆ

'ಖಾದಿ, ಗ್ರಾಮೋದ್ಯೋಗಕ್ಕೆ ಆದ್ಯತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಖಾದಿಗೆ ಉತ್ತಮ ಭವಿಷ್ಯವಿದೆ. ಯಾರೂ ಭಯ ಪಡುವ ಅವಶ್ಯಕತೆ ಇಲ್ಲ. ಖಾದಿ ಮತ್ತು ಗ್ರಾಮೋದ್ಯೋಗದಿಂದ ಗ್ರಾಮೀಣ ಭಾಗದಲ್ಲಿ ಉದ್ಯೋಗ ಸೃಷ್ಟಿಯಾಗುತ್ತಿದೆ. ಹೀಗಾಗಿ, ಈ ಬಾರಿಯ ಬಜೆಟ್‌ನಲ್ಲಿ ಖಾದಿ ಮತ್ತು ಗ್ರಾಮೋದ್ಯೋಗಕ್ಕೆ ಆದ್ಯತೆ ನೀಡಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ನಗರದ ಅರಮನೆ ಮೈದಾನದಲ್ಲಿ ಆಯೋಜಿಸಲಾಗಿದ್ದ ರಾಷ್ಟ್ರ ಮಟ್ಟದ ಖಾದಿ ಮತ್ತು ಗ್ರಾಮೋದ್ಯೋಗ ವಸ್ತು ಪ್ರದರ್ಶನದ ಉದ್ಘಾಟಿಸಿ ಅವರು ಮಾತನಾಡಿದರು.

'ಪಾಲಿಯೆಸ್ಟರ್ ಬಟ್ಟೆಗಳ ಉಪಯೋಗ ಹೆಚ್ಚಾದಾಗ ಖಾದಿ ವಲಯಕ್ಕೆ ತೊಂದರೆಯಾಗಿತ್ತು. ಆದರೆ, ಈಗ ಸಾಕಷ್ಟು ಬದಲಾವಣೆಯಾಗಳಾಗಿವೆ. ಖಾದಿ ಬಟ್ಟೆಗಳು, ಸಾವಯವ ಆಹಾರಕ್ಕೆ ಬೇಡಿಕೆ ಹೆಚ್ಚಾಗುತ್ತಿದೆ. ಅಮೆಜಾನ್ ಹಾಗೂ ಫ್ಲಿಪ್ ಕಾರ್ಟ್‌ನಂತಹ ಸಂಸ್ಥೆಗಳು ಖಾದಿ ವಸ್ತುಗಳ ಖರೀದಿಗೆ ಆಸಕ್ತಿವಹಿಸಿವೆ. ನೇರವಾಗಿ ಉತ್ಪಾದಕರಿಂದ ಮಾರುಕಟ್ಟೆಗೆ ಕಳುಹಿಸುವ ವ್ಯವಸ್ಥೆ ಮಾಡುತ್ತಿದ್ದೇವೆ' ಎಂದು ತಿಳಿಸಿದರು.



ನಗರದ ಅರಮನೆ ಮೈದಾನದಲ್ಲಿ ಗುರುವಾರ ಆರಂಭವಾದ ಖಾದಿ ಉತ್ಸವದಲ್ಲಿ ಜನರು ಖರೀದಿಯಲ್ಲಿ ತೊಡಗಿದ್ದರು –ಪ್ರಜಾವಾಣಿ ಚಿತ್ರ

'ಖಾದಿ ಗ್ರಾಮೋದ್ಯೋಗ ಸಂಸ್ಥೆಯ ಆರ್ಥಿಕವಾಗಿ ಬಲಪಡಿಸಲು ಕ್ರಮ ಕೈಗೊಳ್ಳಲಾಗುವುದು. ಬಾಕಿ ಉಳಿದಿರುವ ಪ್ರೋತ್ಸಾಹಧನದ ಮೊತ್ತ ₹74 ಕೋಟಿ ರೂಪಾಯಿ ಅನುಮೋದನೆ ನೀಡಲಾಗುವುದು' ಎಂದರು.

ವಿಧಾನಪರಿಷತ್ ಛಲವಾದಿ ನಾರಾಯಣಸ್ವಾಮಿ, ಖಾದಿ ಮಂಡಳಿ ಅಧ್ಯಕ್ಷ ನಾಗರಾಜು ಇದ್ದರು.

ಬಿಡಿಎ: ಭೂಸ್ವಾಧೀನ ವಿರೋಧಿಸಿ ಬೈಕ್ ರ್‍ಯಾಲಿ

ಯಲಹಂಕ: ಡಾ.ಶಿವರಾಮ ಕಾರಂತ ಬಡಾವಣೆ ನಿರ್ಮಾಣಕ್ಕಾಗಿ ಬಿಡಿಎ ಭೂಸ್ವಾಧೀನ ಪ್ರಕ್ರಿಯೆ ವಿರೋಧಿಸಿ 17 ಹಳ್ಳಿಗಳ ರೈತ ಮಹಿಳೆಯರಿಂದ ಫೆ.6ರಂದು ಬೃಹತ್ ಪೊರಕೆ ಚಳವಳಿ ನಡೆಸಲಿದ್ದಾರೆ. ಈ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಗುರುವಾರ ಬೈಕ್ ರ್‍ಯಾಲಿ ಹಮ್ಮಿಕೊಳ್ಳಲಾಗಿತ್ತು.

ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದ ರೈತರು, ರ್‍ಯಾಲಿಗೆ ಚಾಲನೆ ನೀಡಿದರು. ರಾಮಗೊಂಡನಹಳ್ಳಿಯಿಂದ ಆರಂಭವಾದ ಬೈಕ್ ರ್‍ಯಾಲಿ ಆವಲಹಳ್ಳಿ, ನಾಗೇನಹಳ್ಳಿ, ಕೆಂಪನಹಳ್ಳಿ, ವೀರಸಾಗರ, ಬೆಟ್ಟಹಳ್ಳಿ, ಶಾಮರಾಜಪುರ, ಬ್ಯಾಲಕೆರೆ, ಮುದ್ದಿನಪಾಳ್ಯ, ಕಾಳತಮ್ಮನಹಳ್ಳಿ, ಕೆಂಪಾಪುರ, ಗಾಣಿಗರಹಳ್ಳಿ, ಸೋಮಶೆಟ್ಟಿಹಳ್ಳಿ, ಗುಣಿ ಅಗ್ರಹಾರ, ಮೇಟಿ ಅಗ್ರಹಾರ ಲಕ್ಷ್ಮೀಪುರ ಗ್ರಾಮಗಳಲ್ಲಿ ಸಂಚರಿಸಿ, ವಡೇರಹಳ್ಳಿಯಲ್ಲಿ ಸಂಜೆ 4 ಗಂಟೆಗೆ ಕೊನೆಗೊಂಡಿತು.



ಡಾ.ಶಿವರಾಮ ಕಾರಂತ ಬಡಾವಣೆ ನಿರ್ಮಾಣಕ್ಕೆ ಬಿಡಿಎ ಭೂಸ್ವಾಧೀನ ಪ್ರಕ್ರಿಯೆ ವಿರೋಧಿಸಿ ರೈತರು ಗುರುವಾರ ಬೈಕ್ ರ್‍ಯಾಲಿ ನಡೆಸಿದರು

ರೈತ ಮುಖಂಡರಾದ ಎಂ.ರಮೇಶ್, ರೈತ ಮುಖಂಡ ಮುನಿರಾಜು, ಕಾಂಗ್ರೆಸ್ ಮುಖಂಡ ಕೇಶವ ರಾಜಣ್ಣ, ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಯೋಜಕ ವಿ.ನಾಗರಾಜ್, ಪ್ರಜಾ ವಿಮೋಚನಾ ಚಳವಳಿ(ಸ್ವಾಭಿಮಾನ) ರಾಜ್ಯ ಘಟಕದ ಅಧ್ಯಕ್ಷ ಮುನಿಆಂಜಿನಪ್ಪ, ರೈತ ಮುಖಂಡರಾದ ಪಂಚಾಕ್ಷರಿ, ವಸಂತ್, ಬ್ಯಾಲಕೆರೆ ಆನಂದ್ ಇದ್ದರು.

ನ್ಯಾಷನಲ್ ಲಾ ಸ್ಕೂಲ್‌ಗೆ ಮತ್ತೊಂದು ಪತ್ರ

ಬೆಂಗಳೂರು: 'ರಾಜ್ಯ ಸರ್ಕಾರ 2020ರಲ್ಲಿ ತಂದ ತಿದ್ದುಪಡಿ ನಿಯಮಗಳ ಪ್ರಕಾರ ರಾಜ್ಯದ ವಿದ್ಯಾರ್ಥಿಗಳಿಗೆ ಅಖಿಲ ಭಾರತೀಯ ಕೋಟಾ ಹೊರತುಪಡಿಸಿ, ಶೇ 25ರಷ್ಟು ಸೀಟುಗಳನ್ನು ಮೀಸಲಿಡುವುದು ಕಡ್ಡಾಯ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಅವರು 'ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ' ಕುಲಪತಿಗೆ ಮತ್ತೊಂದು ಪತ್ರ ಬರೆದಿದ್ದಾರೆ.

'ಕೆಲವು ದಿನಗಳ ಹಿಂದೆ ಪತ್ರ ಬರೆದರೂ, ಅಖಿಲ ಭಾರತಮಟ್ಟದ ಮೆರಿಟ್ ಕೋಟಾದಡಿ ಆಯ್ಕೆಯಾದ ರಾಜ್ಯದ ವಿದ್ಯಾರ್ಥಿಗಳನ್ನೇ ಸ್ಥಳೀಯ ಮೀಸಲಿನಡಿ ಪರಿಗಣಿಸಿ, ದಾರಿ ತಪ್ಪಿಸುತ್ತಿರುವುದು ಸಹಜ ನ್ಯಾಯದ ತತ್ವಕ್ಕೆ ವಿರುದ್ಧ. ವಿಶಾಖಪಟ್ಟಣ, ರಾಯಪುರ, ಕೋಲ್ಕತ್ತ ಮತ್ತಿತರ ನಗರಗಳಲ್ಲಿ ಇಂತಹ ಕಾನೂನು ಶಿಕ್ಷಣ ಸಂಸ್ಥೆಗಳಲ್ಲಿ ಆಯಾ ರಾಜ್ಯದ ವಿದ್ಯಾರ್ಥಿಗಳಿಗೆ ಶೇ 25ರಷ್ಟು ಸೀಟುಗಳನ್ನು ಕೊಡಲಾಗುತ್ತಿದೆ. ಇದೇ ಮಾದರಿಯನ್ನು ಬೆಂಗಳೂರಿನ ಲಾ ಸ್ಕೂಲ್ ಅನುಸರಿಸಬೇಕು' ಎಂದಿದ್ದಾರೆ.

'2022ನೇ ಸಾಲಿನಲ್ಲಿ ಸಂಸ್ಥೆ 180 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿದೆ. 45 ಸೀಟುಗಳನ್ನು ರಾಜ್ಯದ ವಿದ್ಯಾರ್ಥಿಗಳಿಗೆ ಸ್ಥಳೀಯ ಮೀಸಲಾತಿ ಕೋಟಾದಲ್ಲಿ ಹಂಚಿಕೆ ಮಾಡಬೇಕಿತ್ತು. ಆದರೆ, ಅಖಿಲ ಭಾರತೀಯ ಮೆರಿಟ್ ಕೋಟಾದಡಿ ಆಯ್ಕೆಯಾಗಿದ್ದ ರಾಜ್ಯದ 13 ವಿದ್ಯಾರ್ಥಿಗಳನ್ನೂ ಸ್ಥಳೀಯ ಮೀಸಲಾತಿಯಡಿ ಪರಿಗಣಿಸಲಾಗಿದೆ. ಉಳಿದ 32 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗಿದೆ. ಇದರಿಂದ ರಾಜ್ಯದ 13 ವಿದ್ಯಾರ್ಥಿಗಳು ಅವಕಾಶ ಕಳೆದುಕೊಂಡಿದ್ದಾರೆ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'2023ರಲ್ಲಿ 240 ವಿದ್ಯಾರ್ಥಿಗಳಿಗೆ ಅವಕಾಶವಿದೆ. 60 ಸೀಟುಗಳನ್ನು ಸ್ಥಳೀಯ ವಿದ್ಯಾರ್ಥಿಗಳಿಗೆ ಕೊಡಬೇಕು. ಆಯ್ಕೆ ಪ್ರಕಟಿಸಿದ್ದಲ್ಲಿ ಲೋಪವನ್ನು ಸರಿಪಡಿಸಬೇಕು. ಅಕಸ್ಮಾತ್ ಆಗದಿದ್ದರೆ 'ಸೂಪರ್-ನ್ಯೂಮರಿ' ಮಾನದಂಡ ಪರಿಗಣಿಸಿ, ಆಯ್ಕೆ ಪಟ್ಟಿ ಪರಿಷ್ಕರಿಸಬೇಕು' ಎಂದು ಸೂಚಿಸಿದ್ದಾರೆ.

ವೇಣುಗೋಪಾಲ ಸ್ವಾಮಿ ರಥೋತ್ಸವ

ಪ್ರಜಾವಾಣಿ ವಾರ್ತೆ

ಆನೇಕಲ್: ಪಟ್ಟಣದ ವೇಣುಗೋಪಾಲ ಸ್ವಾಮಿ ರಥೋತ್ಸವ ಗುರುವಾರ ವೈಭವದಿಂದ ನಡೆಯಿತು. ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ನೂರಾರು ಭಕ್ತರು ಪಾಲ್ಗೊಂಡಿದ್ದರು.

ಕಲ್ಯಾಣ ಮಂಟಪ ರಸ್ತೆಯಲ್ಲಿನ ದೇವಾಲಯದಲ್ಲಿ ರಥೋತ್ಸವ ಪ್ರಯುಕ್ತ ವಿಶೇಷ ಅಲಂಕಾರ, ಪೂಜೆ ಏರ್ಪಡಿಸಲಾಗಿತ್ತು. ಮಧ್ಯಾಹ್ನ ಧಾರ್ಮಿಕ ಕಾರ್ಯ ನೆರವೇರಿಸಿದ ನಂತರ ಅಲಂಕೃತ ರಥದಲ್ಲಿ ವೇಣುಗೋಪಾಲ ಸ್ವಾಮಿಯ ಉತ್ಸವ ಮೂರ್ತಿಯನ್ನು ಕೂರಿಸಲಾಯಿತು.

ನೆರೆದಿದ್ದ ಭಕ್ತರು ಗೋವಿಂದ ಗೋವಿಂದ ಎಂಬ ಜಯಘೋಷ ಮಾಡಿ ದವನ ಚುಚ್ಚಿದ ಬಾಳೆಹಣ್ಣನ್ನು ರಥದೆಡೆಗೆ ಎಸೆಯುವ ಮೂಲಕ ಭಕ್ತಿ ಸಮರ್ಪಿಸಿದರು. ರಥವು ಚರ್ಚ್ ರಸ್ತೆ, ತ್ಯಾಗರಾಜ ರಸ್ತೆ, ತಿಲಕ್ ವೃತ್ತದ ಮೂಲಕ ಹಾದು ಸಂಜೆ 5ರ ವೇಳೆಗೆ ದೇವಾಲಯ ತಲುಪಿತು. ಮನೆಗಳ ಬಳಿ ಭಕ್ತರು ಸ್ವಾಮಿಗೆ ಪೂಜೆ ಸಲ್ಲಿಸಿದರು. ಅರವಟಿಗೆ ಸ್ಥಾಪಿಸಿ ನೀರು ಮಜ್ಜಿಗೆ, ಪಾನಕ, ಕೋಸಂಬರಿ ವಿತರಿಸಿದರು.

ಚಿತ್ರಾವಳಿ



ನಗರದ ಅಲುಮ್ನಿ ಅಸೋಸಿಯೇಷನ್ ಸಭಾಂಗಣದಲ್ಲಿ ಭಾರತೀಯ ವಿದ್ಯಾರ್ಥಿ ಸಂಘ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ ಹಾಗೂ ಅವರ ಪತ್ನಿ ಭಾಗ್ಯ ಚಿನ್ನಸ್ವಾಮಿ ಅವರನ್ನು ಸನ್ಮಾನಿಸಲಾಯಿತು. ಅಕ್ಕ ಐಎಎಸ್ ಅಕಾಡೆಮಿಯ ಮುಖ್ಯಸ್ಥ ಶಿವಕುಮಾರ್, ರಾಜ್ಯ ಸರ್ಕಾರ ನಿವೃತ್ತ ಕಾರ್ಯದರ್ಶಿ ಬಾಬುರಾವ್ ಮುಡಬಿ, ಬೇಲೂರು ರಘುನಂದನ್, ಸಾಹಿತಿ ಬರಗೂರು ರಾಮಚಂದ್ರಪ್ಪ, ನಿವೃತ್ತ ಡಿಜಿಪಿ ಮರಿಸ್ವಾಮಿ ಇದ್ದರು.
–ಪ್ರಜಾವಾಣಿ ಚಿತ್ರ



ದಕ್ಷಿಣ ಕನ್ನಡ ಜೈನ ಮೈತ್ರಿಕೂಟದ 36ನೇ ವಾರ್ಷಿಕೋತ್ಸವದಲ್ಲಿ ಮಹಾಕವಿ ರತ್ನಾಕರವರ್ಣಿ ಪ್ರಶಸ್ತಿಯನ್ನು ಮೂಡುಬಿದಿರೆಯ ವಾಣಿ ಬಿ.ಆರ್.ಶೆಟ್ಟಿ ಅವರಿಗೆ ಸಾಹಿತಿ ಚಂದ್ರಶೇಖರ ಕಂಬಾರ ಅವರು ಪ್ರದಾನ ಮಾಡಿದರು. ದಕ್ಷಿಣ ಕನ್ನಡ ಜೈನ ಮೈತ್ರಿಕೂಟದ ಸ್ಥಾಪಕ ಅಧ್ಯಕ್ಷ ಡಿ. ಸುರೇಂದ್ರಕುಮಾರ್, ಅಧ್ಯಕ್ಷೆ ಅನಿತಾ ಸುರೇಂದ್ರಕುಮಾರ್ ಇದ್ದಾರೆ. ಪ್ರಜಾವಾಣಿ ಚಿತ್ರ

ಕುಸ್ತಿಗಿಳಿದ ಭೂಮಿ

ಕಿನ್ನರಿಯ 'ಮಣಿ'ಯಾಗಿ ಮನೆಮಾತಾಗಿದ್ದ ಭೂಮಿ ಶೆಟ್ಟಿ ತೆಲುಗು ಕಿರುತೆರೆ ಮತ್ತು ಕನ್ನಡ, ತೆಲುಗಿನ ಬೆಳ್ಳಿತೆರೆಯನ್ನೂ ಆವರಿಸಿದರು. ನಿಧಾನಗತಿಯ ಸಿನಿಪಯಣದ ಅವರೀಗ 'ಕೆಂಡದ ಸೆರಗು' ಹಿಡಿದು ಕುಸ್ತಿಪಟುವಾಗಿದ್ದಾರೆ. ಬರಹ, ಬೈಕ್ ಸವಾರಿ, ಯಕ್ಷಗಾನದಲ್ಲಿ ಮಿಂಚಿರುವ ಭೂಮಿ ಅವರೊಂದಿಗೆ ಮಾತುಕತೆ.



ಭೂಮಿ ಶೆಟ್ಟಿ

ಶರತ್ ಹೆಗ್ಡೆ

● ಬಣ್ಣದ ಬದುಕಿಗೆ ಕಾಲಿಟ್ಟದ್ದು ಹೇಗೆ?

ಬಾಲ್ಯದಲ್ಲಿ ಭರತನಾಟ್ಯ, ಯಕ್ಷಗಾನ ನನ್ನ ಬದುಕಿನ ಭಾಗವೇ ಆಗಿತ್ತು. ಜೊತೆಗೆ ಸಾಕಷ್ಟು ಬರೆಯುತ್ತಿದ್ದೆ. ಪ್ರಬಂಧ, ಪತ್ರ ಬರಹ ನನಗೆ ಇಷ್ಟ. ಧಾರಾವಾಹಿ, ಸಿನಿಮಾಗಳಲ್ಲಿ ಕಾಣಿಸಿಕೊಂಡಿದ್ದಕ್ಕಿಂತ ಭಿನ್ನವಾಗಿಯೇ ನನ್ನ ಬದುಕು ಇದೆ. ಸಹಜವಾಗಿ ಮನೆಯಲ್ಲಿ ಈ ಲೋಕಕ್ಕೆ ಬರಲು ಪ್ರೋತ್ಸಾಹ ಇರಲಿಲ್ಲ. ಕುಂದಾಪುರ ತಾಲ್ಲೂಕಿನ ಅಂಬಾಗಿಲು ಸಮೀಪ ಗಂಟಿಹೊಳೆ ನಮ್ಮ ಊರು. ಪಿಯು ತನಕ ಊರಿನಲ್ಲಿಯೇ ಓದಿದೆ. ಮುಂದೆ ಎಂಜಿನಿಯರಿಂಗ್ ಓದಲು ಬೆಂಗಳೂರಿಗೆ ಬಂದೆ. ಆದರೆ, ಹೋಗಿದ್ದು ಎರಡೇ ವರ್ಷ. ಬಣ್ಣದ ಲೋಕ ನನ್ನನ್ನು ಪ್ರಬಲವಾಗಿ ಸೆಳೆಯಿತು. ಕಿನ್ನರಿ ಧಾರಾವಾಹಿಯಲ್ಲಿ ಅವಕಾಶ ಬಂದಿತು. ಮುಂದೆ ತೆಲುಗು ಅವಕಾಶಗಳೂ ಬಂದವು. ಹೀಗೆ ನಿರಂತರ ಶೂಟಿಂಗ್, ಅಭಿನಯ ಇತ್ಯಾದಿಯಿಂದಾಗಿ ಎಂಜಿನಿಯರಿಂಗ್‌ಗೆ ಬಾಯ್ ಬಾಯ್ ಹೇಳಬೇಕಾಯಿತು. ಈಗ ಟಿವಿ, ಸಿನಿಮಾದಲ್ಲಿ ನೋಡಿದ ನನ್ನ ಅಪ್ಪ, ಅಮ್ಮ, ಅಜ್ಜ, ಅಜ್ಜಿ, ಬಂಧುಗಳು ಖುಷಿಪಡುತ್ತಿದ್ದಾರೆ. ಈಗ ಕನ್ನಡ ಸಾಹಿತ್ಯದಲ್ಲಿ ಬಿಎ ಪದವಿ ಓದುತ್ತಿದ್ದೇನೆ.

● ಸಿನಿಮಾ ಪ್ರಯಾಣ ಹೇಗೆ ಸಾಗಿದೆ?

ಕೋವಿಡ್ ಕಾಲದಲ್ಲಿ 'ಇಕ್ಕಟ್' ಚಿತ್ರ ಒಂದಿಷ್ಟು ಹೆಸರು, ಖ್ಯಾತಿ ತಂದು ಕೊಟ್ಟಿತು. ಹಾಗೆ ನೋಡಿದರೆ ಒಟ್ಟಾರೆ ಸಿನಿಮಾ ಪಯಣ ತುಂಬಾ ನಿಧಾನವಾಗಿಯೇ ಇದೆ. ಅವಕಾಶಗಳು ಬಂದದ್ದೂ ನಿಧಾನವಾಗಿಯೇ. ಸದ್ಯ ಅನ್‌ಲಾಕ್ ರಾಘವ ಮತ್ತು ತೆಲುಗಿನ ಒಂದು ಚಿತ್ರ ಕೈಯಲ್ಲಿವೆ.

● ಧಾರಾವಾಹಿ – ಸಿನಿಮಾ ಯಾವುದು ಹೆಚ್ಚು ಇಷ್ಟ?

ಎರಡೂ ತುಂಬಾ ಇಷ್ಟವೇ. ಎರಡೂ ಪ್ರಕಾರಗಳಲ್ಲಿ ಕಥೆ ಹೇಳುವ ರೀತಿ ಸ್ವಲ್ಪ ಬೇರೆ ಬೇರೆ. ಧಾರಾವಾಹಿಗಳು ನನ್ನನ್ನು ಇಲ್ಲಿಗೆ ಪರಿಚಯಿಸಿವೆ. ಕನ್ನಡ ಧಾರಾವಾಹಿಯ ಅಭಿನಯ ನೋಡಿ ತೆಲುಗಿನಲ್ಲಿಯೂ ಅವಕಾಶ ಸಿಕ್ಕಿತು. ಸಿನಿಮಾ ಅಭಿನಯ ಸಹಜವಾಗಿ ನನ್ನ ಆಸೆಯೂ ಆಗಿತ್ತು. ಅದೂ ಈಡೇರಿದೆ.

● ಏನಿದು 'ಕೆಂಡದ ಸೆರಗು'?

ಇದು ತುಂಬಾ ಸೂಕ್ಷ್ಮವಾದ ಆದರೆ, ಗಟ್ಟಿಯಾದ ಕಥಾವಸ್ತುವುಳ್ಳ ಚಿತ್ರ. ವೇಶ್ಯೆಯನ್ನು ಬೇರೆಯೇ ರೀತಿ ನೋಡುವ ಸಮಾಜ, ಅವಳ ಮಗಳನ್ನೂ ಅದೇ ದೃಷ್ಟಿಯಿಂದ ನೋಡುತ್ತದೆ. ಬದುಕಿನ ಹೋರಾಟದಲ್ಲಿ ಅವಳೇಕೆ ವೇಶ್ಯೆಯಾದಳು ಎಂಬ ಬಗೆಗೂ ಇಲ್ಲೊಂದು ಕಥೆ ಇದೆ. ವೇಶ್ಯೆಯ ಮಗಳು ಬದಲಾಗಬಾರದೇ? ಅವಳ ಹೋರಾಟ ಎಂಥಹದ್ದು? ಅವಳು ಪುರುಷರ ಅಧಿಪತ್ಯದಲ್ಲಿರುವ ಕುಸ್ತಿ ಕ್ಷೇತ್ರಕ್ಕೆ ಕಾಲಿಟ್ಟು ಬೆಳೆದು ದೊಡ್ಡ ಕುಸ್ತಿಪಟುವಾಗುವ ಕಥೆಯಿದೆ. ಜೊತೆಗೆ ತಾಯಿಯನ್ನು ಆ ಕೂಪದಿಂದ ಹೊರತಂದಳೇ? ಎಂಬುದನ್ನು ಹೇಳಿದ್ದೇವೆ. ಒಟ್ಟಿನಲ್ಲಿ ಹಲವಾರು ಪ್ರಶ್ನೆಗಳಿಗೆ ಈ ಚಿತ್ರ ಉತ್ತರ ನೀಡಿದೆ. ಮನುಷ್ಯರನ್ನು ಮನುಷ್ಯರಾಗಿಯೇ ನೋಡಬೇಕು ಎಂದು ಹೇಳುವ ಗಂಭೀರ ವಸ್ತುವುಳ್ಳ ಚಿತ್ರವಿದು. ತುಂಬಾ ಸವಾಲಿನದ್ದೂ ಹೌದು.

● ಬೈಕ್ ಸವಾರಿ, ಯಕ್ಷಗಾನದ ಹೆಜ್ಜೆಗಳು ಹೇಗಿವೆ?

ರಾಯಲ್ ಎನ್‌ಫೀಲ್ಡ್ ಹಿಮಾಲಯನ್ ರೈಡರ್ ನಾನು. ಶಾಲಾ ದಿನಗಳಲ್ಲಿಯೂ ಕ್ರೀಡೆಯಲ್ಲಿ ಮುಂದಿದ್ದೆ. ಈಗ ಎನ್‌ಫೀಲ್ಡ್ ಬೈಕ್‌ನಲ್ಲೇ ಬೆಂಗಳೂರಿನಿಂದ ಊರಿನವರೆಗೆ ಬರುತ್ತೇನೆ. ಪ್ರಯಾಣವನ್ನು ತುಂಬಾ ಆನಂದಿಸುತ್ತೇನೆ. ಹಲವು ಸಾಹಸ ಯಾತ್ರೆಗಳನ್ನು ಮಾಡಿದ್ದೇನೆ. ಯಕ್ಷಗಾನವನ್ನು ಈಗ ನಿರಂತರವಾಗಿ ಮಾಡುತ್ತಿಲ್ಲ. ವರ್ಷಕ್ಕೊಮ್ಮೆ ನಡೆಯುವ ನಮ್ಮೂರಿನ ಹಬ್ಬದಲ್ಲಿ ಯಕ್ಷಗಾನದ ವೇಷ ಕಟ್ಟಿ ಕುಣಿಯುತ್ತೇನೆ.

● ತುಂಬಾ ಇಷ್ಟಪಡುವ, ಮಾದರಿ ಎಂದು ಭಾವಿಸಿರುವ ಸ್ಫೂರ್ತಿ ಯಾರು?

ರಾಜ್ ಬಿ. ಶೆಟ್ಟಿ ಅವರನ್ನು ನಾನು ತುಂಬಾ ಗೌರವಿಸುತ್ತೇನೆ. ಸಿನಿಮಾ ಬದುಕಿನಲ್ಲಿ ತುಂಬಾ ಒತ್ತಡಗಳಾದಾಗ, ಸಂದಿಗ್ದಗಳು ಎದುರಾದಾಗ ಎಷ್ಟೋ ವಿಷಯಗಳನ್ನು ಹಂಚಿಕೊಂಡು ಹಗುರಾಗಿದ್ದು ಇದೆ. ಅವರದು ಸಕಾರಾತ್ಮಕತೆ ತುಂಬುವ ವ್ಯಕ್ತಿತ್ವ.

● ಮುಂದಿನ ಕನಸು?

ತುಂಬಾ ಇವೆ. ಸಿನಿಮಾ ಪಯಣವನ್ನೇ ಇನ್ನೂ ಚೆನ್ನಾಗಿ ಮುಂದುವರಿಸಬೇಕು. ಸದ್ಯ ಓದುತ್ತಿರುವ ಕನ್ನಡ ಸಾಹಿತ್ಯ ಪದವಿಯನ್ನು ಅತ್ಯುತ್ತಮವಾಗಿ ಮುಗಿಸಬೇಕು. ಮತ್ತೆ ಬರೆಯಬೇಕು ಇತ್ಯಾದಿ ಇತ್ಯಾದಿ. ಮಾತಿನಲ್ಲಿ ಹೇಳುವುದಕ್ಕಿಂತ ಬರೆದೇ ಹೇಳುವುದು ನನಗಿಷ್ಟ. ❖

ಪ್ರಜಾವಾಣಿ ನೋಡಿಯ
ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

'ರೋಲೆಕ್ಸ್...'ಗೆ ಸೋನಲ್ ಸಾಥ್



ಸೋನಲ್ ಮೊಂತೇರೊ

'ರೋಲೆಕ್ಸ್ ಕೋಮಲ್' ಚಿತ್ರದಲ್ಲಿ ಕೋಮಲ್ ಜತೆ ಕಾಣಿಸಿಕೊಂಡಿದ್ದಾರೆ ಸೋನಲ್ ಮೊಂತೇರೊ. ಚಿತ್ರ ಗುರುವಾರ (ಜ. 26) ಸೆಟ್ಟೇರಿದೆ. ದೀರ್ಘ ಬಿಡುವಿನ ನಂತರ ಕೋಮಲ್ ಮತ್ತೆ ಚಿತ್ರರಂಗದಲ್ಲಿ ಸಕ್ರಿಯರಾಗಿದ್ದಾರೆ.

ಸೋನಲ್ ಕೂಡಾ ಬೇರೆ ಬೇರೆ ಚಿತ್ರಗಳಲ್ಲಿ ಸಿಕ್ಕಾಪಟ್ಟೆ ಬ್ಯುಸಿ. ಆದರೂ ಅವರಿಗೆ 'ರೋಲೆಕ್ಸ್...' ಕಥೆ ತುಂಬಾ ಹಿಡಿಸಿದೆಯಂತೆ. ಈ ಚಿತ್ರವು ನಿರ್ದೇಶಕ ಶ್ರೀನಿವಾಸ್ ಮಂಡ್ಯ ಅವರ ಎರಡನೇ ಸಿನಿಮಾ. ಈ ಹಿಂದೆ 'ಬಿಲ್ ಗೇಟ್ಸ್' ಸಿನಿಮಾ ನಿರ್ದೇಶನ ಮಾಡಿದ್ದ ಶ್ರೀನಿವಾಸ್, ಈ ಬಾರಿ ಹೊಸ ಕಥೆ ಹೊತ್ತು ಬಂದಿದ್ದಾರೆ.

ಫೀನಿಕ್ಸ್ ಎಂಟರ್‌ಟೈನ್ಮೆಂಟ್ಸ್ ಬ್ಯಾನರ್ ಅಡಿ ಅನಿಲ್ ಕುಮಾರ್ ಎಸ್. ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ರಂಗಾಯಣ ರಘು, ಶೋಭರಾಜ್, ಅರವಿಂದ್, ಅಪೂರ್ವ ಸೇರಿದಂತೆ ಹಲವು ಕಲಾವಿದರು ಚಿತ್ರದ ತಾರಾಬಳಗದಲ್ಲಿದ್ದಾರೆ. ರಾಕೇಶ್ ಸಿ. ತಿಲಕ್ ಕ್ಯಾಮೆರಾ ವರ್ಕ್, ಜೆಸ್ಸಿ ಗಿಫ್ಟ್ ಸಂಗೀತ ನಿರ್ದೇಶನ, ಅರವಿಂದ್ ರಾಜ್ ಸಂಕಲನ ಚಿತ್ರಕ್ಕಿದೆ. ❖

'ಜೀಬ್ರಾ' ಏರಿದ ಡಾಲಿ



ಡಾಲಿ ಧನಂಜಯ್

ಡಾಲಿ ಧನಂಜಯ್ ಮತ್ತು ತೆಲುಗಿನ ಸತ್ಯದೇವ್ ಜೊತೆಯಾಗಿ ನಟಿಸುತ್ತಿರುವ, ಪ್ಯಾನ್ ಇಂಡಿಯಾ ಚಿತ್ರಕ್ಕೆ 'ಜೀಬ್ರಾ' ಎಂದು ಹೆಸರಿಡಲಾಗಿದೆ.

ಓಲ್ಡ್‌ಟೌನ್ ಪಿಕ್ಚರ್ಸ್ ಎಲ್‌ಎಲ್ಪಿ ಮತ್ತು ಪದ್ಮಜಾ ಫಿಲ್ಮ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯು ನಿರ್ಮಿಸುತ್ತಿರುವ ಈ ಬಹುತಾರಾಗಣದ ಚಿತ್ರವನ್ನು 'ಪೆಂಗ್ವಿನ್' ಖ್ಯಾತಿಯ ಈಶ್ವರ್ ಕಾರ್ತಿಕ್ ನಿರ್ದೇಶನ ಮಾಡುತ್ತಿದ್ದಾರೆ. ಈಗಾಗಲೇ 50 ದಿನಗಳ ಕಾಲ ಮೊದಲ ಹಂತದ ಚಿತ್ರೀಕರಣ ಮುಗಿದಿದೆ. ಮುಂದೆ ಹೈದರಾಬಾದ್, ಕೊಲ್ಕತ್ತಾ, ಮುಂಬೈಯಲ್ಲಿ ಚಿತ್ರೀಕರಣ ನಡೆಯಲಿದೆ.

ಈ ಚಿತ್ರಕ್ಕೆ ರವಿ ಬಸ್ರೂರು ಸಂಗೀತವಿದೆ. 'ಬಸ್ರೂರು ಅವರ ಹಿನ್ನೆಲೆ ಸಂಗೀತವು ಈ ಚಿತ್ರದ ಹೈಲೈಟ್. ಅವರು ಚಿತ್ರದ ಆತ್ಮವನ್ನು ತಮ್ಮ ಸಂಗೀತದ ಮೂಲಕ ಅದ್ಭುತವಾಗಿ ಎತ್ತಿಹಿಡಿಯಲಿದ್ದಾರೆ' ಎಂದಿದ್ದಾರೆ ನಿರ್ಮಾಪಕರಾದ ಬಾಲಸುಂದರಂ ಮತ್ತು ಪದ್ಮಜಾ ರೆಡ್ಡಿ.

ಈ ಚಿತ್ರದಲ್ಲಿ ಬಾಹುಬಲಿಯ 'ಕಟ್ಟಪ್ಪ' ಖ್ಯಾತಿಯ ಸತ್ಯರಾಜ್, ಸುನಿಲ್ ನಟಿಸುತ್ತಿದ್ದಾರೆ. ಸತ್ಯ ಪೊನ್ಮಾರ್ ಅವರ ಛಾಯಾಗ್ರಹಣ ಮತ್ತು ಅನಿಲ್ ಕ್ರಿಶ್ ಅವರ ಸಂಕಲನ ಈ ಚಿತ್ರಕ್ಕಿದೆ. ಈಶ್ವರ್ ಕಾರ್ತಿಕ್ ಈ ಚಿತ್ರದ ನಿರ್ದೇಶಕರು. ಬಾಲಸುಂದರಂ ಮತ್ತು ದಿನೇಶ್ ಸುಂದರಂ ನಿರ್ಮಾಣಕ್ಕೆ ಕೈಜೋಡಿಸಿದ್ದಾರೆ. ಅನಿಲ್ ಕ್ರಿಷ್ ಅವರ ಸಂಕಲನ, ಸತ್ಯ ಪೊನ್ಮಾರ್ ಛಾಯಾಗ್ರಹಣವಿದೆ. ❖

ನಾಣಿ @125

ಅಭಿಲಾಷ್ ಪಿ.ಎಸ್.

ಇವರೇ ಲಕ್ಷ್ಮೀನಾರಾಯಣ! ಹೀಗೆಂದರೆ ತಕ್ಷಣಕ್ಕೆ ಇವರ್‍ಯಾರು ಎಂದು ಪತ್ತೆ ಹಚ್ಚುವುದು ಕಷ್ಟ. ಅದೇ 'ತಬಲಾ ನಾಣಿ' ಎಂದರೆ 'ಓಹ್ ಅವ್ರಾ!' ಎನ್ನುವ ಉತ್ತರ ಸಿಗುತ್ತದೆ. 'ಲಕ್ಷ್ಮೀನಾರಾಯಣ', 'ನಾರಾಯಣ'ನಾಗಿ, 'ನಾಣಿ'ಯಾಗಿ ಕೊನೆಗೆ 'ತಬಲಾ ನಾಣಿ'ಯಾಗಿ ಹೆಜ್ಜೆ ಇಡುತ್ತಾ 125ನೇ ಸಿನಿಮಾ ಹೊಸ್ತಿಲು ದಾಟಿದ್ದಾರೆ. ಅವರ ನಟನೆಯ 'ಆರ್ ಸಿ ಬ್ರದರ್ಸ್' ಸಿನಿಮಾ ಬಿಡುಗಡೆಯಾಗಿದ್ದು, ಈ ಹೊತ್ತಿನಲ್ಲಿ ತಮ್ಮ ಸಿನಿಪಯಣವನ್ನು ನೆನಪಿಸಿಕೊಳ್ಳುತ್ತಾ ನಾಣಿಯವರು ಸಾಗಿದ್ದು ಹೀಗೆ...

ವಿ.ಎನ್.ಅಶ್ವಥ್ ಅವರು ಬರೆದ 'ಶ್ರೀ ಕೃಷ್ಣ ಸಂಧಾನ'ದಲ್ಲಿ ಒಂದು ಪುಟ್ಟ ಪಾತ್ರವನ್ನು ನಾನು ಮಾಡಿದ್ದೆ. ಕಲಾಕ್ಷೇತ್ರದಲ್ಲಿ ನಡೆದ ಈ ನಾಟಕದಲ್ಲಿನ ನನ್ನ ಪಾತ್ರವನ್ನು ಗುರುತಿಸಿ ನಾಗಾಭರಣ ಅವರು ಕಿರುತೆರೆಗೆ ಆಹ್ವಾನಿಸಿದರು. 'ಸಂಕ್ರಾಂತಿ' ನನ್ನ ಮೊದಲ ಧಾರಾವಾಹಿ. ಇಲ್ಲಿಂದ 'ಗೋಧೂಳಿ' ಎಂಬ ಧಾರಾವಾಹಿಯತ್ತ ಪಯಣ ಸಾಗಿತು. ಇಲ್ಲಿಂದ ಸೇರಿದ್ದು ನೇರವಾಗಿ ಗುರುಪ್ರಸಾದ್ ಅವರ 'ಮಠ'ಕ್ಕೆ. ನಾನು ಈ ಚಿತ್ರದಲ್ಲಿ ಮುಸ್ಲಿಂ ವ್ಯಕ್ತಿಯ ಪಾತ್ರ ಮಾಡಬೇಕಿತ್ತು. ಆದರೆ ಕುಡುಕನ ಪಾತ್ರವನ್ನೇ ನೀವು ಮಾಡಿ ಎಂದರು. ಮೊದಲ ಸಿನಿಮಾದಲ್ಲೇ ಸಂಭಾಷಣೆಯ ಕಾರ್ಯದಲ್ಲೂ ನನ್ನನ್ನು ಗುರುಪ್ರಸಾದ್ ಅವರು ತೊಡಗಿಸಿಕೊಂಡರು. 'ಎದ್ದೇಳು ಮಂಜುನಾಥ' ಸಿನಿಮಾದಲ್ಲೂ ನಾನು ಸಂಭಾಷಣೆ ಬರೆದೆ. ಇದೀಗ 138ನೇ ಸಿನಿಮಾದಲ್ಲಿ ನಟಿಸುತ್ತಿದ್ದೇನೆ.



ತಬಲಾ ನಾಣಿ

ನನ್ನ ಮೊದಲ ಗುರು ಎಂ.ನಾರಾಯಣದಾಸ್. ಅವರ ಜೊತೆ ಹರಿಕಥೆಗಳಲ್ಲಿ ಸುಮಾರು ಆರು ವರ್ಷಗಳ ಕಾಲ ತಬಲಾ ನುಡಿಸಿದೆ. ಹರಿಕಥೆಗಳನ್ನು ಕೇಳಿ, ಅವರ ಮಾತುಗಳನ್ನು ಆಲಿಸುತ್ತಲೇ ನಾನು ಸಂಭಾಷಣೆ ಬರೆಯುವ ಸಾಮರ್ಥ್ಯವನ್ನೂ ಪಡೆದೆ ಎನ್ನಬಹುದು. ನನ್ನ ಬರವಣಿಗೆಗಳಲ್ಲಿ ಗುರುಗಳ ಮಾತಿನ ವಿಚಾರಗಳು ಇವೆ. ಸುಮಾರು 15 ಸಿನಿಮಾಗಳಿಗೆ ಸ್ವತಂತ್ರವಾಗಿ ಸಂಭಾಷಣೆ ಬರೆದಿದ್ದೇನೆ. ವಿಚಾರಗಳನ್ನು ಸೂಚ್ಯವಾಗಿ ಹೇಳುವ ಕಲೆಯನ್ನು ನಿರ್ದೇಶಕ ಗುರುಪ್ರಸಾದ್ ಅವರಿಂದ ಕಲಿತೆ. ನನ್ನ ಎರಡನೇ ಗುರು ಜಿ.ವಿ. ಅತ್ರಿ. ಅವರ ತಂಡದಲ್ಲಿ ನಾನು ತಬಲಾ ನುಡಿಸುತ್ತ, ಮ್ಯಾನೇಜರ್ ಕೂಡಾ ಆಗಿದ್ದೆ. ಮೂರನೇ ಗುರು ಡೈರೆಕ್ಟರ್ ಗುರುಪ್ರಸಾದ್.

'ಗೋಧೂಳಿ' ಧಾರಾವಾಹಿಯಲ್ಲಿ 'ಭಾಗ್ಯದ ಲಕ್ಷ್ಮಿ ಬಾರಮ್ಮ' ಭಜನೆಯನ್ನು ಮುಸ್ಲಿಂ ಹಾಡಿದರೆ ಹೇಗೆ ಹಾಡುತ್ತಾರೆ ಎನ್ನುವುದನ್ನು ನಾನು ಪರಿಕಲ್ಪಿಸಿದ್ದೆ. ಇದನ್ನು ನಂತರ ಹಲವರು ಬಳಸಿಕೊಂಡರು. 'ಮಠ' ಹಾಗೂ 'ಎದ್ದೇಳು ಮಂಜುನಾಥ' ನನ್ನ ಸಿನಿಬದುಕಿಗೆ ದೊಡ್ಡ ತಿರುವು ತಂದುಕೊಟ್ಟಿತು. ನಾಣಿ ಯಾರು ಎನ್ನುವುದು ಕನ್ನಡಿಗರಿಗೆ ಗೊತ್ತಾಗಿದ್ದೇ ಈ ಎರಡು ಸಿನಿಮಾಗಳಿಂದ. 'ಕೆಮಿಸ್ಟ್ರಿ ಆಫ್ ಕರಿಯಪ್ಪ' ನನ್ನ ಸಿನಿ ಬದುಕಿಗೆ ಮರುಜನ್ಮ ನೀಡಿದ ಸಿನಿಮಾ. ಇದು ಬಿಡುಗಡೆಯಾಗದ ಬಳಿಕ ಮಧ್ಯಮ ವರ್ಗದ ಕಥೆಯುಳ್ಳ ಹಲವು ಸಿನಿಮಾ ಆಫರ್‌ಗಳು ಬಂದವು. ಗೂಳಿ ಎಷ್ಟೇ ದೊಡ್ಡದಾಗಿರಲಿ ಅಂಬಾರಿ ಹೊರಲು ಸಾಧ್ಯವಿಲ್ಲ. ಆನೆಯೇ ಅಂಬಾರಿ ಹೊರಬೇಕು. ಎಲ್ಲ ಕೆಲಸಕ್ಕೂ ಎಲ್ಲರೂ ಒಗ್ಗಿಕೊಳ್ಳಲು ಸಾಧ್ಯವಿಲ್ಲ. ಹೀಗೆ ಪಾತ್ರವೊಂದಕ್ಕೆ ಕಲಾವಿದನೊಬ್ಬ ಹೊಂದಿಕೆ ಆಗುವುದಿದ್ದರೆ ಅವನೇ ಹೀರೊ..ಸಿನಿಮಾವೊಂದರಲ್ಲಿ ಅದು ತಂದೆಯ ಪಾತ್ರಧಾರಿಯೇ ಆಗಿರಬಹುದು..

ಶರಣ್ ಅವರ ಜೊತೆ 9 ಸಿನಿಮಾ ಮಾಡಿದೆ. ಈ ಪೈಕಿ ಏಳು ಸಿನಿಮಾಗಳು ಸೂಪರ್‌ಹಿಟ್ ಆದವು. ಈ ಸಿನಿಮಾ ಹೆಜ್ಜೆಗಳ ಜೊತೆಗೆ 'ಹಾಸ್ಯ ರಂಜಿನಿ' ಎಂಬ ತಂಡವೊಂದನ್ನು ಕಟ್ಟಿಕೊಂಡಿದ್ದೇನೆ. ಈ ತಂಡದಲ್ಲಿನ ನಾಲ್ಕೈದು ಜನ ನಿರ್ದೇಶಕರು ಆಗಿದ್ದಾರೆ. ಮಗಳು ನಟಿಯಾಗಿ ಹೆಜ್ಜೆ ಇಟ್ಟಿದ್ದಾಳೆ. ❖

'ತಬಲಾ ನಾಣಿ' ಆಗಿದ್ದು ಹೇಗೆ?

ನನ್ನ ತಂದೆ ತಬಲಾ ನುಡಿಸುತ್ತಿದ್ದರು. ಕುಟುಂಬದ ಬಹುತೇಕ ಜನರು ಸಂಗೀತ ಕ್ಷೇತ್ರದಲ್ಲಿದ್ದಾರೆ. ತಬಲಾ ಎನ್ನುವುದು ರಕ್ತಗತವಾಗಿ ಎನ್ನುವುದು ಬಂದಿದೆ. ಹೀಗಿರುವ 'ಮಠ' ಚಿತ್ರತಂಡ ಸೇರಿಕೊಂಡಾಗ ನಾಲ್ವರು 'ನಾಣಿ'ಗಳು ಅಲ್ಲಿದ್ದರು. ಹೀಗಿರುವ ನನ್ನನ್ನು ಕರೆದು 'ನೀವು ತಬಲಾ ನುಡಿಸುತ್ತೀರಿ. ನೀವು ತಬಲಾ ನಾಣಿ ಎಂದು ಹೆಸರಿಟ್ಟುಕೊಳ್ಳಿ' ಎಂದು ಗುರುಪ್ರಸಾದ್ ಹೇಳಿದರು. 'ಎದ್ದೇಳು ಮಂಜುನಾಥ' ಸಿನಿಮಾದಲ್ಲಿ ಇದನ್ನು ರಿವೀಲ್ ಮಾಡಿದ್ದೇನೆ. ನೆನಪು ಮಾಡ್ಕೊಳ್ಳಿ....


ಮತ್ತೆ ಸೌಟು ಹಿಡಿದ ಸಿಹಿಕಹಿ ಚಂದ್ರು

ಕಿರುತೆರೆ

ನಟ ಸಿಹಿಕಹಿ ಚಂದ್ರು ಮತ್ತೆ ಸೌಟು ಹಿಡಿದಿದ್ದಾರೆ. ಜನಪ್ರಿಯ ಟಿವಿ ಕಾರ್ಯಕ್ರಮ 'ಬೊಂಬಾಟ್ ಭೋಜನ'ದ ಮೂರನೇ ಆವೃತ್ತಿ ಸೋಮವಾರದಿಂದ ಶನಿವಾರದವರೆಗೆ ಪ್ರತಿದಿನ ಮಧ್ಯಾಹ್ನ 12 ಗಂಟೆಗೆ ಸ್ಟಾರ್ ಸುವರ್ಣ ವಾಹಿನಿಯಲ್ಲಿ ಪ್ರಸಾರವಾಗುತ್ತಿದೆ.

ಈ ಬಗ್ಗೆ ಮಾಹಿತಿ ನೀಡಿರುವ ಚಂದ್ರು, 'ಸ್ಟಾರ್ ಸುವರ್ಣ ವಾಹಿನಿಯಲ್ಲಿ 2019ರಲ್ಲಿ ಈ ಕಾರ್ಯಕ್ರಮದ ಮೊದಲ ಆವೃತ್ತಿ ಶುರು ಮಾಡಿದ್ದೆ. ಈಗ ಎರಡನೇ ಆವೃತ್ತಿ ಕೂಡ ಮುಕ್ತಾಯವಾಗಿ, ಮೂರನೇ ಆವೃತ್ತಿ ಆರಂಭವಾಗಿದೆ. ಈ ಬಾರಿ 'ಬಯಲೂಟ', 'ಸವಿಯೂಟ', 'ಮನೆಊಟ', 'ಅಂದ ಚಂದ', 'ಅಂಗೈಯಲ್ಲಿ ಆರೋಗ್ಯ' , 'ಟಿಪ್ ಟಿಪ್ ಟಿಪ್' ಹಾಗೂ 'ಅತಿಥಿ ದೇವೋಭವ' ಎಂಬ ಏಳು ಬಗೆಯ ವಿಶೇಷತೆಗಳಿದೆ. ಅದಕ್ಕೆ ಸಂಬಂಧಿಸಿದಂತೆ ಪರಿಣತರು ಮಾಹಿತಿ ನೀಡುತ್ತಾರೆ. ಇನ್ನೂ ವಿಶೇಷವೆಂದರೆ ಆರೋಗ್ಯದ ಕುರಿತು ಮನೆಮದ್ದುಗಳನ್ನು ಡಾ.ಗೌರಿ ಸುಬ್ರಹ್ಮಣ್ಯ ಹೇಳುತ್ತಾರೆ. ಕಾರ್ಯಕ್ರಮದ ಕೊನೆಯಲ್ಲಿ ಡುಂಡಿರಾಜ್ ಅವರ ಹನಿಗವನ ಒಂದನ್ನು ಹೇಳುತ್ತೇನೆ' ಎಂದರು.

'ಆರೋಗ್ಯಕ್ಕೆ ಸಂಬಂಧಿಸಿದ ಚಿಕ್ಕಚಿಕ್ಕ ವಿಷಯಗಳಿಗೆ ಆಸ್ಪತ್ರೆಗೆ ಹೋಗಬೇಡಿ. ಅದಕ್ಕೆ ಮನೆಯಲ್ಲೇ ಅನೇಕ ಮದ್ದುಗಳಿವೆ' ಎಂದು ಈ ತಂಡದ ಸದಸ್ಯೆ ಡಾ.ಗೌರಿ ಸುಬ್ರಹ್ಮಣ್ಯ ಹೇಳಿದರು. ಸಾಹಿತಿ ಡುಂಡಿರಾಜ್, ಸಿಹಿಕಹಿ ಗೀತಾ, ಖುಷಿ, ಶ್ರೀಪಾದ, ಪರಿ ಈ ತಂಡದಲ್ಲಿದ್ದಾರೆ. ❖



ಸಿಹಿ ಕಹಿ ಚಂದ್ರು

'ಧೀರ ಭಗತ್ ರಾಯ್'ಗೆ ಅಧಿಕಾರ ಸಿಗುತ್ತಾ?

ರಾಜಕೀಯ ಅಧಿಕಾರಕ್ಕಾಗಿ ನಡೆಯುವ ಹೋರಾಟ ಕಥೆ 'ಧೀರ ಭಗತ್ ರಾಯ್'. ಕರ್ಣನ್ ಎಸ್. ನಿರ್ದೇಶನದಲ್ಲಿ ಮೂಡಿ ಬರುತ್ತಿರುವ ರಾಜಕೀಯ ಕಥಾವಸ್ತು ಹೊಂದಿರುವ ಚಿತ್ರವಿದು.

'ನಮ್ಮ ನೆಲಮೂಲದ ಕಥೆ ಇದು. ಇದರಲ್ಲಿ ಭೂ ಸುಧಾರಣೆ ಕಾಯ್ದೆ ಜೊತೆಗೆ ಪ್ರಿವೆನ್‌ಶನ್ ಆಫ್ ಎಸ್ಸಿ,ಎಸ್‌ಟಿ ಅಟ್ರಾಸಿಟಿ ಆ್ಯಕ್ಟ್ 1989 ಸೇರಿದಂತೆ ಹಲವು ವಿಚಾರಗಳ ಬಗ್ಗೆ ಮಾತನಾಡಿದ್ದೇನೆ. ಇದು ಸಾಕಷ್ಟು ಪರಿಣಾಮ ಬೀರಲಿದೆ. ಸದ್ಯ ನ್ಯಾಯಾಲಯದ ದೃಶ್ಯ ಚಿತ್ರೀಕರಣ ನಡೆದಿದೆ' ಎಂದರು ನಿರ್ದೇಶಕ ಕರ್ಣನ್ ಎಸ್..

ರಂಗಭೂಮಿ ಪ್ರತಿಭೆ ರಾಕೇಶ್ ದಳವಾಯಿ ಮತ್ತು ನಾಯಕಿಯಾಗಿ ಸುಚರಿತಾ ಸಹಾಯರಾಜ್ ನಟಿಸುತ್ತಿದ್ದಾರೆ. ರಾಕೇಶ್ ಅವರದ್ದು ವಕೀಲರ ಪಾತ್ರ. ಫೆಬ್ರುವರಿಯಲ್ಲಿ ಆಡಿಯೋ ಹಾಗೂ ಟ್ರೇಲರ್ ಬಿಡುಗಡೆ ನಡೆಯಲಿದೆ. ಮಾರ್ಚ್‌ನಲ್ಲಿ ಚಿತ್ರ ತೆರೆಗೆ ಬರಲಿದೆ ಎಂದರು ಅವರು.



ಸುಚರಿತಾ ಸಹಾಯರಾಜ್, ರಾಕೇಶ್ ದಳವಾಯಿ

ಶರತ್ ಲೋಹಿತಾಶ್ವ ಖಳನಟನ ಪಾತ್ರಕ್ಕೆ ಬಣ್ಣಹಚ್ಚಿದ್ದಾರೆ. ಪ್ರವೀಣ್ ಹಗಡೂರು, ಮಠ ಕೊಪ್ಪಳ, ಸುಧೀರ್ ಕುಮಾರ್ ಮುರೊಳ್ಳಿ, ಶಶಿಕುಮಾರ್, ಫಾರೂಕ್ ಅಹ್ಮದ್, ಚಂದ್ರಿಕಾ ಗೌಡ, ನಯನ, ಸಿದ್ದಾರ್ಥ್ ಗೋವಿಂದ್, ಅನಿಲ್ ಹೊಸಕೊಪ್ಪ, ಪ್ರೊ. ಹರಿರಾಮ್, ಪಿ.ಮೂರ್ತಿ, ಹೇಮಾನುಷ್ ಗೌಡ, ರಮೇಶ್ ಕುಮಾರ್, ಸಂದೇಶ್ ಚಿತ್ರದ ತಾರಾಬಳಗದಲ್ಲಿದ್ದಾರೆ. ಶ್ರೀ ಓಂ ಸಿನಿ ಎಂಟರ್ಟೈನರ್ಸ್ ಹಾಗೂ ವೈಟ್ ಲೋಟಸ್ ಎಂಟರ್‌ಟೈನ್‌ಮೆಂಟ್ ಬ್ಯಾನರ್ ನಿರ್ಮಾಣದಲ್ಲಿ ಸಿನಿಮಾ ಮೂಡಿ ಬರುತ್ತಿದೆ. ಪೂರ್ಣಚಂದ್ರ ತೇಜಸ್ವಿ ಸಂಗೀತ ನಿರ್ದೇಶನ, ಎಂ.ಸೆಲ್ವಂ ಜಾನ್ ಛಾಯಾಗ್ರಹಣ, ವಿಶ್ವ ಎನ್.ಎಂ. ಸಂಕಲನ ಚಿತ್ರಕ್ಕಿದೆ. ❖

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦

ಸ್ವಾರ್ಥವನ್ನು ನೀವು ತ್ಯಜಿಸಿದ್ದೇ ಆದರೆ, ಆವರೆಗೆ ನಿಮ್ಮ ಮನಸ್ಸಿಗೆ ನೀವು ಅದೆಷ್ಟು ಹಿಂಸೆ ಕೊಟ್ಟುಕೊಳ್ಳುತ್ತಿದ್ದಿರಿ ಎಂಬುದು ಅರಿವಾಗುತ್ತದೆ.

–ರೂಮಿ

ರಾಜ್ಯದ ಕೊಳಕು ನದಿಗಳ ಅವಲೋಕನ ಆಡಳಿತಯಂತ್ರದ ದುಃಸ್ಥಿತಿಯ ಪ್ರತಿಫಲನ

ಕರ್ನಾಟಕದ ಪ್ರಮುಖ 17 ನದಿಗಳ ನೀರು ಕುಡಿಯಲು ಯೋಗ್ಯವಿಲ್ಲದಷ್ಟು ಕಲುಷಿತಗೊಂಡಿದೆಯೆಂದೂ ಅವುಗಳಲ್ಲಿ ಕೆಲವಂತೂ ಸ್ನಾನಕ್ಕೂ ಅನರ್ಹವೆಂತಲೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ತನ್ನ ಈಚಿನ ವರದಿಯಲ್ಲಿ ಹೇಳಿದೆ. ರಾಜ್ಯದ ಜಲಮೂಲಗಳ ಒಟ್ಟು 103 ತಪಾಸಣಾ ಕೇಂದ್ರಗಳಲ್ಲಿ ಮಂಡಳಿಯು ನೀರಿನ ಗುಣಮಟ್ಟವನ್ನು ಕಾಲಕಾಲಕ್ಕೆ ಪರೀಕ್ಷೆ ಮಾಡುತ್ತಿದ್ದು ಪರಿಶುದ್ಧ ನೀರಿರುವ ('ಎ' ವರ್ಗದ) ತಾಣ ಒಂದೂ ಇಲ್ಲವೆಂದು ಅದು 2022ರ ಏಪ್ರಿಲ್‌ನಿಂದ ನವೆಂಬರ್‌ವರೆಗಿನ ಸಮೀಕ್ಷೆಯಲ್ಲಿ ಗುರುತಿಸಿದೆ. ಈ ವರ್ಷದ ಭಾರಿ ಮಳೆಗಾಲ, ಮಹಾಪ್ರವಾಹದ ನಂತರವೂ ಕೆಲವು ನದಿಗಳಲ್ಲಿ ಮಾಲಿನ್ಯದ ಮಟ್ಟ ಕಡಿಮೆ ಆಗುವ ಬದಲು ಹೆಚ್ಚೇ ಆಗಿದೆ ಎಂಬ ಅಂಶ ವರದಿಯಲ್ಲಿದೆ. ಇಷ್ಟಕ್ಕೂ, ಈಗಿನ ಈ ವರದಿ ಪರಿಪೂರ್ಣವೇನಲ್ಲ. ನೀರಲ್ಲಿ ಆಮ್ಲಜನಕದ ಕೊರತೆ ಎಷ್ಟಿದೆ ಎಂಬುದನ್ನಷ್ಟೇ ಇದು ತಿಳಿಸಿದೆಯೇ ವಿನಾ ಘಾತುಕ ನೈಟ್ರೇಟ್ ಲವಣಗಳು, ಕೀಟನಾಶಕದ ಅಂಶಗಳು, ಆ್ಯಂಟಿಬಯಾಟಿಕ್ ದ್ರವ್ಯಗಳ ಪ್ರಮಾಣದ ಮಾಹಿತಿ ಇಲ್ಲ. ಮುಖ್ಯವಾಗಿ ಪ್ಲಾಸ್ಟಿಕ್ ಮಾಲಿನ್ಯದ ಪ್ರಸ್ತಾಪವೇ ಇಲ್ಲ. ಪ್ಲಾಸ್ಟಿಕ್ ಕಣಮಾಲಿನ್ಯದ ಮಡುಗಳಲ್ಲಿ ಬದುಕಬೇಕಾದ ಜಲಚರ, ಜಲಪಕ್ಷಿಗಳ ಸ್ಥಿತಿಗತಿಯ ಮಾಹಿತಿಗಳೂ ಇಲ್ಲ.



ಈ ವರ್ಷದ ಭಾರಿ ಮಳೆಗಾಲ, ಮಹಾಪ್ರವಾಹದ ನಂತರವೂ ಕೆಲವು ನದಿಗಳಲ್ಲಿ ಮಾಲಿನ್ಯದ ಮಟ್ಟ ಕಡಿಮೆ ಆಗುವ ಬದಲು ಹೆಚ್ಚೇ ಆಗಿದೆ ಎಂಬ ಅಂಶ ಕಳವಳಕಾರಿ

ವಿಪರ್ಯಾಸದ ಸಂಗತಿ ಏನೆಂದರೆ, ಈ ಅಂಕಿ ಅಂಶಗಳನ್ನು ಬಹಿರಂಗಗೊಳಿಸುವ ಮೂಲಕ ಮಾಲಿನ್ಯ ನಿಯಂತ್ರಣ ಮಂಡಳಿ ತನ್ನ ವೈಫಲ್ಯವನ್ನು ತಾನೇ ಸಾರಿದಂತಾಗಿದೆ. ಕೊಳೆ-ಕಸ ಚೆಲ್ಲುವವರ ಮೇಲೆ ನಿಗಾ ಇಟ್ಟು ತಪ್ಪಿತಸ್ಥರನ್ನು ದಂಡ– ಶಿಕ್ಷೆಗೆ ಗುರಿಪಡಿಸಲೆಂದೇ ಈ ಮಂಡಳಿ ಅಸ್ತಿತ್ವದಲ್ಲಿದೆ. ನದಿಗಳಂಚಿನ ನಗರ-ಪಟ್ಟಣಗಳಲ್ಲಿ ಅಗತ್ಯ ಸಂಖ್ಯೆಯಲ್ಲಿ ಶುದ್ಧೀಕರಣ ಸ್ಥಾವರಗಳು ಇಲ್ಲ. ಇರುವ ಸ್ಥಾವರಗಳೆಲ್ಲ ಸರಿಯಾಗಿ ಕೆಲಸ ಮಾಡಿದರೂ ಪ್ರತಿದಿನ 146 ಕೋಟಿ ಲೀಟರ್ ಕೊಳೆನೀರು ರಾಜ್ಯದ ನದಿಗಳಿಗೆ ಸೇರುತ್ತಿದೆ ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ (ಸಿಪಿಸಿಬಿ) 2021ರ ಡಿಸೆಂಬರ್‌ನಲ್ಲಿ ಹೇಳಿತ್ತು. ಈಗ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿದೆಯೆಂದು ಹೇಳಿರುವ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ತಪ್ಪಿತಸ್ಥ ಉದ್ಯಮ ಸಂಸ್ಥೆಗಳ ಮೇಲೆ ಅಥವಾ ನಗರ ಸ್ಥಳೀಯ ಸಂಸ್ಥೆಗಳ ಮೇಲೆ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದಿದ್ದರೆ ಹೀಗಾಗುತ್ತಿರಲಿಲ್ಲ. ವರ್ಷಕ್ಕೊಮ್ಮೆ ಗಣೇಶ ಹಬ್ಬದ ಹೊತ್ತಿನಲ್ಲಿ ಮಣ್ಣಿನ ಗಣಪ, ಅರಿಸಿನ ಗಣಪ ಮೂರ್ತಿಗಳ ಕುರಿತು ಪ್ರಚಾರ ಬಿಟ್ಟರೆ ಇತರ ದಿನಗಳಲ್ಲಿ ಈ ಮಂಡಳಿಯು ಜಲಸಾಕ್ಷರತೆಯ ಅಥವಾ ಎಳೆಯರನ್ನು ಒಳಗೊಳ್ಳುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡ ನಿದರ್ಶನಗಳು ಕಡಿಮೆ. ನದಿಗಳನ್ನು ಚೊಕ್ಕಟವಾಗಿಡಲೆಂದು ಅಟಲ್ ಮಿಷನ್, ಸ್ಮಾರ್ಟ್ ಸಿಟೀಸ್ ಮಿಷನ್ ಹೆಸರಿನಲ್ಲಿ ಕೇಂದ್ರ ಜಲಶಕ್ತಿ ಇಲಾಖೆ ಸುರಿಯುವ ಹಣವೆಲ್ಲ ಹೊಳೆಯಲ್ಲಿ ಹುಣಸೆಹಣ್ಣು ತೊಳೆದಂತಾಗುತ್ತಿದೆಯೇ? ರಾಷ್ಟ್ರೀಯ ಹಸಿರು ನ್ಯಾಯಮಂಡಳಿ ಮತ್ತು ಸಿಪಿಸಿಬಿ ಕಾಲಕಾಲಕ್ಕೆ ನೀಡುವ ಎಚ್ಚರಿಕೆಗಳೆಲ್ಲ ಬೋರ್ಗಲ್ಲ ಮೇಲೆ ಮಳೆ ಸುರಿದಂತಾಗುತ್ತಿದೆಯೇ?

ಭಾರತೀಯ ಪರಂಪರೆಯಲ್ಲಿ ನದಿಗಳಿಗೆ ಪರಮ ಪವಿತ್ರ ಸ್ಥಾನವನ್ನು ಕೊಟ್ಟು, ಅವನ್ನು ಜೀವದಾಯಿನಿ, ಪ್ರಾಣಪೋಷಿಣಿ ಎಂದೆಲ್ಲ ಶ್ಲಾಘಿಸಲಾಗುತ್ತಿದ್ದರೂ ಈ 75 ವರ್ಷಗಳ ಅಭಿವೃದ್ಧಿಯ ದಾಂಗುಡಿಯಲ್ಲಿ ದೆಹಲಿಯ ಯಮುನಾ, ಕಾನ್ಪುರದ ಗಂಗಾ, ಕೋಲ್ಕತ್ತದ ಹೂಗ್ಲಿ, ಚೆನ್ನೈನ ಅಡ್ಯಾರ್, ಬೆಂಗಳೂರಿನ ವೃಷಭಾವತಿ ಮುಂತಾದ ನದಿಗಳ ಬಳಿ ಮೂಗು ಮುಚ್ಚಿಕೊಂಡು ಹೋಗಬೇಕಾದ ಪರಿಸ್ಥಿತಿ ಸೃಷ್ಟಿಯಾಗಿದೆ. ಸ್ವಚ್ಛ ಭಾರತ ಅಭಿಯಾನವನ್ನು ಪ್ರಾರಂಭಿಸಿ ಏಳು ವರ್ಷಗಳೇ ಆದರೂ ದೇಶದ ಗಾಳಿ, ಮಣ್ಣು, ನೀರಿನ ಸ್ಥಿತಿಗತಿಯಲ್ಲಿ ಹೇಳಿಕೊಳ್ಳುವ ಸುಧಾರಣೆ ಆಗಿಲ್ಲವೆಂಬ ಸಂಗತಿ ನಮ್ಮ ಅನುಭವಕ್ಕೆ ಬರುತ್ತಲೇ ಇದೆ. ಜಗತ್ತಿನ 180 ದೇಶಗಳ ಪರಿಸರ ಕಾರ್ಯಕ್ಷಮತೆಯನ್ನು ವರ್ಷ ವರ್ಷವೂ ಅಳೆದು ನೋಡುವ ಅಮೆರಿಕದ ಪ್ರತಿಷ್ಠಿತ ಯೇಲ್ ವಿಶ್ವವಿದ್ಯಾಲಯದ ವಿಜ್ಞಾನಿಗಳು ಕಳೆದ ವರ್ಷ ಭಾರತಕ್ಕೆ ಕೊನೆಯ, 180ನೇ ಶ್ರೇಯಾಂಕವನ್ನು ಕೊಟ್ಟಿದ್ದು ಭಾರಿ ಚರ್ಚೆಗೆ ಕಾರಣವಾಗಿತ್ತು. ಈ ವರದಿ ದೋಷಮುಕ್ತವಲ್ಲವೆಂದು ಕೇಂದ್ರ ಸರ್ಕಾರದ ವಕ್ತಾರರು ವಾದಿಸಿದ್ದರಾದರೂ ಶುದ್ಧ ಗಾಳಿ, ಶುದ್ಧ ನದಿ ಹೇಗಿರುತ್ತದೆ ಎಂಬುದು ಸುದೀರ್ಘ ಲಾಕ್‌ಡೌನ್ ಅವಧಿಯಲ್ಲಿ ನಮಗೆ ಸ್ಪಷ್ಟವಾಗಿ ಗೊತ್ತಾಗಿತ್ತು. ಗೃಹಬಂಧನದಲ್ಲಿದ್ದಷ್ಟು ದಿನ ಮಾತ್ರ ನಾವು ಭಾರತೀಯರು ಜೀವಪೋಷಕ ಬದುಕನ್ನು ನಡೆಸಬಲ್ಲೆವೆಂಬಂಥ ಅಸಂಗತ ಸ್ಥಿತಿಯಲ್ಲಿ ಇದ್ದೇವೆ ಎಂದರೆ, ಇಷ್ಟೊಂದು ಪರಿಸರ ರಕ್ಷಣಾ ವ್ಯವಸ್ಥೆಯನ್ನು ಕಟ್ಟಿಟ್ಟುಕೊಂಡಿದ್ದಾದರೂ ಏಕೆ ಎಂಬ ಪ್ರಶ್ನೆ ಬರುತ್ತದೆ. ಚುನಾವಣೆ ಹತ್ತಿರ ಬಂದಂತೆಲ್ಲ ರಾಜಕೀಯ ಪಕ್ಷಗಳು ಪೈಪೋಟಿಯ ಮೇಲೆ ಮತದಾರರಿಗೆ ನಗದು ಆಮಿಷಗಳನ್ನು ಘೋಷಿಸುತ್ತಿವೆ. ಜನರ ಬದುಕಿನ ಮೂಲ ಅಗತ್ಯಗಳಾದ ಶುದ್ಧ ನೀರು, ಶುದ್ಧ ಗಾಳಿಯ ಆಶ್ವಾಸನೆ ನೀಡುವ ಜನನಾಯಕರು ಎಲ್ಲಿದ್ದಾರೋ?

ಜನಸಾಮಾನ್ಯರ ಲಕ್ಷಣಗಳೇ ಇಲ್ಲದವರು ಪ್ರತಿನಿಧಿಗಳಾದಾಗ...

ಪ್ರಜಾಪ್ರಭುತ್ವ: ಜನಸಾಮಾನ್ಯರ ಹಿತವೆಲ್ಲಿ?



ವಿಶ್ಲೇಷಣೆ

ಎಂ.ಚಂದ್ರ ಪೂಜಾರಿ

ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಹಾಗೂ ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರು ದಿನನಿತ್ಯ ಶಾಸಕಾಂಗ ಪರಮೋಚ್ಚ ಎಂದು ಬೋಧಿಸುತ್ತಿದ್ದಾರೆ. ಏಕೆಂದರೆ ಶಾಸಕಾಂಗವೇ ಜನರನ್ನು ಪ್ರತಿನಿಧಿಸುವ ಸಂಸ್ಥೆ ಎಂಬ ಅರ್ಥದಲ್ಲಿ ಹಾಗೂ ನ್ಯಾಯಾಂಗವನ್ನು ಗುರಿಯಾಗಿಸಿಕೊಂಡು ಅವರು ಈ ಮಾತು ಹೇಳಿರಬಹುದು. ಈ ಲೇಖನವು ನ್ಯಾಯಾಂಗ, ಶಾಸಕಾಂಗದ ಪ್ರಾಮುಖ್ಯವನ್ನು ವಿಶ್ಲೇಷಿಸುತ್ತಿಲ್ಲ. ಅದರ ಬದಲು, ಜನರಿಂದ ಜನರಿಗಾಗಿ ಜನರೇ ನಡೆಸುವ ಸರ್ಕಾರದಲ್ಲಿ ಜನಸಾಮಾನ್ಯರನ್ನು ಹುಡುಕುವ ಉದ್ದೇಶ ಹೊಂದಿದೆ.

ನಮ್ಮಲ್ಲಿ ಕೋಟ್ಯಂತರ ಮಂದಿ ಕೆಲಸಗಾರರಿದ್ದಾರೆ. ಇವರಲ್ಲಿ ವಲಸೆ ಕೆಲಸಗಾರರು ಮತ್ತು ಸಂಬಳ ಇಲ್ಲದೆ ದುಡಿಯುವ ಕುಟುಂಬದ ಸದಸ್ಯರೂ ಸೇರಿದ್ದಾರೆ. ಅಷ್ಟು ಮಾತ್ರವಲ್ಲ ಇವರಲ್ಲಿ ಬಹುತೇಕರು ದಿನಗೂಲಿ ಕೆಲಸಗಾರರು. ಅರೆಬರೆ ಸಾಮಾಜಿಕ ಭದ್ರತೆ ಇರುವ ಕಾರ್ಮಿಕರು ಮೂರನೇ ಒಂದರಷ್ಟಿರಬಹುದು. ಕೃಷಿಕರ ಸಂಖ್ಯೆ ನಿರ್ದಿಷ್ಟವಾಗಿ ಲೆಕ್ಕಕ್ಕೆ ಸಿಗದಿರಬಹುದು. 19 ಕೋಟಿಯಷ್ಟು ಸ್ವಉದ್ಯೋಗಿಗಳಿದ್ದಾರೆ. ಇವರೊಂದಿಗೆ ಇವರ ಅವಲಂಬಿತರನ್ನೂ ಲೆಕ್ಕ ಹಾಕಿದರೆ ನಮ್ಮ ಸಮಾಜದ ಬಹುತೇಕರು ಈ ಎಲ್ಲ ಬಗೆಯ ಕೆಲಸಗಾರರೇ ಆಗಿದ್ದಾರೆ.

ಇವರಲ್ಲಿ ಎಷ್ಟು ಮಂದಿಯನ್ನು ಇಂದು ನಮ್ಮ ವಿಧಾನ ಸಭೆಗಳಲ್ಲಿ ಅಥವಾ ಸಂಸತ್ತಿನಲ್ಲಿ ನೋಡಬಹುದು? ಅಂದರೆ ದಿನಗೂಲಿ ನೌಕರರು ಅಥವಾ ವಲಸೆ ಕಾರ್ಮಿಕರು ಅಥವಾ ಸಣ್ಣಪುಟ್ಟ ವ್ಯಾಪಾರ, ಉದ್ಯಮದಲ್ಲಿ ತೊಡಗಿರುವವರು ಅಥವಾ ಸಣ್ಣಪುಟ್ಟ ಕೃಷಿಕರು ಎಷ್ಟು ಮಂದಿ ಇಂದು ಸಂಸದ, ಶಾಸಕರಾಗಿದ್ದಾರೆ? ಒಬ್ಬರೂ ಇಲ್ಲ. ಇವರ ಬದಲು ಯಾರು ಜನಪ್ರತಿನಿಧಿಗಳಾಗಿದ್ದಾರೆ? 16ನೇ ಲೋಕಸಭೆಗೆ ಚುನಾಯಿತರಾದವರಲ್ಲಿ ಶೇಕಡ 25ರಷ್ಟು ವಕೀಲ, ವೈದ್ಯ, ಎಂಜಿನಿಯರ್, ಕಾರ್ಯತಂತ್ರ ನಿರೂಪಕರಂತಹ ವೃತ್ತಿಪರರು. ಶೇ 17ರಷ್ಟು ಉದ್ಯಮಿಗಳು, ಶೇ 2ರಷ್ಟು ಮಂದಿ ಅಧಿಕಾರಿಗಳಾಗಿದ್ದವರು, ಶೇ 25ರಷ್ಟು ಸಾಮಾಜಿಕ ಕಾರ್ಯಕರ್ತರ ಹಣೆಪಟ್ಟಿ ಕಟ್ಟಿಕೊಂಡಿರುವ ರಾಜಕಾರಣಿಗಳು, ಶೇ 2ರಷ್ಟು ಮಾಧ್ಯಮದ ಹಿನ್ನೆಲೆಯವರು ಮತ್ತು ಶೇ 30ರಷ್ಟು ರೈತರು. ಅಷ್ಟು ಮಾತ್ರವಲ್ಲ ನಮ್ಮ ಪ್ರತಿನಿಧಿಗಳು ತುಂಬಾ ಅನುಕೂಲಸ್ಥರು ಕೂಡ. ಕೋಟಿಗಿಂತ ಕಡಿಮೆ ಆಸ್ತಿಪಾಸ್ತಿ ಇರುವವರನ್ನು ನಾವು ಚುನಾಯಿಸುವುದಿಲ್ಲ. 17ನೇ ಲೋಕಸಭೆಗೆ ಚುನಾಯಿತರಾದವರ ಸರಾಸರಿ ಆಸ್ತಿ ₹ 20 ಕೋಟಿ, ರಾಜ್ಯಸಭೆಗೆ ಆಯ್ಕೆ ಆದವರ ಸರಾಸರಿ ಆಸ್ತಿ ₹ 79 ಕೋಟಿ.

ಇವರನ್ನು ಚುನಾಯಿಸುವ ಜನರ ಆಸ್ತಿಪಾಸ್ತಿ ಬಗ್ಗೆ ನಿಖರ ಮಾಹಿತಿ ಇಲ್ಲ. ಕೆಲವು ದಾಖಲೆಗಳ ಪ್ರಕಾರ, ಗ್ರಾಮೀಣ ಮತ್ತು ನಗರ ಪ್ರದೇಶಗಳ ಒಂದು ಸಣ್ಣ ವರ್ಗದ ಸರಾಸರಿ ಆಸ್ತಿಯ ಮೌಲ್ಯ ಕೆಲವು ಲಕ್ಷಗಳಷ್ಟು ಇದ್ದರೆ, ತಳಸ್ತರದ ಜನರ ಸರಾಸರಿ ಆಸ್ತಿ ಮೌಲ್ಯ ಕೆಲವು ಸಾವಿರ ದಾಟುವುದಿಲ್ಲ. ವರ್ಗದ ದೃಷ್ಟಿಯಿಂದ ಮಾತ್ರವಲ್ಲ ಲಿಂಗ, ಸಮುದಾಯಗಳ ದೃಷ್ಟಿಯಿಂದಲೂ ನಮ್ಮ ಪ್ರತಿನಿಧಿಗಳು ಜನಪ್ರತಿನಿಧಿಗಳಲ್ಲ. ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರ ಐದನೇ ಒಂದು ಭಾಗ ಕೂಡ ಪ್ರತಿನಿಧಿಗಳಾಗುವುದಿಲ್ಲ.

ಅಲ್ಪಸಂಖ್ಯಾತರಿಂದಲೂ ಹೆಚ್ಚು ಮಂದಿ ಪ್ರತಿನಿಧಿಗಳಾಗುವುದಿಲ್ಲ. ಮೀಸಲು ಕ್ಷೇತ್ರಗಳ ಚುನಾವಣೆಯಲ್ಲಿ ಆ ನಿರ್ದಿಷ್ಟ ವರ್ಗಗಳ ಜನರಿಗಿಂತ ಬೇರೆ ಸಮುದಾಯದವರ ಪಾತ್ರವೇ ನಿರ್ಣಾಯಕವಾಗಿದೆ. ನಮ್ಮ ಚುನಾಯಿತ ಪ್ರತಿನಿಧಿಗಳು ಬಹುಸಂಖ್ಯಾತ ಹಿನ್ನೆಲೆಯಿಂದ ಬಂದ ಕೋಟ್ಯಧೀಶ ಪುರುಷರು ಮಾತ್ರವಲ್ಲ, ಇವರಲ್ಲಿ ಶೇ 43ರಷ್ಟು ಪ್ರತಿನಿಧಿಗಳು ಕ್ರಿಮಿನಲ್ ಹಿನ್ನೆಲೆ ಹೊಂದಿದ್ದಾರೆ.

ಜನಸಾಮಾನ್ಯರ ಲಕ್ಷಣಗಳೇ ಇಲ್ಲದವರು ಪ್ರತಿನಿಧಿಗಳಾದಾಗ ಪ್ರಜಾಪ್ರಭುತ್ವ ಹಲವು ಬಗೆಯಲ್ಲಿ ಅರ್ಥಹೀನವಾಗಲು ಆರಂಭವಾಗುತ್ತದೆ. ಒಂದು, ಜನರು ಮತ್ತು ಪ್ರತಿನಿಧಿಗಳ ಆಸಕ್ತಿಯ ನಡುವೆ ಸಂಬಂಧವೇ ಇಲ್ಲದಾಗುತ್ತದೆ. ಎರಡು, ಜನರು ಮತ್ತು ಪ್ರತಿನಿಧಿಗಳ ಆಸಕ್ತಿಗಳ ನಡುವೆ ಸಂಬಂಧ ಇಲ್ಲದಿರುವಾಗ ಚುನಾವಣೆ ಗೆಲ್ಲಲು ಅಡ್ಡದಾರಿ ತುಳಿಯಬೇಕಾಗುತ್ತದೆ. ಮೂರು, ಅಡ್ಡದಾರಿ ಮೂಲಕ ಚುನಾವಣೆ ಗೆಲ್ಲುವುದು ಸಾಮಾನ್ಯವಾದಾಗ ಸಮಾಜ, ಹಣಕಾಸನ್ನು ನಿರ್ವಹಣೆ ಮಾಡುವ ಸಾಮರ್ಥ್ಯ ಇಲ್ಲದವರು ನಾಯಕರಾಗುತ್ತಾರೆ. ನಾಲ್ಕು, ಅಡ್ಡದಾರಿಯಲ್ಲಿ ಚುನಾವಣೆ ಗೆದ್ದವರು ಅಡ್ಡದಾರಿಯಲ್ಲೇ ಸಮಾಜ, ಹಣಕಾಸು, ರಾಜಕೀಯವನ್ನು ನಿರ್ವಹಣೆ ಮಾಡಲು ಆರಂಭಿಸುತ್ತಾರೆ. ಈ ಕೆಲವು ಅಡ್ಡ ಪರಿಣಾಮಗಳನ್ನು ಬಿಡಿಬಿಡಿಯಾಗಿ ನೋಡೋಣ.

ಅನುಕೂಲಸ್ಥರಿಂದ ಹೆಚ್ಚಿನ ತೆರಿಗೆ ಸಂಗ್ರಹ, ಉದ್ಯೋಗ ಸೃಷ್ಟಿಗೆ ಒತ್ತು ನೀಡುವ ಅಭಿವೃದ್ಧಿ ನೀತಿ, ಗುಣಮಟ್ಟದ ಶಿಕ್ಷಣ, ಆರೋಗ್ಯ, ಕಾರ್ಮಿಕ ಹಿತವನ್ನು ಕಾಪಾಡುವ ಕಾರ್ಮಿಕ ಕಾಯ್ದೆಗಳು ಇವೆಲ್ಲ ಜನಸಾಮಾನ್ಯರ ಆದ್ಯತೆಗಳು. ಆದರೆ ಕೋಟ್ಯಧೀಶ ಪ್ರತಿನಿಧಿಗಳು ತಮ್ಮ ಆದ್ಯತೆಗಳನ್ನು ಪ್ರತಿನಿಧಿಸುವ ನೀತಿಗಳನ್ನು ಜಾರಿಗೆ ತರುತ್ತಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಂಗ್ರಹಿಸುವ ಪ್ರತೀ 100 ರೂಪಾಯಿ ತೆರಿಗೆಯಲ್ಲಿ ಶೇ 35ರಷ್ಟು ಅನುಕೂಲಸ್ಥರಿಂದ ಬಂದರೆ, ಶೇ 65ರಷ್ಟು ಅನನುಕೂಲಸ್ಥರಿಂದ ಬರುತ್ತಿದೆ. ಆದರೆ, ಸರ್ಕಾರದಿಂದ ಹೆಚ್ಚಿನ ಪ್ರಯೋಜನ ಪಡೆಯುವವರು ಅತಿ ಕಡಿಮೆ ಉದ್ಯೋಗ ಸೃಷ್ಟಿಸುವ ಬೃಹತ್ ಉದ್ಯಮಪತಿಗಳು. ಅತಿ ಹೆಚ್ಚು ಉದ್ಯೋಗ ಸೃಷ್ಟಿಸುವ ಸಣ್ಣಪುಟ್ಟ ವ್ಯಾಪಾರ, ಕೃಷಿಗೆ ಕಡಿಮೆ ಪ್ರಾಶಸ್ತ್ಯ ಸಿಗುತ್ತಿದೆ. ಬೃಹತ್ ಉದ್ದಿಮೆಗಳು ತೆಗೆದುಕೊಂಡ ಸಾಲವನ್ನು ಮರುಪಾವತಿಸದಿರುವುದರಿಂದ ಹಿಂದಿನ ಐದು ವರ್ಷಗಳಲ್ಲಿ ₹ 10 ಲಕ್ಷ ಕೋಟಿ ಮೊತ್ತದ ಸಾಲವನ್ನು ಬ್ಯಾಂಕ್‌ಗಳು ರೈಟ್ ಆಫ್ ಮಾಡಿವೆ.



ಮುಕ್ಕಾಲು ಭಾಗಕ್ಕಿಂತಲೂ ಹೆಚ್ಚಿನ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆಗಳು ಖಾಸಗಿ ಒಡೆತನದಲ್ಲಿವೆ. ಇದರಿಂದಾಗಿ, ಕಡಿಮೆ ಆದಾಯದ ತಳಸ್ತರದ ಜನ ತಮ್ಮ ಆದಾಯದ ಬಹುಭಾಗವನ್ನು ಶಿಕ್ಷಣ ಮತ್ತು ಆರೋಗ್ಯದ ಮೇಲೆ ಖರ್ಚು ಮಾಡುವ ಸ್ಥಿತಿ ಇದೆ. ಕಾರ್ಮಿಕರನ್ನು ಜೀತದಾಳುಗಳ ಸ್ಥಿತಿಗೆ ತಳ್ಳುವ ಕಾರ್ಮಿಕ ಕಾಯ್ದೆಗಳು ಜಾರಿಗೆ ಬರುತ್ತಿವೆ.

ಮೇಲಿನ ಎಲ್ಲ ನೀತಿಗಳು ಜನಸಾಮಾನ್ಯರಿಂದ ಅನುಕೂಲಸ್ಥರಿಗೆ ಸಂಪನ್ಮೂಲವನ್ನು ವರ್ಗಾಯಿಸುತ್ತಿವೆ. ಇದರಿಂದಾಗಿ ಶೇ 1ರಷ್ಟು ಜನರಲ್ಲಿ ದೇಶದ ಸಂಪತ್ತಿನ ಶೇ 40ರಷ್ಟು ಕ್ರೋಡೀಕರಣಗೊಂಡರೆ, ತಳಸ್ತರದ ಶೇ 50ರಷ್ಟು ಜನರಲ್ಲಿ ಶೇ 3ರಷ್ಟು ಸಂಪತ್ತಿದೆ. ಇಂತಹ ನೀತಿಗಳನ್ನು ಜಾರಿಗೆ ತಂದೂ ಚುನಾವಣೆ ಗೆಲ್ಲಬೇಕಾದರೆ ಪಕ್ಷಗಳು ಅಡ್ಡದಾರಿ ತುಳಿಯಲೇಬೇಕು. ಇದೇ ಕಾರಣದಿಂದ, ಚುನಾವಣೆ ಸಂದರ್ಭದಲ್ಲಿ ರಾಜಕೀಯ ಪಕ್ಷಗಳು ಶಿಕ್ಷಣ, ಆರೋಗ್ಯ, ಕಾರ್ಮಿಕ ನೀತಿಗಳ ಬಗ್ಗೆ ಚರ್ಚಿಸುವುದಿಲ್ಲ. ಅದರ ಬದಲು ಜಾತಿ, ಧರ್ಮ, ಭಾಷೆ, ಪ್ರದೇಶಗಳ ನೆಲೆಯಲ್ಲಿ ಜನರನ್ನು ಧ್ರುವೀಕರಿಸುವ ವಿಷಯಗಳನ್ನೇ ಮುಂಚೂಣಿಗೆ ತರುತ್ತವೆ. ಹಿಜಾಬ್, ಹಲಾಲ್, ಮಂದಿರ, ಮಸೀದಿ, ಚರ್ಚ್, ಹಿಂದಿ ಭಾಷೆ... ಇಂತಹವೇ ಹೆಚ್ಚು ಚರ್ಚೆಯಲ್ಲಿರುತ್ತವೆ.

ವರ್ತಮಾನ ಅಥವಾ ಭವಿಷ್ಯದ ಸಂಗತಿಗಳಿಗಿಂತ ಭೂತಕಾಲದ ಸಂಗತಿಗಳೇ ಹೆಚ್ಚು ಚರ್ಚೆಯಲ್ಲಿರುವಂತೆ ನೋಡಿಕೊಳ್ಳುತ್ತಾರೆ ನಮ್ಮ ರಾಜಕಾರಣಿಗಳು. ಆರ್ಥಿಕ ನೆಲೆಯ ಬಹುಸಂಖ್ಯಾತ, ಅಲ್ಪಸಂಖ್ಯಾತಕ್ಕಿಂತ ಹೆಚ್ಚಾಗಿ ಧಾರ್ಮಿಕ ನೆಲೆಯ ಬಹುಸಂಖ್ಯಾತ, ಅಲ್ಪಸಂಖ್ಯಾತ ಪರಿಕಲ್ಪನೆಗಳು ಜನರ ಪ್ರಜ್ಞೆಯ ಭಾಗವಾಗುವಂತೆ ಮಾಡುತ್ತಾರೆ.

ಅಡ್ಡದಾರಿಯಲ್ಲೇ ಚುನಾವಣೆ ಗೆಲ್ಲುವುದು ಆಚರಣೆಗೆ ಬಂದ ನಂತರ ಸಮಾಜ, ಹಣಕಾಸು, ಸಂಸ್ಕೃತಿಗಳನ್ನು ನಿರ್ವಹಿಸುವ ಸಾಮರ್ಥ್ಯ ಇಲ್ಲದವರೂ ನಾಯಕರಾಗುತ್ತಾರೆ. ಇವರು ಕೈಗಾರಿಕೆ, ಸಾರಿಗೆ ಸಂಪರ್ಕದಂತಹವುಗಳನ್ನು ನಿರ್ವಹಣೆ ಮಾಡುವುದು ಬಿಡಿ, ಶಿಕ್ಷಣ, ಆರೋಗ್ಯ ಕ್ಷೇತ್ರಗಳನ್ನೂ ನಿರ್ವಹಣೆ ಮಾಡಲು ಸಮರ್ಥರಾಗಿ ಇರುವುದಿಲ್ಲ. ಇವರು ಕೈಹಾಕುವ ಉದ್ಯಮ, ಮೂಲಸೌಕರ್ಯ ವಲಯಗಳು ನಷ್ಟ ಅನುಭವಿಸಿ ಮುಚ್ಚುವ ಸ್ಥಿತಿಗೆ ಬರುತ್ತವೆ. ಶಿಕ್ಷಣ, ಆರೋಗ್ಯ ಸಂಸ್ಥೆಗಳು ಸೋಲುತ್ತವೆ. ತಮ್ಮ ಅಸಮರ್ಥ ನೀತಿ ನಿರ್ವಹಣೆಗಳಿಂದ ಸೋಲುವ ಸಂಸ್ಥೆಗಳ ಹೊಣೆಯನ್ನು ದುಡಿಯುವವರ ತಲೆ ಮೇಲೆ ಹಾಕಿ ಎಲ್ಲವನ್ನೂ ಖಾಸಗೀಕರಣಗೊಳಿಸುತ್ತಾರೆ.

ಪ್ರಜಾಪ್ರಭುತ್ವದ ಇತರ ಅಂಗಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸಿದರೆ ಇವರ ಅಸಾಮರ್ಥ್ಯ ಬೆಳಕಿಗೆ ಬರುತ್ತದೆ. ಇದೇ ಕಾರಣದಿಂದ ಮಾಧ್ಯಮ, ನ್ಯಾಯಾಂಗ, ಕಾರ್ಯಾಂಗಗಳು ಸ್ವತಂತ್ರವಾಗಿ ಕಾರ್ಯನಿರ್ವಹಿಸದಂತೆ ಮಾಡಲು ಶತಪ್ರಯತ್ನ ನಡೆಸುತ್ತಾರೆ. ಇಂತಹ ಶಾಸಕಾಂಗವೇ ಪರಮೋಚ್ಚವಾದರೆ ನಮ್ಮ ಸಮಾಜದ ತಳವರ್ಗಗಳ ಭವಿಷ್ಯ ಏನಾದೀತು? ಇಂತಹ ಸಂದರ್ಭದಲ್ಲಿ ಬಿಡಿಬಿಡಿಯಾದ ಉದ್ದೇಶಗಳನ್ನು ಇಟ್ಟುಕೊಂಡು ನಡೆಯುವ ಹೋರಾಟಗಳು ಫಲಪ್ರದವಾಗುವುದು ಕಷ್ಟ. ಪ್ರಜಾಪ್ರಭುತ್ವದ ಸುಧಾರಣೆಯೇ ಎಲ್ಲ ಹೋರಾಟಗಳ ಗುರಿ ಆಗಬೇಕಾಗಿದೆ.

ಚುರುಮುರಿ



ರೌಡಿ ಗಣತಿ

• ಆನಂದ

'ಬೆಂಗಳೂರಿನಲ್ಲಿ 7,526 ರೌಡಿಗಳು ಇದ್ದಾರಂತೆ' ಮಡದಿ ಹೇಳಿದಳು.

'ಜನಗಣತಿ ತರಹ ರೌಡಿ ಗಣತಿ ನಡೀತೇನು?' ಎಂದು ಕೇಳಿದೆ.

'ಗೊತ್ತಿಲ್ಲ. ಇದು ಅಧಿಕೃತ ಮಾಹಿತಿ. ಸಾಕ್ಷಾತ್ ಗೃಹ ಸಚಿವರು ಸದನಕ್ಕೆ ನೀಡಿರುವ ಫಿಗರ್' ಎಂದಳು.

'ಅಂದಮೇಲೆ ತಪ್ಪಿರಲಿಕ್ಕೆ ಸಾಧ್ಯವೇ ಇಲ್ಲ. ಈಗ ಅದು ಹೆಚ್ಚಾಗಿರಲಿಕ್ಕೆ ಸಾಕು. ಏಕೆಂದರೆ ಹೊಸ ಹೊಸ ರೌಡಿಗಳು ಹುಟ್ಟಿಕೊಂಡಿರಬಹುದಲ್ಲವೇ?' ನನಗೆ ಅನುಮಾನ.

'ಕಡಿಮೆ ಆಗಿದೆಯಂತೇರಿ' ಎಂದಾಗ ನನಗೆ ಆಶ್ಚರ್ಯ. 'ಹಿಂದಿನ ಮೂರು ವರ್ಷಗಳಲ್ಲಿ ಸುಮಾರು 800 ರೌಡಿಗಳನ್ನು ಪ್ರಮೋಟ್ ಮಾಡಿದ್ದಾರಂತೆ'.

'ಪ್ರಮೋಟ್?'

'ಅವರನ್ನು ರೌಡಿಶೀಟರ್ ಲಿಸ್ಟ್‌ನಿಂದ ತೆಗೆದುಹಾಕಿದ್ದಾರಂತೆ ಪೊಲೀಸರು...'

'ತೆಗೆಯೋದಕ್ಕೆ ಮುಂಚೆ ರೌಡಿಗಳೇನು ಪರೀಕ್ಷೆಗೆ ಕೂಡ್ತಾರೇನು?'

'ಛೆ ಛೇ! ಬೇರೆ ಬೇರೆ ಮಾನದಂಡಗಳಿವೆಯಂತೆ. ಸೀನಿಯರ್ ಸಿಟಿಜನ್ ಆಗಿರೋ ರೌಡಿಗಳು, ಹುಷಾರಿಲ್ಲದೆ ಇರೋರು, ಯಾವುದೇ ಕೇಸ್ ಇಲ್ಲದೇ ಇರೋರು... ಹೀಗೆ ಹಲವಾರು ರಿಯಾಯಿತಿಗಳು ಇವೆಯಂತೆ. ಅವುಗಳ ಆಧಾರದ ಮೇಲೆ ರೌಡಿಗಳು ಮಾಜಿ ರೌಡಿಗಳಾಗ್ತಾರಂತೆ. ಅದೇ ಪ್ರಮೋಷನ್'.

ನನಗೆ ಈಗ ಕುತೂಹಲ ಉಂಟಾಯಿತು. 'ಈ ಎಕ್ಸ್ ರೌಡಿಗಳು ಮುಂದೇನು ಮಾಡ್ತಾರೆ?'

'ಅಯ್ಯೋ! ಅದೇನು ದೊಡ್ಡ ವಿಷಯ. ಈಗಾಗಲೇ ಆ್ಯಕ್ಟಿವ್ ರೌಡಿಗಳು ಕಾರ್ಪೊರೇಟರ್, ಶಾಸಕ, ಮಂತ್ರಿಗಳಿಗೆ ತೋಳ್ಬಲ ಕೊಡ್ತಿಲ್ಲವೆ? ಹಾಗೇ ರಾಜಕಾರಣದ ಟ್ರಿಕ್ಸ್ ಒಂದಿಷ್ಟು ಕಲೀತಾರೆ. ಪಕ್ಷಗಳ ಯೂತ್ ಬ್ರಿಗೇಡ್‌ಗಳಲ್ಲಿ ತರಬೇತಿ ಸಿಗುತ್ತೆ...'

'ಅಂದರೆ, ಇಂದಿನ ರೌಡಿಯೇ ನಾಳಿನ ರಾಜಕಾರಣಿ?'

'ಶಾಂತಂ ಪಾಪಂ. ಎಲ್ಲರೂ ಹಾಗಲ್ಲ. ಸಭ್ಯಸ್ಥರೂ ಇದ್ದಾರೆ. ಕೆಲವು ಮಾಜಿ ರೌಡಿಗಳು ಮೊದಲು ಪುಡಿ ರಾಜಕಾರಣಿಗಳಾಗಿ ಹಂತ ಹಂತವಾಗಿ ಮೇಲೇರಿದ್ದಾರೆ. ಅವರೇ ಈಗಿನ ಮಾಜಿ ರೌಡಿಗಳಿಗೆ ರೋಲ್ ಮಾಡೆಲ್. ಸಾಕು ಏಳಿ ಊಟದ ಟೈಮ್ ಆಯ್ತು'.

ದಿನದ ಟ್ವೀಟ್

ಚೈತನ್ಯ ಪುಟಿಯಲಿ



ಗಣರಾಜ್ಯೋತ್ಸವ ಧ್ವಜಾರೋಹಣದ ಎರಡು ಸಮಾರಂಭಗಳಲ್ಲಿ ಪಾಲ್ಗೊಂಡೆ– ಎರಡನೆಯದನ್ನು ಮುಂಬೈನ ಕೊಳೆಗೇರಿಯೊಂದರ ರಿಕ್ಷಾ ನಿಲ್ದಾಣದಲ್ಲಿ ಆಯೋಜಿಸಲಾಗಿತ್ತು. ಭಾರತವು ತನ್ನ ಗಗನಚುಂಬಿ ಕಟ್ಟಡಗಳಿಗಿಂತಲೂ ತನ್ನ ಬೀದಿಗಳಲ್ಲೇ ಹೆಚ್ಚು ಚೈತನ್ಯಶೀಲವಾಗಿದೆ.

ಸುಧೀಂದ್ರ ಕುಲಕರ್ಣಿ, ರಾಜಕೀಯ ವಿಶ್ಲೇಷಕ

ಯಾರೂ ಹೇಳದ ವಿಚಾರ



ಇತರ ಎಲ್ಲ ವಿದ್ಯಾರ್ಥಿಗಳನ್ನು ಪ್ರತಿಸ್ಪರ್ಧಿಗಳನ್ನಾಗಿ ಕಾಣುವಂತೆ ನಾವು ನಮ್ಮ ಮಕ್ಕಳಿಗೆ ಶಿಕ್ಷಣ ನೀಡುತ್ತಿದ್ದೇವೆ. ಸ್ನೇಹಿತರು ಕೆಟ್ಟವರು, ಅವರು ನಿಮ್ಮ ವೃತ್ತಿಬದುಕನ್ನು ಹಾಳು ಮಾಡುತ್ತಾರೆ, ನೀವು ಓದಬೇಕು ಮತ್ತು ಗೆಲ್ಲಬೇಕು ಎಂದು ಮಕ್ಕಳಿಗೆ ಹೇಳಿ ಕೊಡಲಾಗುತ್ತದೆ. ನೀವು ಗೆಲುವು ಸಾಧಿಸಿದ ನಂತರ ಒಬ್ಬಂಟಿಯಾಗುತ್ತೀರಿ. ಜೀವನದಲ್ಲಿ ಮುಖ್ಯವಾಗುವುದು ಸಂಬಂಧಗಳು ಎಂಬುದನ್ನು ನಮಗೆ ಯಾರೂ ಹೇಳುತ್ತಿಲ್ಲ.

ದೇವದತ್ತ ಪಟ್ಟನಾಯಕ್, ಲೇಖಕ

ಕಿಡಿನುಡಿ



ವ್ಯಕ್ತಿಗತ ರಾಜಕೀಯ ನಿಲುವುಗಳು ಹಾಗೂ ನಂಬಿಕೆಗಳು ಏನೇ ಇರಲಿ, ಗಿರೀಶ ಕಾರ್ನಾಡ, ಯು.ಆರ್. ಅನಂತಮೂರ್ತಿ ಮತ್ತು ಎಸ್.ಎಲ್. ಭೈರಪ್ಪ ಅವರು ಕನ್ನಡದ ಸಾಹಿತ್ಯ ದಿಗ್ಗಜರು. ಅವರ ರಾಜಕೀಯ ಒಲವನ್ನು ನೆಪವಾಗಿಟ್ಟುಕೊಂಡು ಅವರ ಸಾಹಿತ್ಯ ಸಾಧನೆಗಳನ್ನು ಯಾರೇ ಅಪಮಾನಿಸಿದರೂ ಅದು ಕನ್ನಡಕ್ಕೆ ಮಾಡುವ ದೊಡ್ಡ ಅಪಚಾರ.

ರಾಮಚಂದ್ರ ಎಮ್, ಬರಹಗಾರ

25 ವರ್ಷಗಳ ಹಿಂದೆ

ಮಂಗಳವಾರ, 27-1-1998

• **ಈಶಾನ್ಯ ರಾಜ್ಯಗಳಲ್ಲಿ ಬಹಿಷ್ಕಾರ ಹಿಂಸೆ ಮಧ್ಯೆ ಗಣರಾಜ್ಯೋತ್ಸವ**

ಗುವಾಹಟಿ, ಜ. 26 (ಪಿಟಿಐ)– ಹಿಂಸಾಚಾರ, ಬಹಿಷ್ಕಾರ ಹಾಗೂ ಬಂದ್‌ಗಳ ನಡುವೆಯೇ ಇಂದು ದೇಶದಾದ್ಯಂತ 49ನೇ ಗಣರಾಜ್ಯೋತ್ಸವ ಆಚರಿಸಲಾಯಿತು.

ಅಸ್ಸಾಂನಲ್ಲಿ ಉಲ್ಫಾ ಹಾಗೂ ಎನ್‌ಡಿಎಫ್‌ಬಿ ಗಣರಾಜ್ಯೋತ್ಸವ ಬಹಿಷ್ಕರಿಸಲು ಕರೆ ನೀಡಿದ್ದ 12 ಗಂಟೆಗಳ ಬಂದ್ ವೇಳೆಯಲ್ಲಿ ಸುರಭೋಗ್ ರೈಲ್ವೆ ನಿಲ್ದಾಣಕ್ಕೆ ಬೆಂಕಿ ಹಚ್ಚಲಾಯಿತು.

ಬಾರ್ಪೇಟೆ ಜಿಲ್ಲೆಯ ನಿಲ್ದಾಣಕ್ಕೆ ಬೆಂಕಿ ಹಚ್ಚಿದ ಉಗ್ರಗಾಮಿಗಳು ಹಲವು ದಾಖಲೆಗಳನ್ನು ನಾಶಪಡಿಸಿದರಲ್ಲದೆ, ದೂರವಾಣಿ ತಂತಿಗಳನ್ನು ಕತ್ತರಿಸಿದರು ಎಂದು ಅಧಿಕೃತ ಮೂಲಗಳು ತಿಳಿಸಿವೆ.

• **ಉಗ್ರಗಾಮಿಗಳಿಂದ 23 ಕಾಶ್ಮೀರಿ ಪಂಡಿತರ ಹತ್ಯೆ**

ಶ್ರೀನಗರ, ಜ. 26 (ಯುಎನ್‌ಐ, ಪಿಟಿಐ)– ಶ್ರೀನಗರದ ಹೊರವಲಯದಲ್ಲಿ ಬಂದೂಕುಗಳಿಂದ ಸಜ್ಜಿತರಾದ ಉಗ್ರಗಾಮಿಗಳು ಭಾನುವಾರ ರಾತ್ರಿ ಮನಸ್ವೇಚ್ಛೆ ಗುಂಡು ಹಾರಿಸಿ ಕನಿಷ್ಠ 23 ಮಂದಿ ಕಾಶ್ಮೀರಿ ಪಂಡಿತರನ್ನು ಕಗ್ಗೊಲೆ ಮಾಡಿರುವ ದಾರುಣ ಘಟನೆ ವರದಿಯಾಗಿದೆ.

ತಮ್ಮ ಜನಾಂಗದವರ ಕಗ್ಗೊಲೆಯನ್ನು ಪ್ರತಿಭಟಿಸಿ ಲೋಕಸಭಾ ಚುನಾವಣೆಯನ್ನು ಬಹಿಷ್ಕರಿಸುವುದಾಗಿ ಕಾಶ್ಮೀರ ಪಂಡಿತರು ಹೇಳಿದ್ದಾರೆ.

ಅಧಿಕೃತ ಮೂಲಗಳ ಪ್ರಕಾರ, ಉಗ್ರಗಾಮಿಗಳು ಶ್ರೀನಗರದಿಂದ 26 ಕಿ.ಮೀ. ದೂರದಲ್ಲಿರುವ ವಂಧಾಮ ಗ್ರಾಮದಲ್ಲಿ ಗುಂಡಿನ ಸುರಿಮಳೆಗೈದಿದ್ದರು. ದಾಳಿಯಲ್ಲಿ ಸತ್ತವರ ಪೈಕಿ ಒಂಬತ್ತು ಮಹಿಳೆಯರು ಮತ್ತು ನಾಲ್ವರು ಮಕ್ಕಳು ಸೇರಿದ್ದಾರೆ.

• **'ಭಾರತ ಸಮ್ಮಾನ' ಪ್ರಶಸ್ತಿ**

ನವದೆಹಲಿ, ಜ. 26 (ಪಿಟಿಐ)– ಭಾರತದ ಕುರಿತಾಗಿ ವಿದೇಶಗಳಲ್ಲಿ ಉತ್ತಮ ತಿಳಿವಳಿಕೆ ನೀಡಲು ಶ್ರಮಿಸುವವರಿಗೆ ಕೊಡಲು 'ಭಾರತ ಸಮ್ಮಾನ' ಪ್ರಶಸ್ತಿಯನ್ನು ಸರ್ಕಾರ ಸ್ಥಾಪಿಸಿದೆ.

ದೇಶದ ಸುವರ್ಣ ಸ್ವಾತಂತ್ರ್ಯದ ಸಂದರ್ಭದಲ್ಲಿ ಆರಂಭಿಸಲಾಗಿರುವ ಈ ಪ್ರಶಸ್ತಿಗೆ ವಿದೇಶಿಯರಲ್ಲದೆ, ವಿದೇಶಗಳಲ್ಲಿ ನೆಲೆಸಿರುವ ಭಾರತೀಯರೂ ಭಾರತೀಯ ಸಂಜಾತರೂ ಅರ್ಹರಾಗಿರುತ್ತಾರೆ.

ಸಂಗತ

ವಿಸ್ತರಿಸುತ್ತಿರುವ ಅಮಲಿನ ಜಾಲ

ವೈದ್ಯರು, ವೈದ್ಯ ವಿದ್ಯಾರ್ಥಿಗಳೇ ಡ್ರಗ್ಸ್ ಜಾಲದಲ್ಲಿ ಸಿಲುಕಿರುವ ಮಂಗಳೂರಿನ ಪ್ರಸ್ತುತ ವಿದ್ಯಮಾನ ಈ ಜಾಲದ ಕರಾಳ ಸ್ಥಿತಿಗೆ ತಾಜಾ ನಿದರ್ಶನ

• ಡಾ. ಮುರಲೀಧರ ಕಿರಣಕೆರೆ

ಆ ಯುವ ಸರ್ಕಾರಿ ಅಧಿಕಾರಿಯ ಪೋಷಕರು ದಿಕ್ಕೆಟ್ಟವರಂತೆ ಕೂತಿದ್ದರು. ಮಾದಕದ್ರವ್ಯ ವ್ಯಸನಿ ಮಗನನ್ನು ಪರಿಸ್ಥಿತಿ ಕೈಮೀರುವ ಮುನ್ನವೇ ಪುನಶ್ಚೇತನ ಶಿಬಿರಕ್ಕೆ ಸೇರಿಸಿ, ತುಂಬಾ ಪರಿಶ್ರಮದಿಂದ ಚಟ ಬಿಡಿಸಿದ್ದರು. ದೀರ್ಘ ವೈದ್ಯಕೀಯ ರಜೆಯ ನಂತರ ಕೆಲಸಕ್ಕೆ ಮರಳಿದವನು, ವರ್ಷ ಕಳೆಯುವುದರೊಳಗೆ ಮತ್ತೆ ವ್ಯಸನಕ್ಕೆ ಜಾರಿದ್ದ!

ಸಾರ್ವಜನಿಕರ ದೂರು, ಮೇಲಧಿಕಾರಿಗಳ ದಂಡನೆ, ಹದಗೆಡುತ್ತಿದ್ದ ಮಗನ ಆರೋಗ್ಯವು ಆ ಹಿರಿಯರನ್ನು ಕಂಗೆಡಿಸಿತ್ತು. ಬಲವಂತದಿಂದ ಮತ್ತೆ ವ್ಯಸನ ವಿಮುಕ್ತಿ ಕೇಂದ್ರಕ್ಕೆ ದಾಖಲಿಸುವುದನ್ನು ಬಿಟ್ಟು ಅನ್ಯಮಾರ್ಗ ಇಲ್ಲವೆಂದು ಮನದಟ್ಟು ಮಾಡಿಸುವಾಗ ಆ ಗೋಳು ಹೃದಯ ಕಲಕಿತ್ತು!

ಹೌದು, ಮಾದಕದ್ರವ್ಯ ವ್ಯಸನದ ಗ್ರಾಫ್ ಮೇಲೇರುತ್ತಲೇ ಸಾಗಿದೆ. ನಮ್ಮ ದೇಶವೊಂದರಲ್ಲೇ ಮಾದಕದ್ರವ್ಯ ವ್ಯಸನಿಗಳ ಸಂಖ್ಯೆ ಹತ್ತು ಕೋಟಿ ಮೀರಿದೆ! ಚಟ ಹತ್ತಿಸಿಕೊಂಡವರಲ್ಲಿ ಸೆಲೆಬ್ರಿಟಿಗಳು, ಸಿನಿ ತಾರೆಯರು, ಅಧಿಕಾರಸ್ಥರು, ಉನ್ನತ ಹುದ್ದೆಗಳಲ್ಲಿ ಇರುವವರು, ಕಾರ್ಮಿಕರು, ವಿದ್ಯಾರ್ಥಿಗಳು, ಶ್ರೀಸಾಮಾನ್ಯರು ಎಲ್ಲರೂ ಇದ್ದಾರೆ. ವಿದ್ಯೆ, ತಿಳಿವಳಿಕೆ, ಬುದ್ಧಿವಂತಿಕೆ, ಅಂತಸ್ತು, ಗೌರವ ಯಾವುದನ್ನೂ ಗಣನೆಗೆ ತೆಗೆದುಕೊಳ್ಳದ ರೀತಿಯಲ್ಲಿ ಡ್ರಗ್ಸ್‌ನ ಕರಾಳ ಬಾಹುಗಳು ಎಲ್ಲರತ್ತ ಚಾಚುತ್ತಿವೆ.

ಸಾರ್ವಜನಿಕರಲ್ಲಿ ಆರೋಗ್ಯ ಪ್ರಜ್ಞೆ ಮೂಡಿಸಬೇಕಿರುವ ವೈದ್ಯರು, ವೈದ್ಯ ವಿದ್ಯಾರ್ಥಿಗಳೇ ಮಾದಕದ್ರವ್ಯ ಸೇವನೆ, ಮಾರಾಟದ ದಂಧೆಯಲ್ಲಿ ಸಿಲುಕಿ ಪೊಲೀಸರಿಗೆ ಸೆರೆಯಾಗುತ್ತಿರುವ ಮಂಗಳೂರಿನ ಪ್ರಸ್ತುತ ವಿದ್ಯಮಾನ ಈ ಜಾಲದ ಕರಾಳ ಸ್ಥಿತಿಗೆ ತಾಜಾ ನಿದರ್ಶನ.

ಶಾಲಾ, ಕಾಲೇಜು ಮಕ್ಕಳಲ್ಲಿ ಮಾದಕ ಪದಾರ್ಥಗಳ ಸೇವನೆ ಹೆಚ್ಚುತ್ತಿರುವುದು ತುಂಬಾ ಆತಂಕಕಾರಿ ಸಂಗತಿ. ತಪ್ಪು ಒಪ್ಪುಗಳನ್ನು ವಿಮರ್ಶಿಸಿ ನಿರ್ಧಾರ ತೆಗೆದುಕೊಳ್ಳುವ ಮುಮ್ಮೆದುಳಿನ ನಿರ್ದಿಷ್ಟ ಭಾಗ ಹದಿಹರೆಯದವರಲ್ಲಿ ಇನ್ನೂ ಪೂರ್ಣವಾಗಿ ಬೆಳೆದಿರುವುದಿಲ್ಲ. ಜೊತೆಗೆ ಆಕರ್ಷಣೆಗಳೂ ಹೆಚ್ಚಿರುವ ಈ ವಯಸ್ಸಲ್ಲಿ ಸ್ನೇಹಿತರ ಒತ್ತಡ, ಕುತೂಹಲ, ಪ್ರಯೋಗಾತ್ಮಕ ಮನೋಭಾವ, ಮಾಧ್ಯಮಗಳ ಪ್ರಭಾವದ ಕಾರಣ ಅಮಲುಕಾರಕಗಳ ರುಚಿ ನೋಡಲು ಆರಂಭಿಸುತ್ತಾರೆ. ಮದ್ಯ ಮತ್ತು ತಂಬಾಕೇ ಇಲ್ಲಿ ಮೊದಲ ಸ್ವಾಗತಕಾರರು. ನಂತರದಲ್ಲಿ ಇದರ ಮತ್ತು ಕಡಿಮೆಯಾದಂತೆನಿಸಿ ಡ್ರಗ್ಸ್‌ಗೆ ಮೊರೆ ಹೋಗುತ್ತಾರೆ.

ಅಮಾಯಕ ಮಕ್ಕಳನ್ನು ಅರಿವಿಗೆ ಬಾರದಂತೆ ಈ ಕರಾಳ ಖೆಡ್ಡಾಕ್ಕೆ ಬೀಳಿಸುವ ಜಾಲ ತುಂಬಾ ವ್ಯವಸ್ಥಿತವಾಗಿ ಕಾರ್ಯನಿರ್ವಹಿಸುತ್ತಿದೆ. ಶ್ರಮವಿಲ್ಲದೆ ಹಣ ಮಾಡುವ ಉದ್ಯೋಗದಂತೆ ಡ್ರಗ್ಸ್ ದಂಧೆಯನ್ನು ಬಿಂಬಿಸಿ ಹದಿಹರೆಯದವರನ್ನು ವಶೀಕರಣ ಮಾಡುವುದು ಕಷ್ಟವೇನಲ್ಲ. ಹೌದು, ದೇಶವೊಂದನ್ನು ಸೋಲಿಸಲು, ನಿರ್ನಾಮ ಮಾಡಲು ಶತ್ರುಗಳು ಯುದ್ಧವನ್ನೇ ಸಾರಬೇಕೆಂದಿಲ್ಲ. ಯುವಜನಾಂಗವನ್ನು ಮದ್ಯವ್ಯಸನ, ಮಾದಕದ್ರವ್ಯದ ಜಾಲಕ್ಕೆ ಬೀಳಿಸಿ ಹಾಳು ಮಾಡಿದರೆ ಸಾಕು, ಆ ದೇಶದ ಕತೆಯೇ ಮುಗಿದಂತೆ. ಈ ಪರೋಕ್ಷ ಯುದ್ಧ ದೊಡ್ಡ ನಗರಗಳೇನು, ಈಗ ಸಣ್ಣಪುಟ್ಟ ಪಟ್ಟಣಗಳು, ಹಳ್ಳಿಗಳಿಗೂ ವ್ಯಾಪಿಸಿದೆ! ಕೆಲವು ಅಪಘಾತ, ಅತ್ಯಾಚಾರ, ಗಲಭೆ, ಕೊಲೆ, ಸುಲಿಗೆಯಂತಹ ದುಷ್ಕೃತ್ಯಗಳ ಹಿಂದಿರುವುದು ಡ್ರಗ್ಸ್ ಪ್ರಭಾವ!

ಮಾದಕದ್ರವ್ಯದ ಪ್ರಭಾವದಿಂದ ಮೆದುಳಿನಲ್ಲಿ ಅಧಿಕ ಪ್ರಮಾಣದಲ್ಲಿ ಸ್ರವಿಸುವ ಡೋಪಮಿನ್, ವಾಸ್ತವ ಪರಿಸ್ಥಿತಿಯನ್ನು ಮರೆಸಿ ಯಾವುದೋ ಲೋಕದಲ್ಲಿ ತೇಲುವ ಅನುಭವ ದೊರಕಿಸುವುದಲ್ಲದೆ ಮತ್ತೆ ಮತ್ತೆ ರುಚಿ ನೋಡಲು ಪ್ರೇರೇಪಿಸುತ್ತದೆ. ಈ ಬಯಕೆ ಹತ್ತಿಕ್ಕಲಾಗದೆ ಡ್ರಗ್ಸ್ ಹುಡುಕಿಕೊಂಡು ಹೊರಡುವವರು ಬೇಗನೆ ಚಟದ ಹಂತಕ್ಕೆ ಏರುತ್ತಾರೆ. ದೈಹಿಕ, ಮಾನಸಿಕ ಸ್ವಾಸ್ಥ್ಯ ಹದಗೆಡುತ್ತದೆ. ನರಗಳ ನಿಶ್ಶಕ್ತಿ, ದೈನಂದಿನ ಚಟುವಟಿಕೆಗಳು ಕುಂದುವುದು, ಮಂಕಾಗುವಿಕೆ, ಮರೆವು, ಹಸಿವು ಕಡಿಮೆಯಾಗುವುದು, ತೂಕ ನಷ್ಟ, ರೋಗನಿರೋಧಕ ಸಾಮರ್ಥ್ಯ ದುರ್ಬಲವಾಗುವುದಲ್ಲದೆ ಯಕೃತ್, ಹೃದಯ, ಮೂತ್ರಪಿಂಡಗಳಿಗೆ ಹಾನಿಯಾಗುತ್ತದೆ.



ಕಾನೂನು ಮಾತ್ರದಿಂದಲೇ ಮಾದಕದ್ರವ್ಯದ ಜಾಲವನ್ನು ಮಟ್ಟ ಹಾಕುವುದು ಅಸಾಧ್ಯ. ಶಾಲಾ, ಕಾಲೇಜು ಮಕ್ಕಳಲ್ಲಿ ಈ ಕುರಿತು ಅರಿವು ಮೂಡಿಸಬೇಕು. ಅಪರೂಪಕ್ಕೊಮ್ಮೆ ನಾಮಕಾವಸ್ತೆ ಕಾರ್ಯಕ್ರಮ ಮಾಡಿಬಿಟ್ಟರೆ ಸಾಲದು. ಪಠ್ಯದ ರೀತಿಯಲ್ಲಿ ಇದು ನಿರಂತರವಾಗಿರಬೇಕು. ಮನಸ್ಸಿಗೆ ನಾಟುವಂತೆ ಮಾದಕದ್ರವ್ಯಗಳ ರಕ್ಕಸ ಮುಖವನ್ನು ತೆರೆದಿಡಬೇಕು. ಪೋಷಕರಿಗೂ ಜಾಗೃತಿ ಮುಖ್ಯ. ಹೆತ್ತವರು ಮಕ್ಕಳನ್ನು ಗಮನಿಸುತ್ತಾ, ಆತ್ಮೀಯತೆಯಿಂದ ಮಾತನಾಡುತ್ತಾ ಪ್ರೀತಿ ತೋರುತ್ತಿದ್ದರೆ ಮಕ್ಕಳು ಹಾದಿ ತಪ್ಪುವ ಸಂಭವ ಕಡಿಮೆ. ಪ್ರೀತಿ ವಂಚಿತ ಮಕ್ಕಳು, ಅಸಡ್ಡೆಗೆ ಗುರಿಯಾಗಿರುವವರು ಈ ಜಾಲಕ್ಕೆ ಬೀಳುವ ಸಂಭವ ಹೆಚ್ಚು. ಮಾಧ್ಯಮಗಳು ಅದರಲ್ಲೂ ಪ್ರಮುಖವಾಗಿ ಎಲೆಕ್ಟ್ರಾನಿಕ್ ಮಾಧ್ಯಮದ ಹೊಣೆಗಾರಿಕೆ ದೊಡ್ಡದು. ವಿಚಾರಗಳನ್ನು ವೈಭವೀಕರಿಸದೆ, ಆಗುವ ಅನಾಹುತಗಳ ಕುರಿತಾಗಿ ಎಚ್ಚರಿಸುವ ಸಾಮಾಜಿಕ ಜವಾಬ್ದಾರಿ ಮೆರೆಯಬೇಕು.

ಸಹಸ್ರಾರು ಕೋಟಿ ವ್ಯವಹಾರದ ಈ ವಿಶ್ವವ್ಯಾಪಿ ದಂಧೆಯ ಜಾಲವನ್ನು ವ್ಯವಸ್ಥಿತವಾಗಿ ಮಟ್ಟ ಹಾಕುವುದು ಹಗರಣಗಳ ಮಾಯಾಪೆಟ್ಟಿಗೆಯನ್ನು ತೆರೆದಂತೆ! ಹೊರಬರುವ ಅನಿಷ್ಟಗಳು, ಅಪ್ರಿಯ ಸತ್ಯಗಳು, ಕರಾಳ ಮುಖಗಳನ್ನು ಎದುರಿಸಿ ಸಮರ ಸಾರುವುದು ಖಂಡಿತಾ ಸುಲಭವಲ್ಲ. ಕಾನೂನು ರಕ್ಷಕರು ಒತ್ತಡಗಳಿಗೆ ಬಾಗದೆ ಸರಿಯಾದ ರೀತಿಯಲ್ಲಿ ತನಿಖೆ ನಡೆಸಿ ಈ ಡ್ರಗ್ಸ್ ದಂಧೆಯನ್ನು ನಿಷ್ಠುರವಾಗಿ ಸದೆಬಡಿದಾಗ ಮಾತ್ರ ಮಾಯಾಪೆಟ್ಟಿಗೆಯ ಒಳಗಿರುವ ಕೊನೆಯ ಅಂಶ 'ಭರವಸೆ' ಹೊರಬರಲು ಸಾಧ್ಯ.

ವಾಚಕರ ವಾಣಿ

ಮತ್ತೆ ಅಟಕಾಯಿಸಿರುವ ಗಣಿಗಾರಿಕೆ ಕುಣಿಕೆ

ಗದಗ ಜಿಲ್ಲೆಯ ಕಪ್ಪತಗುಡ್ಡದಲ್ಲಿ ಗಣಿಗಾರಿಕೆಗೆ ಅನುಮತಿ ನೀಡುವ ಸಂಬಂಧ ಸರ್ಕಾರದ ಮಟ್ಟದಲ್ಲಿ ಕಳೆದ ವರ್ಷ ಚಿಂತನೆ ನಡೆದಿತ್ತು. ಪರಿಸರವಾದಿಗಳ ವಿರೋಧದಿಂದ ಅದು ತಣ್ಣಗಾಗಿತ್ತು. 'ಮತ್ತೆ ಚಿನ್ನದ ಗಣಿಗಾರಿಕೆ ಆತಂಕ' ಲೇಖನ (ಪ್ರ.ವಾ., ಜ. 26) ಓದಿದ ಮೇಲೆ ಈ ಕುರಿತ ಕಳವಳವು ಮತ್ತೊಮ್ಮೆ ಕಾಡುವಂತೆ ಕಾಣುತ್ತದೆ. ಗಣಿಗಾರಿಕೆಯು ರಾಜ್ಯದ ವರಮಾನದ ಪ್ರಮುಖ ಮೂಲವಲ್ಲ ಎಂಬ ಅಂಶವು ಕರ್ನಾಟಕ ರಾಜ್ಯ ಆರ್ಥಿಕ ಸಮೀಕ್ಷೆ–2022ರಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ. ಮೇಲಾಗಿ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಕಾರ ವಾಯು ಗುಣಮಟ್ಟ ಸೂಚ್ಯಂಕದಲ್ಲಿ ಗದಗ ಜಿಲ್ಲೆಯು ಇಡೀ ದೇಶದಲ್ಲಿ ಎರಡನೆಯ ಸ್ಥಾನದಲ್ಲಿದೆ. ಇದಕ್ಕೆ ಕಪ್ಪತಗುಡ್ಡ ಮತ್ತು ಅಲ್ಲಿನ ಔಷಧಿ ಗುಣವುಳ್ಳ ಸಸ್ಯಗಳ ಕೊಡುಗೆ ಗಣನೀಯ. ಈ ಕಪ್ಪತಗುಡ್ಡವು ಗದಗ ಜಿಲ್ಲೆಯಲ್ಲದೆ ಅದರ ಸುತ್ತಮುತ್ತಲಿನ ನಾಲ್ಕಾರು ಜಿಲ್ಲೆಗಳ ಪರಿಸರದ ಮೇಲೆ ಪ್ರಭಾವ ಬೀರುತ್ತದೆ. ಇಂತಹ ಪರಿಸರಸ್ನೇಹಿ ಪ್ರದೇಶದಲ್ಲಿ ಗಣಿಗಾರಿಕೆಗೆ ಅವಕಾಶ ನೀಡಬಾರದು ಎಂದು ಅರಣ್ಯಾಧಿಕಾರಿಗಳು ವರದಿ ನೀಡಿದ್ದರೂ ಸರ್ಕಾರವು ಮತ್ತೆ ಮತ್ತೆ ಒತ್ತಡಕ್ಕೆ ಸಿಲುಕಿ ಮರುಪರಿಶೀಲನೆ ನಡೆಸುವಂತೆ ಅರಣ್ಯಾಧಿಕಾರಿಗಳನ್ನು ಕೇಳುತ್ತಿರುವುದರ ಒಳಾರ್ಥವೇನು? ಗದಗ ಜಿಲ್ಲೆಯು ಮತ್ತೊಂದು ಬಳ್ಳಾರಿಯಾಗಬಾರದು ಎನ್ನುವುದಾದರೆ ಗದಗ ಜಿಲ್ಲೆಯ ಕಪ್ಪತಗುಡ್ಡದಲ್ಲಿ ಗಣಿಗಾರಿಕೆಗೆ ಅನುಮತಿ ನೀಡಬಾರದು.

ಟಿ.ಆರ್. ಚಂದ್ರಶೇಖರ, ಬೆಂಗಳೂರು

ಮತ್ತೊಮ್ಮೆ ಮೂಗಿಗೆ ತುಪ್ಪ?!

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಫೆಬ್ರುವರಿಯಲ್ಲಿ ತಮ್ಮ ಎರಡನೇ ಬಜೆಟ್ ಮಂಡನೆಗೆ ಸಿದ್ಧತೆ ನಡೆಸಿದ್ದಾರೆ. ಹಿಂದಿನ ಬಜೆಟ್‌ನಲ್ಲಿ ಘೋಷಣೆ ಮಾಡಿದ್ದ ರೈತ ಶಕ್ತಿ, ಅಸ್ಮಿತೆಯಂತಹ ಯೋಜನೆಗಳು ಜಾರಿಯಾಗಲೇ ಇಲ್ಲ. ಪತ್ರಿಕೆಗಳಲ್ಲಿ ವರದಿಯಾಗಿರುವಂತೆ, ನೂರಕ್ಕೂ ಹೆಚ್ಚು ಯೋಜನೆಗಳು ಅನುಷ್ಠಾನಗೊಂಡಿಲ್ಲ. ಮತ್ತೊಮ್ಮೆ ಜನರ ಮೂಗಿಗೆ ತುಪ್ಪ ಸವರುವ ರೀತಿಯಲ್ಲಿ ಚುನಾವಣಾ ಪ್ರಚಾರದ ಘೋಷಣೆಗಳು ಬರುವುದು ಗ್ಯಾರಂಟಿ.

ಈಡೇರಿಸಲಾಗದಿದ್ದರೆ ಅಂಥ ಯೋಜನೆಗಳನ್ನು ಬಜೆಟ್‌ನಲ್ಲಿ ಘೋಷಿಸುವುದಾದರೂ ಏಕೆ? ಮತ್ತೆ ಹೊಸ ಯೋಜನೆಗಳನ್ನು ಘೋಷಿಸುವಾಗ, ಈಡೇರದ ಯೋಜನೆಗಳ ನೆನಪು ಬಂದು ಮುಜುಗರವಾಗುವುದಿಲ್ಲವೇ? ಆತ್ಮಸಾಕ್ಷಿಗೆ ಪೆಟ್ಟು ಬೀಳುವುದಿಲ್ಲವೇ? ಕರ್ನಾಟಕದ ಜನರು ಏನಾದರೂ ಸಹಿಸಿಕೊಳ್ಳುತ್ತಾರೆ ಎಂಬ ಉದಾಸೀನವೇ?

ಮಲ್ಲತ್ತಹಳ್ಳಿ ಡಾ. ಎಚ್. ತುಕಾರಾಂ, ಬೆಂಗಳೂರು

ರಾಜಕಾರಣಿಗಳಿಗೆ ಬೇಕು ಶುದ್ಧೀಕರಣ!

ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, ಭ್ರಷ್ಟಾಚಾರದ ಕೂಪವಾದ ವಿಧಾನಸೌಧವನ್ನು ಗಂಜಲದಿಂದ ಶುದ್ಧೀಕರಣ ಮಾಡುವುದಾಗಿ ಹೇಳಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಮಾತಿಗೆ ಪ್ರತಿಕ್ರಿಯಿಸಿರುವ ಸಚಿವ ಡಾ. ಅಶ್ವತ್ಥನಾರಾಯಣ, 'ಭ್ರಷ್ಟಾಚಾರದ ಸಾಕಾರರೂಪವಾಗಿರುವ ಅವರೇ ಪ್ರತಿದಿನ ಗಂಗಾಜಲ, ಗೋಮೂತ್ರ ಬಳಸಿ ಸ್ನಾನ ಮಾಡಿ ಶುದ್ಧಿಯಾಗಲಿ' ಎಂದಿದ್ದಾರೆ (ಪ್ರ.ವಾ., ಜ. 26). ಇವರಿಬ್ಬರ ಕ್ರಿಯೆ ಮತ್ತು ಪ್ರತಿಕ್ರಿಯೆಯನ್ನು ಗಮನಿಸಿದರೆ, ಭ್ರಷ್ಟಾಚಾರದ ಕೂಪವೆನಿಸಿರುವ ವಿಧಾನಸೌಧಕ್ಕೂ ಅದರಲ್ಲಿ ರಾರಾಜಿಸುವ ರಾಜಕಾರಣಿಗಳಿಗೂ ಗೋಮೂತ್ರ ಸ್ನಾನದ ಅಗತ್ಯ ಇದ್ದಂತೆ ಕಾಣುತ್ತದೆ. ಆದ್ದರಿಂದ, ಕರ್ನಾಟಕದ ನಾಲ್ಕೂ ದಿಕ್ಕುಗಳಿಂದ ವಿಧಾನಸೌಧದ ಒಳಕ್ಕೆ ಗೋವುಗಳನ್ನು ತುಂಬಿಸಿ, ಭ್ರಷ್ಟಾಚಾರದ ಆಗರವಾಗಿರುವ ಸೌಧವನ್ನೂ ಜೊತೆಗೆ ರಾಜಕಾರಣಿಗಳನ್ನೂ ಗಂಜಲದಿಂದ ಶುದ್ಧೀಕರಣ ಮಾಡುವ ಕೆಲಸವನ್ನು ಮತದಾರರು ಮಾಡುವಂತಾಗಲಿ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಮನೆ ಮನೆ ಮೇಲೇಕೆ ಪಕ್ಷದ ಧ್ವಜ?

ಬಿಜೆಪಿಯು ಸುಮಾರು ಒಂದು ಲಕ್ಷ ಮನೆಗಳ ಮೇಲೆ ಪಕ್ಷದ ಧ್ವಜವನ್ನು ಹಾರಿಸಲು ಯೋಜಿಸಿದೆ ಎನ್ನಲಾಗಿದೆ. ಪ್ರಚಾರ ತಂತ್ರದ ದೃಷ್ಟಿಯಿಂದ ಇದೊಂದು ಪರಿಣಾಮಕಾರಿ ಕ್ರಮ ಎನ್ನಬಹುದು. ಆದರೆ ಒಬ್ಬ ವ್ಯಕ್ತಿಯ ಅಥವಾ ಒಂದು ಮನೆಯ ರಾಜಕೀಯ ನಿಲುವು ಮತ್ತು ಬದ್ಧತೆ ಮತದಾನದಷ್ಟೇ ಗೋಪ್ಯವಾಗಿ ಇರಬೇಕಾಗುತ್ತದೆ. ಈ ರೀತಿ ಮನೆಯ ಮೇಲೆ ಧ್ವಜ ಹಾರಿಸುವುದರಿಂದ ಈ ಗೋಪ್ಯತೆ ಬಹಿರಂಗವಾಗಿ, ಅದು ಅಕ್ಕಪಕ್ಕದಲ್ಲಿ ರಾಜಕೀಯ ದ್ವೇಷಕ್ಕೆ ಕಾರಣವಾಗುತ್ತದೆ. ಒಂದು ಪಕ್ಷ ಧ್ವಜ ಹಾರಿಸಿದರೆ, ಹುಚ್ಚು ಸ್ಪರ್ಧೆ ಉಂಟಾಗಿ ಇನ್ನೊಂದು ಪಕ್ಷವೂ ಈ ಹಾದಿ ಹಿಡಿಯುತ್ತದೆ. ಇದು ಮನೆ ಮನೆಯಲ್ಲಿ, ಹಳ್ಳಿ ಹಳ್ಳಿಯಲ್ಲಿ ಪರಸ್ಪರ ವೈಷಮ್ಯ ಉಂಟುಮಾಡುತ್ತದೆ.

ಎಂಬತ್ತರ ದಶಕದಲ್ಲಿ ರಾಮಕೃಷ್ಣ ಹೆಗಡೆ ಅವರು ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ ತಂದಾಗ, ಪಕ್ಷ ರಾಜಕೀಯವನ್ನು ಹಳ್ಳಿಹಳ್ಳಿಗೆ ಪರಿಚಯಿಸಿ, ಗ್ರಾಮಾಂತರ ಪ್ರದೇಶದಲ್ಲಿ ಶಾಂತಿಯನ್ನು ಕಲಕಬೇಡಿ ಎಂದು ಹಲವರು ಅದನ್ನು ವಿರೋಧಿಸಿದ್ದರು.

ರಮಾನಂದ ಶರ್ಮಾ, ಬೆಂಗಳೂರು

ನದಿ ನೀರು: ಆತಂಕ ಮೂಡಿಸುವ ಸಂಗತಿ

ರಾಜ್ಯದಲ್ಲಿ ನದಿಗಳ ನೀರು ಕುಡಿಯಲು ಯೋಗ್ಯವಲ್ಲ ಎಂಬ ವರದಿಯು (ಪ್ರ.ವಾ., ಜ. 26) ನಾಗರಿಕ ಸಮಾಜ ಆತಂಕಪಡುವ ಗಂಭೀರ ವಿಷಯ. ಜನರ ಜೀವನದ ಮೂಲ ನೀರು. ಬಹುತೇಕ ರೋಗಗಳ ಮೂಲ ಕೂಡ ನೀರು. ಆದಕಾರಣ ನೀರನ್ನು ಎಷ್ಟು ಶುದ್ಧವಾಗಿ ಇಟ್ಟುಕೊಳ್ಳುತ್ತೇವೋ ಅಷ್ಟು ಆರೋಗ್ಯದಿಂದ ಜೀವಸಂಕುಲ ಬದುಕಲು ಸಾಧ್ಯ. ಜಲಮೂಲಗಳು ಮಲಿನವಾಗದಂತೆ ನೋಡಿಕೊಳ್ಳುವ ಗುರುತರ ಹೊಣೆಗಾರಿಕೆ ಜನಸಮುದಾಯದ ಮೇಲೆ ಇದೆ. ಸರ್ಕಾರ ಕೂಡ ಈ ದಿಸೆಯಲ್ಲಿ ಬಿಗಿಯಾದ ಕ್ರಮಗಳನ್ನು ಕೈಗೊಳ್ಳಬೇಕು. ತ್ಯಾಜ್ಯಗಳು ಕೆರೆ–ಕುಂಟೆ, ನದಿಗಳಿಗೆ ಸೇರದಂತೆ ನೋಡಿಕೊಳ್ಳಬೇಕು. ಕೈಗಾರಿಕೆಗಳಿಂದ ಹೊರಬಿಡುವ ತ್ಯಾಜ್ಯ ನೀರನ್ನು ಕಡ್ಡಾಯವಾಗಿ ಸಂಸ್ಕರಿಸಬೇಕು. ಜವಾಬ್ದಾರಿಯುತ ನಾಗರಿಕರಾಗಿ ನಾವು ಸರ್ಕಾರವನ್ನು ಸದಾ ಎಚ್ಚರಿಸುತ್ತಲೇ ಇರಬೇಕಾದ ಅಗತ್ಯವನ್ನು ಈ ವರದಿ ಸೂಚಿಸುತ್ತದೆ.

ಶಂಕರ್ ಜಿ.ಎಸ್., ದೊಡ್ಡಸಿದ್ಧವ್ವನಹಳ್ಳಿ, ಚಿತ್ರದುರ್ಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಏರೊ ಇಂಡಿಯಾ–2023

ವೈಮಾನಿಕ ಪ್ರದರ್ಶನಕ್ಕೆ ಭರದ ಸಿದ್ಧತೆ

ಏರೊ ಇಂಡಿಯಾ ವೈಮಾನಿಕ ಪ್ರದರ್ಶನ ಇದೇ ಫೆಬ್ರುವರಿ 2ನೇ ವಾರದಲ್ಲಿ ಬೆಂಗಳೂರಿನಲ್ಲಿ ನಡೆಯಲಿದೆ. ದೇಶದಲ್ಲಿ ಈವರೆಗೆ ನಡೆದ ವೈಮಾನಿಕ ಪ್ರದರ್ಶನಗಳಲ್ಲೇ ಈ ಸಾಲಿನದ್ದು ಅತ್ಯಂತ ದೊಡ್ಡ ಪ್ರದರ್ಶನ ಎಂದು ರಕ್ಷಣಾ ಸಚಿವಾಲಯ ಹೇಳಿದೆ. ಕೋವಿಡ್ ತೀವ್ರವಾಗಿದ್ದ ಕಾಲದಲ್ಲಿ 2021ರಲ್ಲಿ ನಡೆದಿದ್ದ ಪ್ರದರ್ಶನಕ್ಕೆ ವಿದೇಶಿ ಕಂಪನಿಗಳ ಪ್ರತಿಕ್ರಿಯೆ ನೀರಸವಾಗಿತ್ತು. ಆದರೆ ಈ ಬಾರಿ ದೇಶೀಯ ಸಂಸ್ಥೆಗಳು, ವಿದೇಶಿ ಕಂಪನಿಗಳು ದೊಡ್ಡ ಸಂಖ್ಯೆಯಲ್ಲಿ ಪ್ರದರ್ಶನದಲ್ಲಿ ಭಾಗಿಯಾಗುತ್ತಿವೆ. ಈವರೆಗಿನ ಪ್ರದರ್ಶನಗಳಲ್ಲಿ ಭಾರತವು ವಿದೇಶಿ ವಿಮಾನಗಳು, ವಿದೇಶಿ ತಂತ್ರಜ್ಞಾನಗಳನ್ನು ಎದುರು ನೋಡುತ್ತಿತ್ತು. ಈ ಪ್ರದರ್ಶನದಲ್ಲಿ ಭಾರತವು ತನ್ನದೇ ಸಾಧನೆಗಳನ್ನು ಜಗತ್ತಿನೆದುರು ಇಡಲು ಸಿದ್ಧವಾಗಿದೆ

2023 AERO INDIA The Runway to a Billion Opportunities

ಪ್ರಜಾವಾಣಿ ವಾರ್ತೆ

ಬೆಂಗಳೂರಿನ ಯಲಹಂಕದಲ್ಲಿನ ವಾಯುನೆಲೆಯ ಆವರಣದಲ್ಲಿ ಇದೇ ಫೆಬ್ರುವರಿ 13–17ರವರೆಗೆ ಏರೊ ಇಂಡಿಯಾ–2023 ವೈಮಾನಿಕ ಪ್ರದರ್ಶನ ನಡೆಯಲಿದೆ. ಪ್ರದರ್ಶನದಲ್ಲಿ ಮಳಿಗೆ ಹಾಕಲು, ಮಳಿಗೆಗಳು ಮತ್ತು ವೈಮಾನಿಕ ಪ್ರದರ್ಶನ ವೀಕ್ಷಿಸಲು ಈಗಾಗಲೇ ಟಿಕೆಟ್ ನೀಡಲಾಗುತ್ತಿದೆ. 2019ರ ವೈಮಾನಿಕ ಪ್ರದರ್ಶನದ ವೇಳೆ ನಿಲುಗಡೆ ಪ್ರದೇಶದಲ್ಲಿದ್ದ 100ಕ್ಕೂ ಹೆಚ್ಚು ಕಾರುಗಳು ಬೆಂಕಿಗೆ ಆಹುತಿಯಾಗಿದ್ದವು. ಆ ಕಹಿ ನೆನಪನ್ನು ಮರೆಸಬೇಕಿದ್ದ 2021ರ ವೈಮಾನಿಕ ಪ್ರದರ್ಶಕ್ಕೆ ಕೋವಿಡ್ ಕಾರಣದಿಂದ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಆದರೆ, ಈ ಬಾರಿಯ ಪ್ರದರ್ಶನವು ದೊಡ್ಡ ಪ್ರಮಾಣದಲ್ಲಿ ನಡೆಯಲಿದೆ.

1996ರಲ್ಲಿ ಆರಂಭವಾದ ಈ ಪ್ರದರ್ಶನವನ್ನು ಪ್ರತಿ ಎರಡು ವರ್ಷಕ್ಕೊಮ್ಮೆ ಆಯೋಜಿಸುತ್ತಾ ಬರಲಾಗಿದೆ. 2023ರದ್ದು 14ನೇ ಪ್ರದರ್ಶನ. ಒಟ್ಟು 35,000 ಚದರ ಅಡಿ ಪ್ರದೇಶದಲ್ಲಿ ಈ ಬಾರಿಯ ಪ್ರದರ್ಶನ ನಡೆಯಲಿದೆ. 731 ಕಂಪನಿಗಳು ಮತ್ತು ಸಂಸ್ಥೆಗಳು ಈಗಾಗಲೇ ಪ್ರದರ್ಶನದಲ್ಲಿ ಭಾಗಿಯಾಗಲು ನೋಂದಣಿ ಮಾಡಿಕೊಂಡಿವೆ. ಇವುಗಳಲ್ಲಿ ಭಾರತದ 633 ಕಂಪನಿಗಳು ಮತ್ತು 98 ವಿದೇಶಿ ಕಂಪನಿಗಳು ಸೇರಿವೆ. ‘ಇದು ಕೇವಲ ವೈಮಾನಿಕ ಪ್ರದರ್ಶನವಲ್ಲ. ಬದಲಿಗೆ ರಕ್ಷಣಾ ಮತ್ತು ವೈಮಾನಿಕ ಕ್ಷೇತ್ರದಲ್ಲಿ ಭಾರತವು ಎಷ್ಟು ಬಲಿಷ್ಠವಾಗಿದೆ ಮತ್ತು ಸ್ವಾವಲಂಬಿಯಾಗಿದೆ ಎಂಬುದನ್ನು ತೋರಿಸುವ ವೇದಿಕೆ’ ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಹೇಳಿದ್ದಾರೆ.

ಭಾರತ ಸರ್ಕಾರದ ಅಧೀನ ಸಂಸ್ಥೆಗಳಾದ ಎಚ್‌ಎಎಲ್, ಬಿಇಎಲ್, ಡಿಆರ್‌ಡಿಒ ಅಧೀನದಲ್ಲಿರುವ ಹಲವು ಸಂಸ್ಥೆಗಳು ಈ ಪ್ರದರ್ಶನದ ಕೇಂದ್ರ ಬಿಂದುಗಳಾಗಿವೆ. ಈ ಮೂರೂ ಸಂಸ್ಥೆಗಳು ಜಂಟಿಯಾಗಿ ಅಭಿವೃದ್ಧಿಪಡಿಸಿರುವ ಉಪಕರಣಗಳು, ವೈಮಾನಿಕ ತಂತ್ರಜ್ಞಾನಗಳು ಈ ಪ್ರದರ್ಶನದಲ್ಲಿ ಇರಲಿವೆ. ಇವುಗಳ ಜತೆಯಲ್ಲಿ ಭಾರತದ ರಕ್ಷಣಾ ಮತ್ತು ವೈಮಾನಿಕ ಕ್ಷೇತ್ರದಲ್ಲಿ ಖಾಸಗಿ ಕ್ಷೇತ್ರದ ಭಾಗವಹಿಸುವಿಕೆಯ ಪ್ರಮಾಣ ಮತ್ತು ಸ್ವರೂಪ ಎಂಥದ್ದು ಎಂಬುದನ್ನು ತೋರಿಸಲು ಈ ಪ್ರದರ್ಶನವು ವೇದಿಕೆಯಾಗಲಿದೆ. ವಿದೇಶಿ ರಕ್ಷಣಾ ಕಾರ್ಯಕ್ರಮಗಳಲ್ಲಿ ಭಾರತದ ಕಂಪನಿಗಳು ಭಾಗಿಯಾಗುವ ಅವಕಾಶವನ್ನು ಈ ಪ್ರದರ್ಶನವು ನೀಡಲಿದೆ.

ಆಧಾರ: ಏರೊ ಇಂಡಿಯಾ–2023, ಪಿಐಬಿ, ಪಿಟಿಐ, ಡಿಆರ್‌ಡಿಒ

ವಿಸ್ತೃತ ಹಂದರದ ‘ಮೇಕ್ ಫಾರ್ ವರ್ಲ್ಡ್’: ರಾಜನಾಥ್ ವ್ಯಾಖ್ಯಾನ

‘ಮೇಕ್ ಇನ್ ಇಂಡಿಯಾ’ ಕಾರ್ಯಕ್ರಮ ಕೇವಲ ಸ್ವಾವಲಂಬನೆ ಸಾಧಿಸುವ ಧ್ಯೇಯ ಹೊಂದಿದೆ ಎಂದು ಸೀಮಿತ ಅರ್ಥ ಕಲ್ಪಿಸಬೇಕಿಲ್ಲ. ಮೇಕ್ ಇನ್ ಇಂಡಿಯಾ ಕಾರ್ಯಕ್ರಮವು ಪಾಲುದಾರಿಕೆಯನ್ನು ಒಳಗೊಂಡ ‘ಮೇಕ್ ಫಾರ್ ವರ್ಲ್ಡ್’ ಎಂಬ ಅರ್ಥದಲ್ಲಿ ವಿಸ್ತೃತ ಹಂದರದಲ್ಲಿ ಕೆಲಸ ಮಾಡುತ್ತದೆ ಎಂಬ ವ್ಯಾಖ್ಯಾನವನ್ನು ಮುಂದಿಟ್ಟಿದ್ದಾರೆ ರಕ್ಷಣಾ ಸಚಿವ ರಾಜನಾಥ್ ಸಿಂಗ್. ಏರೊ ಇಂಡಿಯಾ–2023 ಇದೇ ಸ್ವರೂಪದಲ್ಲಿ ನಡೆಯಲಿದೆ ಎಂದು ಅವರು ಹೇಳಿದ್ದಾರೆ.

ಏರೊ ಇಂಡಿಯಾ–2023ರ ಅಂಗವಾಗಿ, 80ಕ್ಕೂ ಹೆಚ್ಚು ದೇಶಗಳ ರಾಯಭಾರಿಗಳು ಹಾಗೂ ಹೈಕಮಿಷನರ್‌ಗಳ ಜೊತೆಗಿನ ದುಂಡುಮೇಜಿನ ಸಭೆಯಲ್ಲಿ ರಾಜನಾಥ್ ಅವರು, ರಕ್ಷಣಾ ಉತ್ಪಾದನಾ ಕ್ಷೇತ್ರದಲ್ಲಿ ವೇಗವಾಗಿ ಮುನ್ನುಗ್ಗುತ್ತಿರುವ ಭಾರತದ ಮುನ್ನೋಟವನ್ನು ಮುಂದಿಟ್ಟರು. ಕಳೆದ ಐದು ವರ್ಷಗಳಲ್ಲಿ ಭಾರತದ ರಕ್ಷಣಾ ಸಲಕರಣೆ ತಯಾರಿಕೆ ಉದ್ಯಮವು ಎಂಟು ಪಟ್ಟು ವೃದ್ಧಿಯಾಗಿದೆ. ಭಾರತದಲ್ಲಿ ತಯಾರಾದ ರಕ್ಷಣಾ ಸಾಮಗ್ರಿಗಳು 75ಕ್ಕೂ ಹೆಚ್ಚು ದೇಶಗಳಿಗೆ ರವಾನೆಯಾಗುತ್ತಿವೆ. ಭಾರತದ ಜೊತೆ ರಕ್ಷಣಾ ಬಾಂಧವ್ಯ ಹೊಂದಿರುವ ದೇಶಗಳ ಜೊತೆ ಕೇಂದ್ರ ಸರ್ಕಾರ ಮಾಡಿಕೊಂಡಿರುವ ಪಾಲುದಾರಿಕೆ ಒಪ್ಪಂದಗಳು ಹಾಗೂ ದೇಶದಲ್ಲಿ ಖಾಸಗಿಯವರನ್ನು ಒಳಗೊಂಡಂತೆ ರಕ್ಷಣಾ ಉದ್ಯಮದ ಬೆಳವಣಿಗೆಗೆ ಕಲ್ಪಿಸಿರುವ ಪೂರಕ ವಾತಾವರಣವೇ ಈ ಬೆಳವಣಿಗೆಗೆ ಕಾರಣ ಎಂಬುದು ಅವರ ಮಾತು.

ಶಸ್ತ್ರಾಸ್ತ್ರ ಹೊಂದುವ ವಿಚಾರದಲ್ಲಿ ವಿಶ್ವದಲ್ಲಿ ಕೆಲವೇ ದೇಶಗಳು ಬಲಿಷ್ಠ ಎಂದು ಪರಿಗಣಿಸುವುದರಲ್ಲಿ ಭಾರತಕ್ಕೆ ನಂಬಿಕೆಯಿಲ್ಲ. ಕೇವಲ ಒಂದು ದೇಶದ ಗ್ರಾಹಕನಾಗಿಯೇ ಉಳಿಯುವುದು ಅಥವಾ ಪೂರೈಕೆದಾರ ದೇಶವಾಗಿಯೇ ಗುರುತಿಸಿಕೊಳ್ಳುವುದರಲ್ಲಿ ಅರ್ಥವಿಲ್ಲ. ಪರಸ್ಪರ ಗೌರವ ಹಾಗೂ ಸೌರ್ವಭೌಮತೆಯಲ್ಲಿ ನಂಬಿಕೆ ಇರಿಸಿರುವ ಭಾರತವು, ರಕ್ಷಣಾ ಉದ್ಯಮದಲ್ಲಿ ಪಾಲುದಾರಿಕೆಯನ್ನು ಬಯಸುತ್ತದೆ ಎಂಬುದು ರಾಜನಾಥ್ ಅವರ ಪ್ರತಿಪಾದನೆ. ‘ಖರೀದಿದಾರ’ ಮತ್ತು ‘ಮಾರಾಟಗಾರ’ ಎಂಬ ಪರಿಕಲ್ಪನೆಗಳನ್ನು ‘ಸಹ–ಅಭಿವೃದ್ಧಿಪಡಿಸುವವ’ ಮತ್ತು ‘ಸಹ–ತಯಾರಕ’ ಎಂಬ ದೃಷ್ಟಿಕೋನದಲ್ಲಿ ನೋಡಲು ಭಾರತ ಬಯಸುತ್ತಿದೆ. ಇದನ್ನೇ ಮೇಕ್ ಫಾರ್ ವರ್ಲ್ಡ್ ಎಂಬುದಾಗಿ ಅವರು ಕರೆದಿದ್ದಾರೆ.

‘ನಾವು ಪ್ರಮುಖ ರಕ್ಷಣಾ ಸಾಮಗ್ರಿ ಖರೀದಿದಾರರು. ಹಾಗೆಯೇ ಮಹತ್ವದ ರಕ್ಷಣಾ ಉಪಕರಣಗಳ ರಫ್ತುದಾರರೂ ಆಗಿದ್ದೇವೆ. ಖರೀದಿಸುವಾಗ ಕೆಲವರು ಮಾತ್ರ ತಂತ್ರಜ್ಞಾನ ಹಂಚಿಕೊಳ್ಳುತ್ತಾರೆ ಹಾಗೂ ಭಾರತದಲ್ಲಿ ಘಟಕಗಳನ್ನು ತೆರೆದು ಸ್ಥಳೀಯ ತಯಾರಕರ ಜೊತೆಯಾಗಿ ಕೆಲಸ ಮಾಡಲು ಸಿದ್ಧರಿರುತ್ತಾರೆ. ಆದರೆ, ನಾವು ನಮ್ಮ ರಕ್ಷಣಾ ಸಲಕರಣೆಗಳನ್ನು ಮಾರಾಟ ಮಾಡುವಾಗ, ಆ ದೇಶಗಳಿಗೆ ಸಂಪೂರ್ಣ ರಕ್ಷಣಾ ಸಹಕಾರ ನೀಡುತ್ತೇವೆ. ರಕ್ಷಣಾ ತಂತ್ರಜ್ಞಾನ ಹಂಚಿಕೆ, ತರಬೇತಿ ನೀಡಿಕೆ ಹಾಗೂ ಜಂಟಿ ತಯಾರಿಕೆಗೆ ನಾವು ಮುಂದಾಗುತ್ತೇವೆ. ವಸುಧೈವ ಕುಟುಂಬಕಂ ಹಾಗೂ ಇಡೀ ಜಗತ್ತೇ ಒಂದು ಕುಟುಂಬ ಎಂಬ ಪರಿಕಲ್ಪನೆಗಳು ಭಾರತದ ನಿಲುವಿನಲ್ಲಿ ಅಡಕವಾಗಿವೆ’ ಎಂದು ಹೇಳಿದ್ದಾರೆ.

ಸವಾಲು ಎದುರಿಸಲು ಸನ್ನದ್ಧ: ಭಾರತದಲ್ಲಿ ಅಭಿವೃದ್ಧಿ ಪಥದಲ್ಲಿರುವ ರಕ್ಷಣಾ ಉದ್ಯಮದ ಸಾಮರ್ಥ್ಯಗಳನ್ನು ರಕ್ಷಣಾ ಸಚಿವರು ವಿವರಿಸಿದ್ದಾರೆ.

ಡ್ರೋನ್, ಸೈಬರ್ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ, ರೇಡಾರ್ ಮೊದಲಾದ ಕ್ಷೇತ್ರಗಳನ್ನೂ ಒಳಗೊಂಡ ತಯಾರಿಕೆ ಮತ್ತು ಅಭಿವೃದ್ಧಿ ಸಾಮರ್ಥ್ಯ ಹೆಚ್ಚಿಸಲು ಸರ್ಕಾರ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಹೆಚ್ಚುತ್ತಿರುವ ಬೇಡಿಕೆ ಸವಾಲುಗಳನ್ನು ಎದುರಿಸಲು ಭಾರತದ ರಕ್ಷಣಾ ತಯಾರಿಕೆ ವಲಯ ಸನ್ನದ್ಧವಾಗಿದೆ. ಸವಾಲುಗಳನ್ನು ಸ್ವೀಕರಿಸಿಯೇ, ಲಘು ಯುದ್ಧವಿಮಾನ ಹಾಗೂ ಲಘು ಬಹೂಪಯೋಗಿ ಹೆಲಿಕಾಪ್ಟರ್‌ಗಳನ್ನು ನಿರ್ಮಿಸಲಾಗಿದೆ ಎಂದು ರಾಜನಾಥ್ ಅವರು ನಿದರ್ಶನಗಳನ್ನು ಮುಂದಿಟ್ಟಿದ್ದಾರೆ. ದೇಶದಲ್ಲಿ ರಕ್ಷಣಾ ಸಾಮಗ್ರಿ ತಯಾರಿಕೆ ಹಾಗೂ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ (ಆರ್&ಡಿ) ವಲಯದಲ್ಲಿ ಇನ್ನಷ್ಟು ಹೂಡಿಕೆ ಮತ್ತು ಪಾಲುದಾರಿಕೆಗೆ ಮುಕ್ತ ಆಹ್ವಾನ ನೀಡಿದ್ದಾರೆ.

731	633	98
ಪ್ರದರ್ಶನದಲ್ಲಿ ಭಾಗಿಯಾಗಲಿರುವ ಸಂಸ್ಥೆಗಳು	ಪ್ರದರ್ಶನದಲ್ಲಿ ಭಾಗಿಯಾಗಲಿರುವ ದೇಶಿ ಸಂಸ್ಥೆಗಳು	ಪ್ರದರ್ಶನದಲ್ಲಿ ಭಾಗಿಯಾಗಲಿರುವ ವಿದೇಶಿ ಸಂಸ್ಥೆಗಳು


2019ರ ಏರೊ ಇಂಡಿಯಾ ಪ್ರದರ್ಶನದಲ್ಲಿ ರಫೇಲ್ ಯುದ್ಧವಿಮಾನ –ಪಿಟಿಐ ಚಿತ್ರ

ತಪಸ್‌ನತ್ತ ಎಲ್ಲರ ಚಿತ್ತ

ರಕ್ಷಣಾ ತಂತ್ರಜ್ಞಾನ ಮತ್ತು ಸಾಮಗ್ರಿಗಳಿಗಾಗಿ ಭಾರತವು ವಿದೇಶಗಳನ್ನೇ ಹೆಚ್ಚು ಅವಲಂಬಿಸಿದೆ. ಸೇನಾ ಕಾರ್ಯಾಚರಣೆಗಳಲ್ಲಿ ಮಹತ್ವದ ಪಾತ್ರ ವಹಿಸುವ ಡ್ರೋನ್‌ಗಳನ್ನು ಭಾರತದ ಸೇನಾಪಡೆಗಳ ಎಲ್ಲಾ ಚಟುವಟಿಕೆಗಳಲ್ಲಿ ನಿಯೋಜಿಸಲು ಸಾಧ್ಯವಾಗಿಲ್ಲ. ಇಂತಹ ನಿಯೋಜನೆಯ ಭಾಗವಾಗಿಯೇ ಭಾರತವು ಬಾಂಬರ್ ಡ್ರೋನ್‌ಗಳನ್ನು ವಿದೇಶಗಳಿಂದ ಖರೀದಿಸಲು ಆಸಕ್ತಿ ತೋರಿತ್ತು. ಇದರ ಭಾಗವಾಗಿ, ಅಮೆರಿಕದ ಬಾಂಬರ್ ಡ್ರೋನ್‌ಗಳನ್ನು ಖರೀದಿಸಲು ರೂಪಿಸಿದ ಕಾರ್ಯಕ್ರಮವು ನನೆಗುದಿಗೆ ಬಿದ್ದಿದೆ. ಆದರೆ, ಇದರ ಮಧ್ಯೆಯೇ ಭಾರತದ ಕಂಪನಿಗಳು ಸೇನಾ ಬಳಕೆಗಾಗಿ ಡ್ರೋನ್‌ಗಳನ್ನು ಅಭಿವೃದ್ಧಿಪಡಿಸಿವೆ. ಅಂತಹ ಡ್ರೋನ್‌ಗಳಲ್ಲಿ ತಪಸ್ ಸಹ ಒಂದು.


ತಪಸ್ ಡ್ರೋನ್


ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ), ಎಚ್‌ಎಎಲ್ ಮತ್ತು ಬಿಇಎಲ್ ಸಂಸ್ಥೆಗಳ ಸಹಕಾರದೊಂದಿಗೆ ಅಭಿವೃದ್ಧಿಪಡಿಸಲಾಗಿದ್ದ ರುಸ್ತುಂ–1 ಡ್ರೋನ್‌ನ ಪ್ಲಾಟ್‌ಫಾರಂ ಅನ್ನೇ ಬಳಸಿಕೊಂಡು ‘ತಪಸ್’ ಡ್ರೋನ್ ಅನ್ನು ಅಭಿವೃದ್ಧಿಪಡಿಸಲಾಗಿದೆ. ಹಲವು ಹಂತದ ಪರೀಕ್ಷೆ ಮತ್ತು ಪರೀಕ್ಷಾರ್ಥ ಕಾರ್ಯಾಚರಣೆಗಳನ್ನು ಯಶಸ್ವಿಯಾಗಿ ಪೂರೈಸಿರುವ ‘ತಪಸ್’, ಏರೊ ಇಂಡಿಯಾ–2023ರಲ್ಲಿ ಪ್ರದರ್ಶನವಾಗಲಿದೆ ಎಂದು ಮೂಲಗಳು ಹೇಳಿವೆ. ಭಾರತೀಯ ಸೇನಾಪಡೆಗಳ ಬಳಕೆಗೆ ಮಾತ್ರವಲ್ಲ, ಜತೆಗೆ ವಿದೇಶಿ ಸೇನೆಗಳಿಗೂ ಈ ಡ್ರೋನ್‌ಗಳನ್ನು ಪೂರೈಕೆ ಮಾಡಲು ಒತ್ತು ನೀಡುವ ಸಾಧ್ಯತೆ ಇದೆ. ಈ ಕಾರಣದಿಂದಲೂ ಈ ಪ್ರದರ್ಶನವು ಮಹತ್ವ ಪಡೆದಿದೆ.

1,800 ಕೆ.ಜಿ.ತೂಕದ ಈ ಡ್ರೋನ್‌ನ ಪರೀಕ್ಷಾರ್ಥ ಹಾರಾಟವನ್ನು ಕರ್ನಾಟಕದ ಚಿತ್ರದುರ್ಗದ ಚಳ್ಳಕೆರೆ ಬಳಿಯ ವೈಮಾನಿಕ ಪರೀಕ್ಷಾ ವಲಯದಲ್ಲಿ ನಡೆಸಲಾಗಿತ್ತು. ಸತತ 24 ಗಂಟೆ ಕಾರ್ಯಾಚರಣೆ ನಡೆಸುವ ಸಾಮರ್ಥ್ಯ ಇರುವ ಈ ಡ್ರೋನ್, ಗರಿಷ್ಠ 250 ಕಿ.ಮೀ. ದೂರದಷ್ಟು ಕಾರ್ಯಾಚರಣೆ ನಡೆಸಲು ಸಮರ್ಥವಾಗಿದೆ. ಮೂರು ಸ್ವರೂಪದ ಮಾನವರಹಿತ ಚಾಲನಾ ತಂತ್ರಜ್ಞಾನವನ್ನು ತಪಸ್ ಹೊಂದಿದೆ. ತಂತಿರಹಿತ ರಿಮೋಟ್‌ನಿಂದ ನಿಯಂತ್ರಿಸಬಹುದಾದ ತಂತ್ರಜ್ಞಾನವು ಇದರ ಪ್ರಾಥಮಿಕ ಕಾರ್ಯಾಚರಣಾ ವ್ಯವಸ್ಥೆಯಾಗಿದೆ. ಪೂರ್ವಸೂಚಿತ ಕಾರ್ಯಾಚರಣೆಗಳನ್ನು, ತುರ್ತು ಸಂದರ್ಭದಲ್ಲಿ ಸ್ವಯಂಚಾಲಿತವಾಗಿ ನಡೆಸುವ ಸವಲತ್ತೂ ಇದರಲ್ಲಿದೆ. ಜತೆಗೆ ನಿಯಂತ್ರಣ ಕೇಂದ್ರದಿಂದ ಸಂಪರ್ಕ ಕಡಿದುಕೊಂಡರೆ, ಸ್ವಯಂಚಾಲಿತವಾಗಿ ವಾಪಸಾಗುವ ಸಾಮರ್ಥ್ಯವೂ ಈ ಡ್ರೋನ್‌ಗೆ ಇದೆ.

ದೇಶದ ಗಡಿ ಪ್ರದೇಶಗಳಲ್ಲಿ ಗಸ್ತು ನಡೆಸಲು ಅನುಕೂಲವಾಗುವಂತೆ ಈ ಡ್ರೋನ್ ಅನ್ನು ರೂಪಿಸಲಾಗಿದೆ. ವಾಸ್ತವ ನಿಯಂತ್ರಣ ರೇಖೆ (ಎಲ್‌ಎಸಿ) ಮತ್ತು ಗಡಿ ನಿಯಂತ್ರಣಾ ರೇಖೆಯಲ್ಲಿ (ಎಲ್‌ಒಸಿ) ಸತತ ಕಣ್ಗಾವಲು ನಡೆಸಲು ಈ ಡ್ರೋನ್‌ನಿಂದ ಅನುಕೂಲವಾಗಲಿದೆ. ಅಲ್ಲದೆ ಈ ಡ್ರೋನ್ ಗರಿಷ್ಠ 350 ಕೆ.ಜಿ. ತೂಕವನ್ನು ಹೊರುವ ಸಾಮರ್ಥ್ಯ ಹೊಂದಿದ್ದು, ತುರ್ತು ಸಂದರ್ಭದಲ್ಲಿ ಸೇನಾ ಸಾಮಗ್ರಿಗಳನ್ನು ರವಾನಿಸಲೂ ಬಳಕೆಯಾಗಲಿದೆ.

ಸಿನಿ ಬಿಟ್ಸ್

ಭಯಾನಕ ‘ಸೈಂಧವ್’


ವಿಕ್ಟರಿ ವೆಂಕಟೇಶ್

ಸೈಂಧವನ ಮೊದಲ ನೋಟವೇ ಭಯಾನಕ. ವಿಕ್ಟರಿ ವೆಂಕಟೇಶ್ ಅವರ 75ನೇ ಚಿತ್ರ ‘ಸೈಂಧವ್’. ಶೈಲೇಶ್ ಕೊಲನು ನಿರ್ದೇಶನದಲ್ಲಿ ಈ ಚಿತ್ರ ಮೂಡಿ ಬರುತ್ತಿದೆ. ಚಿತ್ರದ ಫಸ್ಟ್‌ಲುಕ್ ಅನ್ನು ಸಾಮಾಜಿಕ ಜಾಲತಾಣಗಳಲ್ಲಿ ಬಿಡುಗಡೆ ಮಾಡಲಾಗಿದೆ. ವೆಂಕಟೇಶ್ ಅವರು ಈ ಚಿತ್ರದಲ್ಲಿ ಗಂಭೀರ ಮುಖಭಾವದಲ್ಲಿ ಕಾಣಿಸಿದ್ದಾರೆ.

ವಿಕ್ಟರಿ ವೆಂಕಟೇಶ್ ಸರಣಿ ಯಶಸ್ಸಿನಲ್ಲಿರುವ ನಟ. ಈ ಚಿತ್ರದಲ್ಲೂ ಭಿನ್ನವಾಗಿ ಕಾಣಿಸಿಕೊಳ್ಳುವ ಪ್ರಯತ್ನದಲ್ಲಿದ್ದಾರೆ ಎಂದಿದೆ ಚಿತ್ರತಂಡ. ಹಾಗಾಗಿ ಫಸ್ಟ್‌ಲುಕ್ ಪೋಸ್ಟರ್ ಸಾಕಷ್ಟು ಕುತೂಹಲ ಹುಟ್ಟಿಸಿದೆ. ವೆಂಕಟ್ ಬೋಯನಪಲ್ಲಿ ಅವರು ನಿಹಾರಿಕಾ ಎಂಟರ್ಟೈನ್‌ಮೆಂಟ್ ಬ್ಯಾನರ್ ಅಡಿ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ದೊಡ್ಡ ಮೊತ್ತದ ಬಂಡವಾಳವನ್ನೂ ಹೂಡಿದ್ದಾರೆ. ‘ಶ್ಯಾಮ್ ಸಿಂಗ್ ರಾಯ್’ ಈ ನಿರ್ಮಾಣ ಸಂಸ್ಥೆಯ ಯಶಸ್ವಿ ಸಿನಿಮಾ. ಈಗ ಇನ್ನೊಂದು ದೊಡ್ಡ ಬಜೆಟ್‌ನ ಸಿನಿಮಾವನ್ನು ತೆರೆಗೆ ತರಲು ಹೊರಟಿದೆ. ತಾರಾಗಣ, ತಂತ್ರಜ್ಞರು, ಸಂಗೀತ ಇತ್ಯಾದಿ ವಿವರಗಳನ್ನು ಶೀಘ್ರವೇ ಹಂಚಿಕೊಳ್ಳುತ್ತೇವೆ ಎಂದಿದೆ ಚಿತ್ರತಂಡ.

ಕನ್ನಡ, ತೆಲುಗು, ತಮಿಳು, ಹಿಂದಿ ಮತ್ತು ಮಲಯಾಳಂ ಭಾಷೆಗಳಲ್ಲಿ ಈ ಚಿತ್ರ ಮೂಡಿಬರಲಿದೆ.

‘ಸೂತ್ರಧಾರಿ’ಯ ಹಾಡು ಮೆಚ್ಚಿದ ಪ್ರೇಕ್ಷಕ

‘ಸೂತ್ರಧಾರಿ’ ಚಿತ್ರದ ಹಾಡು ಯುಟ್ಯೂಬ್‌ನಲ್ಲಿ ಭರ್ಜರಿ ಸದ್ದು ಮಾಡಿದೆ. ‘ಬಾ ಬೇಬಿ... ಡ್ಯಾಶ್...’ ಎಂಬ ಹಾಡನ್ನು ಕೋಟಿಗೂ ಮಿಕ್ಕಿ ವೀಕ್ಷಕರು ನೋಡಿ ಖುಷಿ ಪಟ್ಟಿದ್ದಾರೆ. ಇದಕ್ಕೆ ಮೋಹನ್ ಮಾಸ್ಟರ್ ಅವರ ನೃತ್ಯ ನಿರ್ದೇಶನವಿದೆ. ಜನರ ಮೆಚ್ಚುಗೆಗೆ ಖುಷಿಯಾದ ಚಿತ್ರತಂಡ ಇತ್ತೀಚೆಗೆ ಕೇಕ್ ಕತ್ತರಿಸಿ ಸಂಭ್ರಮಿಸಿದೆ.

ಈ ಹಾಡನ್ನು ಬರೆದು, ಸಂಗೀತ ಸಂಯೋಜಿಸಿ ನಾಯಕನಾಗಿಯೂ ನಟಿಸಿದ್ದಾರೆ ಚಂದನ್ ಶೆಟ್ಟಿ. ಚಂದನ್ ಅವರ ಜೊತೆ ಚೇತನ್ ಅವರೂ ಸಾಹಿತ್ಯ ಬರೆಯಲು ಕೈ ಜೋಡಿಸಿದ್ದಾರೆ. ‘ಈ ಗೀತೆಯಲ್ಲಿ ನಾನಿರುವುದು ಖುಷಿಯಾಗಿದೆ’ ಎನ್ನುತ್ತಾರೆ ನಟಿ ಸಂಜನಾ ಆನಂದ್.

'ಈ ಗೀತೆ ನಮ್ಮ ಚಿತ್ರಕ್ಕೆ ಆಮಂತ್ರಣವಾಗಿದೆ. ಹಾಡು ನೋಡಿದವರು ಇಡೀ ಸಿನಿಮಾವನ್ನು ನೋಡುವ ಹಾಗೆ ಮಾಡುವ ಜವಾಬ್ದಾರಿ ನನ್ನದು’ ಎನ್ನುವುದು ನಿರ್ದೇಶಕ ಕಿರಣ್ ಕುಮಾರ್ ಅವರ ವಿಶ್ವಾಸ. ನವರಸನ್ ಈ ಚಿತ್ರದ ನಿರ್ಮಾಪಕರು. ಈ ಚಿತ್ರದಲ್ಲಿ ಇನ್ನೂ ಮೂರು ಹಾಡುಗಳಿವೆಯಂತೆ. ಫೆಬ್ರುವರಿಯಲ್ಲಿ ಟ್ರೇಲರ್ ಬಿಡುಗಡೆ, ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ಚಿತ್ರ ಬಿಡುಗಡೆ ಮಾಡಲಿದ್ದೇವೆ ಎಂದರು ನವರಸನ್. ಅಪೂರ್ವಾ ಈ ಚಿತ್ರದ ನಾಯಕಿ. ನಟ ತಬಲಾನಾಣಿ, ಸೆಟ್ ವರ್ಕ್ ಮಾಡಿರುವ ಕಿರಣ್, ನಟಿ ಪಲ್ಲವಿ, ಛಾಯಾಗ್ರಾಹಕ ಪಿ.ಕೆ.ಎಚ್ ದಾಸ್, ಸಾಹಿತಿ ಕಿನ್ನಾಳ್ ರಾಜ್ ಚಿತ್ರತಂಡದಲ್ಲಿದ್ದಾರೆ. ಸಸ್ಪೆನ್ಸ್ ಥ್ರಿಲ್ಲರ್ ಕಥಾಹಂದರವನ್ನು ಈ ಚಿತ್ರ ಹೊಂದಿದೆ.


ಸಂಜನಾ ಆನಂದ್, ಚಂದನ್ ಶೆಟ್ಟಿ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

‘ಬ್ರಿಟನ್‌ನ ಬಿಬಿಸಿ ನಿರ್ಮಿಸಿರುವ ‘ಇಂಡಿಯಾ: ದಿ ಮೋದಿ ಕ್ವಶ್ಚನ್’ ಸಾಕ್ಷ್ಯಚಿತ್ರವು ಭಾರತದಲ್ಲಿ ವಿವಾದ ಸೃಷ್ಟಿಸಿದೆ. ಮೋದಿ ಅವರು ಗುಜರಾತ್ ಮುಖ್ಯಮಂತ್ರಿಯಾಗಿದ್ದಾಗ ನಡೆದ ಗೋಧ್ರೋತ್ತರ ಹತ್ಯಾಕಾಂಡದ ವಿಷಯವನ್ನು ಒಳಗೊಂಡಿರುವ ಈ ಸಾಕ್ಷ್ಯಚಿತ್ರವನ್ನು ಭಾರತ ನಿಷೇಧಿಸಿದೆ. ಸಾಕ್ಷ್ಯಚಿತ್ರ ನಿರ್ಮಾಪಕರ ಜೊತೆ ಕಾಂಗ್ರೆಸ್ ನಾಯಕ ರಾಹುಲ್ ಕಾಣಿಸಿಕೊಂಡಿದ್ದಾರೆ’ ಎಂಬ ವಿವರ ಇರುವ ಚಿತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಸಾಕ್ಷ್ಯಚಿತ್ರ ನಿರ್ಮಾಣದ ಹಿಂದೆ ರಾಹುಲ್ ಕೈವಾಡವಿದೆ ಎಂಬುದಾಗಿ ಚರ್ಚೆಯಾಗುತ್ತಿದೆ. ಆದರೆ ಇದು ಸುಳ್ಳು.



ಚಿತ್ರದಲ್ಲಿ ರಾಹುಲ್ ಗಾಂಧಿ ಹಾಗೂ ಉದ್ಯಮಿ ಸ್ಯಾಮ್ ಪಿತ್ರೊಡಾ ಜೊತೆ ಕಾಣಿಸಿಕೊಂಡಿರುವ ವ್ಯಕ್ತಿ ಬ್ರಿಟನ್‌ನ ಲೇಬರ್ ಪಾರ್ಟಿಯ ಮಾಜಿ ನಾಯಕ ಜೆರೆಮಿ ಕಾರ್ಬೈನ್. 2022ರ ಮೇನಲ್ಲಿ ಲಂಡನ್‌ನಲ್ಲಿ ಜೆರೆಮಿ ಅವರನ್ನು ರಾಹುಲ್ ಭೇಟಿಯಾಗಿದ್ದ ಚಿತ್ರವನ್ನೇ, ಬಿಬಿಸಿ ಸಾಕ್ಷ್ಯಚಿತ್ರ ನಿರ್ಮಾಪಕರ ಜತೆಗಿನ ಚಿತ್ರ ಎಂಬುದಾಗಿ ತಪ್ಪಾಗಿ ಅರ್ಥೈಸಲಾಗಿದೆ ಎಂದು ‘ಇಂಡಿಯಾಟುಡೇ’ ವರದಿ ಮಾಡಿದೆ. ರಿಚರ್ಡ್ ಕುಕ್ಸನ್ ಹಾಗೂ ಮೈಕ್ ರ‍್ಯಾಡ್‌ಫೋರ್ಡ್ ಅವರು ಬಿಬಿಸಿ ಸಾಕ್ಷ್ಯಚಿತ್ರ ನಿರ್ಮಿಸಿದ ಮಾಹಿತಿ ಬಿಬಿಸಿ ಅಧಿಕೃತ ತಾಣದಲ್ಲಿ ಇದೆ. ಜೆರೆಮಿ ಅವರಿಗೂ, ಬಿಬಿಸಿಗೂ ಯಾವುದೇ ನಂಟಿಲ್ಲ ಎಂದು ಇಂಡಿಯಾಟುಡೇ ವರದಿ ಮಾಡಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಜನವರಿ 27, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯನ ಶಿಶಿರ ಋತು ತಿಥಿ: ಮಾಘ ಶುಕ್ಲ ಷಷ್ಠಿ ಗಂ. 09-11 ನಕ್ಷತ್ರ: ರೇವತಿ ಗಂ. 18-37 ಯೋಗ: ಸಿದ್ಧ ಗಂ. 13-22, ಕರಣ: ತೈತಿಲ ಗಂ. 09-11, ಮಕರ ಮಾಸದ 13 ನೇ ದಿನ.
ರಾಹುಕಾಲ : ಬೆಳಿಗ್ಗೆ 10-30–12-00
ಸೂರ್ಯೋದಯ : 07-01 ಸೂರ್ಯಾಸ್ತ : 06-25
ಮುಸ್ಲಿಂ ದಿನಾಂಕ : 04 ರಜಬ್
ಅದೃಷ್ಟ ಸಂಖ್ಯೆ : 5, 11

ಮೇಷ: ಆರನೇ ಇಂದ್ರಿಯದ ಸಹಾಯ ಉಪಯುಕ್ತವಾಗಲಿದೆ. ವ್ಯಾಪಾರದಲ್ಲಿ ಅತೀವ ಆಸಕ್ತಿ ಮೂಡುತ್ತದೆ. ಅದರಿಂದ ಅಧಿಕ ಲಾಭಂಶ ಹೊಂದುವಿರಿ. ದೇಹಕ್ಕೆ ಆಯಾಸವಾದಲ್ಲಿ, ಸ್ವತಃ ಆರೈಕೆ ಮಾಡಿಕೊಳ್ಳುವುದು ಉತ್ತಮ.

ವೃಷಭ: ಮಗನ ವಿವಾಹದ ಸಿದ್ಧತೆಗಳು ಭರದಿಂದ ಸಾಗಲಿದೆ. ಸಹಚರರಲ್ಲಿ, ಸಹೋದ್ಯೋಗಿಗಳಲ್ಲಿನ ಮೃದು ಧೋರಣೆ ಸಿಬ್ಬಂದಿ ವರ್ಗಕ್ಕೆ ಆಶ್ಚರ್ಯ ಹಾಗೂ ಸಂತೋಷವೆನಿಸುವುದು.

ಮಿಥುನ: ಇಂದು ಲೇವಾದೇವಿ ವ್ಯವಹಾರ ನಡೆಸುವವರು ಯಾರಿಗೂ ಸಾಲ ಕೊಡದಿರಲು ನಿಶ್ಚಯಿಸುವುದು ಉತ್ತಮ. ರಾಜಕೀಯ ವ್ಯಕ್ತಿಗಳು, ಸಮಾಜ ಸೇವಕರು ಉತ್ತಮ ಹೆಸರಿನಿಂದ ಜನ ಮನ್ನಣೆ ಗಳಿಸಬಹುದು.

ಕರ್ಕಾಟಕ: ಆಶಾವಾದ ಮತ್ತು ಧನಾತ್ಮಕ ವರ್ತನೆಯ ಹೆಜ್ಜೆಗಳು ನಿಮ್ಮ ಸುತ್ತ-ಮುತ್ತಲಿನ ಜನರ ಕಣ್ಣನ್ನು ಕೆಂಪಾಗಿಸುತ್ತದೆ. ಕೋಪದ ಮೇಲೆ ನಿಯಂತ್ರಣವಿರಲಿ ಹಾಗೂ ವಾದ-ವಿವಾದಗಳಿಂದ ದೂರವಿರಿ.

ಸಿಂಹ: ರಾಜಕೀಯ ವೃತ್ತಿ ಸೇರುವ ಯೋಚನೆ ಬರುವುದು. ರಾಜಿಯಾಗುವ ಮನೋಭಾವ ಬೆಳಸಿಕೊಳ್ಳಿ. ಅದರಿಂದ ಹೊಸ ಕ್ಷೇತ್ರದಲ್ಲಿ ಏಳಿಗೆ ಪಡೆಯುವಿರಿ. ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಗಮನಹರಿಸಬೇಕು.

ಕನ್ಯಾ: ಹೋಟೆಲ್ ಅಥವಾ ಸಮಾರಂಭಗಳಲ್ಲಿ ಊಟ ಮಾಡುವಾಗ ಎಚ್ಚರದಿಂದಿರಿ. ಹೆಚ್ಚಾಗಿ ಈ ದಿನ ಮನೆಯೇ ಸೌಖ್ಯ. ಗಂಡನ ಹಣಕಾಸಿನ ಪರಿಸ್ಥಿತಿಗೆ ನೀವು ಸಹಕರಿಸಿದರೆ ಕುಟುಂಬದ ಗೌರವವನ್ನು ಕಾಪಾಡಬಹುದು.

ತುಲಾ: ಕುಟುಂಬದಲ್ಲಿದ್ದ ಭಿನ್ನಾಭಿಪ್ರಾಯವನ್ನು ಹೋಗಲಾಡಿಸಿ ಸಂಘಟಿಸಲು ಮನೆಯವರಲ್ಲಿ ಚರ್ಚೆ ಮಾಡಲು ಸುದಿನ. ನಿರೀಕ್ಷೆಗೆ ತಕ್ಕ ಪ್ರತಿಕ್ರಿಯೆಯಿಂದ ನೆಮ್ಮದಿ ಉಂಟಾಗುತ್ತದೆ. ಷೇರು ವ್ಯವಹಾರಗಳಲ್ಲಿ ಹಣ ತೊಡಗಿಸಬಹುದು.

ವೃಶ್ಚಿಕ: ಉನ್ನತ ಶ್ರೇಣಿಯ ಅಧಿಕಾರಿ ವರ್ಗದವರಿಗೆ ಸ್ಥಳ ಬದಲಾವಣೆ ಸಂಭವವಿದೆ. ಸಾಮಾಜಿಕ ಬದುಕಿನಲ್ಲಿ ಹೊಸ ಹುರುಪು ಕಾಣಲಿದ್ದೀರಿ. ವೃತ್ತಿಯಲ್ಲಿ ಉಂಟಾದ ಸಮಸ್ಯೆಗಳು ಸುಲಭವಾಗಿ ಪರಿಹಾರಗೊಳ್ಳುವುದು.

ಧನು: ಕೆಲಸಗಳು ಸರಾಗವಾಗಿ ನೆರವೇರುವುದು. ಗೃಹೋಪಯೋಗಿ ವಸ್ತುಗಳ ಮಾರಾಟಗಾರರು ಕ್ಷೇತ್ರವನ್ನು ಹೆಚ್ಚಿಸಿಕೊಳ್ಳಬಹುದು. ಮಕ್ಕಳ ಖರ್ಚುವೆಚ್ಚಗಳನ್ನು ಸರಿದೂಗಿಸುವಿರಿ. ಪರಿಸ್ಥಿತಿ ನಿಮಗೆ ಅನುಕೂಲಕರವಾಗಿದೆ.

ಮಕರ: ಆತಂಕ ಎದುರಾಗುವ ಸಾಧ್ಯತೆ ಇರುತ್ತದೆ. ಸೋಮಾರಿತನವನ್ನು ದೂರ ಮಾಡಿದರೆ, ಯೋಗ್ಯತೆಗೆ ಮೀರಿದ ಕೆಲಸಕಾರ್ಯಗಳಿಗೆ ಕೈಹಾಕಿದರೂ ಸಮಸ್ಯೆ ಆಗುವುದಿಲ್ಲ. ವೈಯಕ್ತಿಕ ವಿಚಾರಗಳತ್ತ ಗಮನ ಹರಿಸಿ.

ಕುಂಭ: ದಿನನಿತ್ಯದ ಹಣಕಾಸಿನ ಕೊರತೆ ಇರುವುದಿಲ್ಲ. ಸ್ಪಷ್ಟ ನಿರ್ಧಾರವನ್ನು ಮಾಡಿದ ವಿಚಾರವನ್ನು ಮತ್ತೊಮ್ಮೆ ಯೋಚಿಸಲು ಅವಕಾಶಗಳು ಒದಗಿ ಬರುತ್ತದೆ. ಪುನಃ ಪರಿಶೀಲಿಸಿ. ಕೃಷಿಗೆ ಸಂಬಂಧಿಸಿದ ಚಟುವಟಿಕೆ ಹೆಚ್ಚಲಿವೆ.

ಮೀನ: ವೃತ್ತಿರಂಗದಲ್ಲಿ ನೂತನ ಸ್ಥಾನಮಾನ ದೊರೆತು ಸಂತಸವಾಗುತ್ತದೆ. ಗೃಹೋಪಕರಣಗಳಮಾರಾಟಗಾರರಿಗೆ ಹೆಚ್ಚಿನ ಆದಾಯ ಲಭಿಸಲಿದೆ. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿನ ಹೆಚ್ಚಿನ ಆಸಕ್ತಿಯಿಂದ ಯಶಸ್ಸು ಪಡೆಯುವಿರಿ.

ಬೆರಗಿನ ಬೆಳಕು

ಗುರುರಾಜ ಕರಜಗಿ



ಆತ್ಮದರ್ಶನಿಯ ಲಕ್ಷಣ

ದ್ವೈತವೇನದ್ವೈತವೇನಾತ್ಮದರ್ಶನಿಗೆ ? |
ಶ್ರೌತಾದಿವಿಧಿಯೇನು ? ತಪನಿಯಮವೇನು ? ||
ನೀತಿ ಸರ್ವಾತ್ಮಮತಿಯದರಿನಮಿತ ಪ್ರೀತಿ |
ಭೀತಿಯಿಲ್ಲದನವನು – ಮಂಕುತಿಮ್ಮ || 809 ||

ಪದ-ಅರ್ಥ: ದ್ವೈತವೇನದ್ವೈತವೇನಾತ್ಮದರ್ಶನಿಗೆ = ದ್ವೈತವೇನು + ಅದ್ವೈತವೇನು + ಆತ್ಮದರ್ಶನಿಗೆ(ಆತ್ಮದರ್ಶನವಾದವನಿಗೆ), ಶ್ರೌತಾದಿವಿಧಿಯೇನು + ಶ್ರೌತಾದಿ(ಶ್ರುತಿಗಳ) + ವಿಧಿ + ಏನು, ಸರ್ವಾತ್ಮಮತಿಯದರಿನಮಿತ ಪ್ರೀತಿ = ಸರ್ವಾತ್ಮಮತಿ + ಅದರಿನ್(ಅದರಿಂದ) + ಅಮಿತ ಪ್ರೀತಿ, ಭೀತಿಯಿಲ್ಲದವನು = ಭೀತಿ + ಇಲ್ಲದನ್(ಇರದವನು) + ಅವನು

ವಾಚ್ಯಾರ್ಥ: ಆತ್ಮದರ್ಶನವಾದವನಿಗೆ ದ್ವೈತವೇನು, ಅದ್ವೈತವೇನು? ಅವನಿಗೆ ಶ್ರುತಿಗಳು ವಿಧಿಸಿರುವ ನಿಯಮಗಳು, ತಪಸ್ಸು ಬೇಕೇ? ನೀತಿ ಮತ್ತು ಎಲ್ಲರಲ್ಲೂ ಪರಸತ್ವದ ದರ್ಶನದಿಂದ ಮತ್ತು ಅದರಿಂದ ದೊರೆತ ಅಮಿತವಾದ ಪ್ರೀತಿಯಿಂದ ಆತ ಭಯರಹಿತನಾಗಿರುತ್ತಾನೆ.

ವಿವರಣೆ: ನಮ್ಮಲ್ಲಿ ವೇದಾಂತದ ಮತ ಪ್ರಭೇದಗಳಿವೆ. ಅವುಗಳಲ್ಲಿ ಎರಡರ ಬಗ್ಗೆ ಕಗ್ಗ ಹೇಳುತ್ತದೆ. ಒಂದು ದ್ವೈತ, ಮತ್ತೊಂದು ಅದ್ವೈತ. ಎರಡರಲ್ಲೂ ಅಡಕವಾಗಿರುವ ಸತ್ಕಾಮ ಪರಮಾರ್ಥದ್ದು. ನಾನು ಮತ್ತು ಪರಮಾತ್ಮ ಎಂಬುದುಬೇರೆ ಬೇರೆ. ಜೀವನೊಬ್ಬ ಭಕ್ತ. ಅವನು ಭಗವಂತನ ಸಮೀಪಕ್ಕೆ ಹೋಗಬಹುದೇ ವಿನ: ಅವನೇ ಭಗವಂತನಾಗಲಾರ.ಇದು ದ್ವೈತ. ಅದ್ವೈತದಲ್ಲಿ ತಾನು ಬೇರೆ, ಪರಮಾತ್ಮ ಬೇರೆ ಎಂಬ ಭೇದ ಅಳಿಸಿಹೋಗುತ್ತದೆ. ತಾನೇ ಭಗವಂತನ ಅಂಶ,‘ಅಹಂ ಬ್ರಹ್ಮಾಸ್ಮಿ’ ಎಂಬುದು ಅದ್ವೈತದ ತಾತ್ಪರ್ಯ. ವೇದ ಶಾಸ್ತ್ರಗಳು ಎರಡಕ್ಕೂ ಪ್ರಮಾಣ. ಎರಡರ ಉದ್ದೇಶವೂ ಆತ್ಮದರ್ಶನ. ಎರಡು ದಾರಿಗಳು. ಗುರಿ ಒಂದೇ. ಒಬ್ಬ ಜಿಜ್ಞಾಸು ನದಿಯ ಪ್ರವಾಹದಲ್ಲಿ ಬಿದ್ದ ಎಂದಿಟ್ಟುಕೊಳ್ಳೋಣ. ಅವನು ಉಸಿರುಕಟ್ಟಿಕೊಂಡು ಒದ್ದಾಡುತ್ತ, ಕೊಚ್ಚಿಹೋಗುತ್ತಿದ್ದಾನೆ. ದಂಡೆಯಲ್ಲಿದ್ದ ಕೆಲವು ಸಜ್ಜನರು ಅವನನ್ನು ಪಾರುಮಾಡಬೇಕೆಂಬ ಕನಿಕರದಿಂದ ಹಗ್ಗಗಳನ್ನು ಎಸೆಯುತ್ತಾರೆ. ಅವನು ಯಾವುದನ್ನಾದರೂ ಗಟ್ಟಿಯಾಗಿಹಿಡಿದುಕೊಂಡರೆ ಅವರು ಎಳೆದು ದಂಡೆಗೆ ತಂದು ಬದುಕಿಸಿಯಾರು. ಆದರೆ ಅವನು ಎರಡು ಹಗ್ಗಗಳಿವೆಯಲ್ಲ?ಯಾವುದನ್ನು ಹಿಡಿದರೆ ಹೆಚ್ಚು ಕ್ಷೇಮ? ಹಗ್ಗದ ತುದಿಯನ್ನು ಹಿಡಿಯಬೇಕೆ? ಜಾರಿಹೋದರೇನು ಗತಿ? ಮಧ್ಯದ ಭಾಗವನ್ನು ಹಿಡಿಯಲೆ? ಒಂದೇ ಕೈಸಾಕೇ? ಎರಡರಿಂದಲೂ ಹಿಡಿಯಲೆ? ಹೀಗೆ ವಿಚಾರಮಾಡುತ್ತ ತಡಮಾಡಿದರೆ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುತ್ತಾನೆ. ಅಂತೆಯೇ ಆತ್ಮದರ್ಶನದ ಅಪೇಕ್ಷೆಯುಳ್ಳವನು ತನಗೆ ಯಾವ ಅನುಭವವು ಸತ್ಯವೆಂದು ತೋರುತ್ತದೋ ಅದನ್ನು ಗಟ್ಟಿಯಾಗಿ ಹಿಡಿದುಕೊಂಡು ಮುಂದೆ ಸಾಗಬೇಕು. ಅದಕ್ಕೇ ಕೃಷ್ಣ ಭಗವದ್ಗೀತೆಯಲ್ಲಿ “ವಿಮೃಶ್ಯೈತಶೇಷೇಣ ಯಥೇಚ್ಛಸಿ ತಥಾ ಕುರು” ಎನ್ನುತ್ತಾನೆ. ಹಾಗೆಂದರೆ ಯಾವುದು ನಿನ್ನ ಮನಸ್ಸಿಗೆ ಸರಿ ಎನ್ನಿಸುತ್ತದೋ ಅದನ್ನು ವಿಮರ್ಶೆಮಾಡಿ, ನಿನಗೆ ಸರಿ ತೋರಿದಂತೆ ಮಾಡು.


ಆತ್ಮದರ್ಶನವಾದ ಮೇಲೆ ಯಾವ ದಾರಿಯೇನು? ಗಮ್ಯವನ್ನು ಸೇರಿದ್ದಾಯಿತಲ್ಲ! ಅವನಿಗೆ ಆಗ ಶಾಸ್ತ್ರಗಳು ಹೇಳಿದ ವಿಧಿಗಳು, ತಪ ನಿಯಮಗಳು ಬೇಕಿಲ್ಲ. ಯಾಕೆಂದರೆ ಅವೆಲ್ಲ ಗಮ್ಯವನ್ನು ತಲುಪಲು ಬೇಕಾದ ದಿಕ್ಕುಸೂಚಿಗಳು. ಆತ್ಮದರ್ಶನಿಗೆ ಎಲ್ಲೆಲ್ಲಿಯೂ ಬ್ರಹ್ಮಸಾಕ್ಷಾತ್ಕಾರವೇ ಆಗಿರುವುದರಿಂದ ಎಲ್ಲದರ ಬಗ್ಗೆ ಪ್ರೀತಿ ಮತ್ತು ಯಾವುದರ ಬಗ್ಗೆಯೂ ಭಯವಿಲ್ಲ. ಅವನು ಎಲ್ಲ ಮಜಲುಗಳನ್ನು ದಾಟಿದವನು. ಅವನಿಗೆ ಪ್ರಪಂಚದ ಯಾವುದರ ಬಗ್ಗೆಯೂ ಭಯವಿಲ್ಲ ಮತ್ತು ಅವನಿಂದ ಪ್ರಪಂಚಕ್ಕೆ ಯಾವ ತೊಂದರೆಯಿಲ್ಲ.

ಪದಬಂಧ 5212

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2. ಹಾಡಿನ ಧಾಟಿ (2)
3. ಅಭಿನಯಕಾರನಾಗಿರುವ ಶಿವ (4)
5. ಮಣಿ ಧರಿಸಿರುವ ಚಲುವೆ (3)
6. ಲೋಪದೋಷಗಳನ್ನು ಸರಿಪಡಿಸುವವನು (4)
8. ಕೊನೆಗೆ ಮಗ ತಿರುಗಿದ್ದಾಗ ಸೇರುವಿಕೆ (4)
12. ಹೀಗೆ ಕಣ್ಮರೆಯಾಗುವುದು (4)
14. ಎಲ್ಲಾ ಬಗೆಯ ಅಭಿಮಾನವನ್ನು ತಳ್ಳಿಹಾಕಿದವನು (4)
15. ಧಾನ್ಯ ಸಂಗ್ರಹಿಸುವ ಸ್ಥಳವಿದು (3)
16. ಬುಡದಿಂದ ವ್ಯಕ್ತಗೊಂಡಿರುವ ಕಳವಳ (4)
17. ಸಂಸಾರ ಬಂಧನಕ್ಕೆ ಒಳಗಾದವನು (2)

ಮೇಲಿಂದ ಕೆಳಕ್ಕೆ
1. ಊರ ಮೆರವಣಿಗೆ ನೋಡುವಾಗ ಈ ಉಪದ್ರವ! (5)
2. ರಾಜ ಪತ್ನಿಯ ಆಲಯ (4)
3. ಅದೇ ತಾನೆ ಬಿರಿದಿರುವ ಹೂ (4)
4. ಬದುಕು ಈ ಬಂಡಿಯ ಹಾಗಂತೆ! (3)
7. ಬೆರಳಚ್ಚುವಿನಲ್ಲಿರುವ ಮೊಂಡುತನ ಗೊತ್ತಾಯಿತೇ? (2)
9. ಸುಲಭವಾಗಿ ತಲೆಗೆ ಹತ್ತದ ಲೆಕ್ಕಶಾಸ್ತ್ರ (3)
10. ಯಾವುದೇ ಉಪಯೋಗಕ್ಕೆ ಬಾರದವ (5)
11. ದಿವಸದ ಎಂಟನೆ ಒಂದು ಭಾಗದಷ್ಟು ಕಾಲ (2)
12. ನಡುವಣ ಪ್ರದೇಶ (4)
13. ಹೊಸ ಶೈಲಿಯ ಬರಹಗಾರ (4)
14. ಹಿತವಲ್ಲದ್ದು ಇದು (3)



5211 ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ನವೋನವ 3.ತಲೆಹೋಕ
5.ಕಲಗಚ್ಚು 7.ಪಡಪೋಶಿ
9.ಹುಂಚ 10.ಡಿಕ್ರಿ
11.ಮಲುನುಡಿ 14.ಕವಾಡಿಗ
17.ಗಟ್ಟಿಮುಟ್ಟು 18.ಮನಸ್ಸಾಕ್ಷಿ

ಮೇಲಿಂದ ಕೆಳಕ್ಕೆ:
1.ನತಕ 2.ನಹಗ
3.ತಡಬಡ 4.ಕಲ್ಲೋಲ
6.ಲವಾಜಮೆ 7.ಪಗಡಿ
8.ಸಿಡಿಮಿಡಿ 12.ನುಡಿಗಟ್ಟು
13.ಉರಗ 15.ವಾಮನ
16.ಗವಾಕ್ಷಿ

ಸುಡೊಕು 5598

					7		1	
8		7	6		4	2		9
	2		3				5	
2	4			1		9		
						6	7	
7	5			9		3	4	
	8							3
			4		8	5		
9		4			2		6	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5597 ಸುಡೊಕು

7	1	4	2	5	6	8	9	3
3	2	8	1	4	9	6	7	5
6	9	5	7	3	8	4	1	2
2	8	3	6	7	4	1	5	9
9	7	1	5	8	3	2	4	6
4	5	6	9	1	2	3	8	7
8	4	9	3	6	7	5	2	1
5	6	2	4	9	1	7	3	8
1	3	7	8	2	5	9	6	4



ಅಮೆರಿಕದಲ್ಲಿನ ದೈತ್ಯ ಐ.ಟಿ. ಕಂಪನಿಗಳು ಭಾರತೀಯರನ್ನೂ ಒಳಗೊಂಡಂತೆ ಸಿಬ್ಬಂದಿ ಕಡಿತಕ್ಕೆ ಮುಂದಾಗಿವೆ. ಇದರಿಂದ ಅಲ್ಲಿ ಕೆಲಸ ಗಿಟ್ಟಿಸಬೇಕೆಂದುಕೊಂಡವರ ಕನಸಿಗೆ ಪೆಟ್ಟು ಬಿದ್ದಿದೆಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಜಮ್ಮು– ಶ್ರೀನಗರ ಹೆದ್ದಾರಿ: ಸಂಚಾರ ಪುನರಾರಂಭ

ಶ್ರೀನಗರ (ಪಿಟಿಐ): ಪಂಥಿಯಲ್ ಬಳಿ ಜಮ್ಮು– ಶ್ರೀನಗರ ರಾಷ್ಟ್ರೀಯ ಹೆದ್ದಾರಿಯಲ್ಲಿ ಭೂಕುಸಿತ ಮತ್ತು ಬೃಹತ್ ಗಾತ್ರದ ಕಲ್ಲುಗಳು ಉರುಳಿದ್ದ ಪರಿಣಾಮ 24 ಗಂಟೆಗಳಿಗಿಂತ ಹೆಚ್ಚು ಕಾಲ ಸಂಚಾರ ಸ್ಥಗಿತಗೊಂಡಿತ್ತು. ಗುರುವಾರ ಬೆಳಿಗ್ಗೆ ಹೆದ್ದಾರಿಯನ್ನು ತೆರವುಗೊಳಿಸಲಾಗಿದ್ದು ಸಂಚಾರಕ್ಕೆ ಮುಕ್ತವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಹೆದ್ದಾರಿಯ ಎರಡೂ ಕಡೆ ವಾಹನ ದಟ್ಟಣೆಯನ್ನು ನಿವಾರಿಸಲಾಗಿದೆ' ಎಂದು ಸಂಚಾರ ನಿಯಂತ್ರಣ ವಿಭಾಗದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಮೇಯರ್ ಆಯ್ಕೆ: ಎಎಪಿಯಿಂದ 'ಸುಪ್ರೀಂ'ಗೆ ಅರ್ಜಿ

ನವದೆಹಲಿ (ಪಿಟಿಐ): ದೆಹಲಿ ಮೇಯರ್ ಸ್ಥಾನಕ್ಕೆ ಚುನಾವಣೆಯನ್ನು ಕಾಲಮಿತಿಯಲ್ಲಿ ನಡೆಸುವಂತೆ ಕೋರಿ ಎಎಪಿ ಮೇಯರ್ ಅಭ್ಯರ್ಥಿ ಶೆಲ್ಲಿ ಒಬೆರಾಯ್ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಮೇಯರ್ ಮತ್ತು ಉಪಮೇಯರ್ ಆಯ್ಕೆ ಮಾಡಲು ಮಂಗಳವಾರ ದೆಹಲಿ ಮಹಾನಗರ ಪಾಲಿಕೆಯಲ್ಲಿ(ಎಂಸಿಡಿ) ಎರಡನೇ ಬಾರಿಗೆ ಸಭೆ ಕರೆಯಲಾಗಿತ್ತು. ಆ ಸಭೆಯಲ್ಲೂ ಗದ್ದಲ ಉಂಟಾದ ಕಾರಣ ದೆಹಲಿ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರು ಮೇಯರ್ ಚುನಾವಣೆಯನ್ನು ಅನಿರ್ದಿಷ್ಟಾವಧಿಗೆ ಮುಂದೂಡಿದ್ದರು.

ಒಬೆರಾಯ್ ಅವರು ಸಲ್ಲಿಸಿರುವ ಅರ್ಜಿಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ಕೈಗೆತ್ತಿಕೊಳ್ಳುವ ಸಾಧ್ಯತೆ ಇದೆ ಎಂದು ಎಎಪಿ ನಾಯಕರು ತಿಳಿಸಿದ್ದಾರೆ.

ಬಿಬಿಸಿಯ 'ಇಂಡಿಯಾ: ದಿ ಮೋದಿ ಕ್ವೆಶ್ಚನ್' ಸಾಕ್ಷ್ಯಚಿತ್ರ ತಡೆಗೆ ಅಮೆರಿಕ ಪ್ರತಿಕ್ರಿಯೆ

'ಮಾಧ್ಯಮ ಸ್ವಾತಂತ್ರ್ಯ ಬೆಂಬಲಿಸುತ್ತೇವೆ'

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತವೂ ಸೇರಿದಂತೆ ವಿಶ್ವದ ಎಲ್ಲೆಡೆ ಮಾಧ್ಯಮ ಸ್ವಾತಂತ್ರ್ಯಕ್ಕೆ ಮಹತ್ವ ನೀಡುವುದನ್ನು ನಾವು ಬೆಂಬಲಿಸುತ್ತೇವೆ ಎಂದು ಅಮೆರಿಕ ಹೇಳಿದೆ. 2002ರ ಗೋಧ್ರಾ ಮತ್ತು ಗೋಧ್ರೋತ್ತರ ಹತ್ಯಾಕಾಂಡಗಳ ಕುರಿತು ಬಿಬಿಸಿ ನಿರ್ಮಿಸಿರುವ ಸಾಕ್ಷ್ಯಚಿತ್ರದ ಲಿಂಕ್‌ಗಳನ್ನು ಯೂಟ್ಯೂಬ್ ಮತ್ತು ಟ್ವಿಟರ್‌ನಿಂದ ತೆಗೆದುಹಾಕುವಂತೆ ಭಾರತ ಸರ್ಕಾರವು ಕೈಗೊಂಡ ಕ್ರಮದ ಬಗ್ಗೆ ಅಮೆರಿಕದ ವಿದೇಶಾಂಗ ಸಚಿವಾಲಯ ಈ ಪ್ರತಿಕ್ರಿಯೆ ನೀಡಿದೆ.

ಪ್ರಜಾಪ್ರಭುತ್ವದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಮಾನವ ಹಕ್ಕುಗಳು ಮುಖ್ಯ ಎಂಬುದನ್ನು ಭಾರತಕ್ಕೆ ಈ ಹಿಂದೆಯೇ ಮನವರಿಕೆ ಮಾಡಿಕೊಡಲಾಗಿತ್ತು ಎಂದು ಅಮೆರಿಕದ ವಿದೇಶಾಂಗ ಸಚಿವಾಲಯದ ವಕ್ತಾರ ನೆಡ್ ಪ್ರೈಸ್ ಹೇಳಿದ್ದಾರೆ. ವಾಷಿಂಗ್ಟನ್‌ನಲ್ಲಿ ಬುಧವಾರ ನಡೆದ ದೈನಂದಿನ ಮಾಧ್ಯಮಗೋಷ್ಠಿಯ ವೇಳೆ ಪಾಕಿಸ್ತಾನದ ಪತ್ರಕರ್ತರೊಬ್ಬರು ಕೇಳಿದ ಪ್ರಶ್ನೆಗೆ ನೆಡ್ ಈ ರೀತಿ ಉತ್ತರಿಸಿದ್ದಾರೆ.

'ಅಭಿವ್ಯಕ್ತಿ ಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯ, ಮತ್ತು ಮಾನವ ಹಕ್ಕುಗಳು ಪ್ರಜಾಪ್ರಭುತ್ವವನ್ನು ಬಲಪಡಿಸುತ್ತವೆ. ಇಂತಹ ಪ್ರಜಾತಾಂತ್ರಿಕ ನೀತಿಗಳಿಗೆ ಆದ್ಯತೆ ನೀಡಬೇಕು ಎಂಬುದನ್ನು ನಾವು ಒತ್ತಿ ಹೇಳುತ್ತೇವೆ. ವಿಶ್ವದ ಬೇರೆಲ್ಲ ದೇಶಗಳ ಜತೆಗಿನ ಸಂಬಂಧದ ವೇಳೆ ನಾವು ಇದನ್ನು ಒತ್ತಿ ಹೇಳುತ್ತೇವೆ. ಭಾರತದೊಂದಿಗೂ ನಾವು ಇದನ್ನೇ ಮಾಡಿದ್ದೇವೆ' ಎಂದಿದ್ದಾರೆ.

ಈ ವಿಚಾರಗಳಿಗೆ ಸಂಬಂಧಿಸಿದಂತೆ ಅಮೆರಿಕವು ಈ ಹಿಂದೆ ನೀಡಿದ್ದ ಹೇಳಿಕೆಗಳ ಬಗ್ಗೆ ಅವರು ಮಾತನಾಡಿದ್ದಾರೆ ಎಂದು ವಿಶ್ಲೇಷಿಸಲಾಗಿದೆ. 'ಭಾರತದಲ್ಲಿ ಸರ್ಕಾರಗಳು, ಪೊಲೀಸರು ಮತ್ತು ಜೈಲು ಅಧಿಕಾರಿಗಳಿಂದಾದ ಮಾನವ ಹಕ್ಕುಗಳ ಉಲ್ಲಂಘನೆ ಯಂತಹ ಕಳವಳಕಾರಿ ಬೆಳವಣಿಗೆಗಳನ್ನು ನಾವು ಗಮನಿಸಿದ್ದೇವೆ' ಎಂದು 2022ರ ಏಪ್ರಿಲ್ 12ರಂದು ಅಮೆರಿಕದ ರಕ್ಷಣಾ ಕಾರ್ಯದರ್ಶಿ ಆಂಟನಿ ಬ್ಲಿಂಕನ್ ಹೇಳಿದ್ದರು. ಅಮೆರಿಕದ ವಿದೇಶಾಂಗ ಸಚಿವಾಲಯದ 'ಅಂತರರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ವರದಿ-2021' ಬಿಡುಗಡೆ ಸಂದರ್ಭದಲ್ಲೂ ಅವರು ಇದೇ ಮಾತು ಹೇಳಿದ್ದರು.



ಸಾಕ್ಷ್ಯಚಿತ್ರದ ಪೋಸ್ಟರ್

'ಇದು ಭಾರತದ ವಿರುದ್ಧದ ಷಡ್ಯಂತ್ರ, ಪ್ರಧಾನಿ ಮೋದಿ ಅವರ ಚಾರಿತ್ರ್ಯವಧೆಯು ಭಾರತಕ್ಕೆ ಮಾಡಿದ ಅಪಮಾನ. ಬಿಬಿಸಿ ವರ್ತನೆ ಸರಿಯಲ್ಲ'
ಪಿ.ಎಸ್. ಶ್ರೀಧರನ್ ಪಿಳ್ಳೈ, ಗೋವಾ ರಾಜ್ಯಪಾಲ

ಸಾಕ್ಷ್ಯಚಿತ್ರ ಪ್ರದರ್ಶಿಸಿದ ಕೇರಳ ಕಾಂಗ್ರೆಸ್

ತಿರುವನಂತಪುರ: ಬಿಬಿಸಿ ನಿರ್ಮಿತ ಸಾಕ್ಷ್ಯಚಿತ್ರವನ್ನು ಕಾಂಗ್ರೆಸ್ ಇಲ್ಲಿನ ಪ್ರಸಿದ್ಧ ಪ್ರವಾಸಿತಾಣ ಶಂಖುಮುಖಮ್ ಕಡಲತೀರದಲ್ಲಿ ಗುರುವಾರ ಸಂಜೆ ಪ್ರದರ್ಶಿಸಿತು. ಪ್ರವಾಸಕ್ಕೆ ಬಂದಿದ್ದ ಸಾಕಷ್ಟು ಸಂಖ್ಯೆಯ ಜನರು ಸಾಕ್ಷ್ಯಚಿತ್ರ ವೀಕ್ಷಿಸಿದರು. ಪೊಲೀಸರು ಭದ್ರತೆ ಒದಗಿಸಿದ್ದರು.

ಚಿತ್ರ ಪ್ರದರ್ಶನ ವಿರೋಧಿಸಿ ಪ್ರತಿಭಟನೆ ನಡೆಸಲು ಬಿಜೆಪಿ ಯುವಮೋರ್ಚಾ ಕಾರ್ಯಕರ್ತರು ಮುಂದಾಗಿದ್ದರು. ಆದರೆ, ಭಾರಿ ಪ್ರಮಾಣದಲ್ಲಿ ಜನರು ಸೇರಿದ್ದರಿಂದ, ಅವರು ತಮ್ಮ ನಿರ್ಧಾರದಿಂದ ಹಿಂದೆ ಸರಿದರು ಎಂದು ಕಾಂಗ್ರೆಸ್ ಮುಖಂಡರೊಬ್ಬರು ಹೇಳಿದ್ದಾರೆ. ಸಾಕ್ಷ್ಯಚಿತ್ರ ಹೆಚ್ಚು ಜನರನ್ನು ತಲುಪಬೇಕು ಎಂಬ ಉದ್ದೇಶದಿಂದ ಕಡಲತೀರದಲ್ಲಿ ಪ್ರದರ್ಶನ ಆಯೋಜಿಸಲಾಗಿತ್ತು ಎಂದು ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿ ಜಿ.ಎಸ್. ಬಾಬು ಅವರು ಹೇಳಿದ್ದಾರೆ.

ಮುಂಬೈನಲ್ಲೂ ಸಾಕ್ಷ್ಯಚಿತ್ರ ಪ್ರದರ್ಶನಕ್ಕೆ ಸಿದ್ಧತೆ ನಡೆಸಲಾಗಿದೆ. ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸಸ್ (ಟಿಸ್) 'ದಿ ಪ್ರೋಗ್ರೆಸ್ ಸ್ಟೂಡೆಂಟ್ಸ್ ಫೋರಂ (ಪಿಎಸ್‌ಎಫ್) ಪ್ರದರ್ಶನ ಆಯೋಜಿಸಿದೆ. ಜೆಎನ್‌ಯು ವಿದ್ಯಾರ್ಥಿಗಳಿಗೆ ಬೆಂಬಲ ಸೂಚಿಸಿ, ಕೇಂದ್ರ ಸರ್ಕಾರದ ಸರ್ವಾಧಿಕಾರಿ ಧೋರಣೆಯನ್ನು ಖಂಡಿಸಿ ಪ್ರದರ್ಶನ ಆಯೋಜಿಸಲಾಗಿದೆ ಎಂದು ಸಂಘಟನೆ ಹೇಳಿದ್ದಾರೆ. ಚಿತ್ರ ಪ್ರದರ್ಶನಕ್ಕೆ ಟಿಸ್‌ನ ಎಲ್ಲ ವಿದ್ಯಾರ್ಥಿಗಳು ಕಡ್ಡಾಯವಾಗಿ ಹಾಜರಾಗಬೇಕು ಎಂದು ವಿದ್ಯಾರ್ಥಿ ಸಂಘಟನೆ ಮನವಿ ಮಾಡಿದೆ. ಪ್ರದರ್ಶನಕ್ಕೆ ಆಡಳಿತ ಮಂಡಳಿ ಇನ್ನೂ ಅನುಮತಿ ನೀಡಬೇಕಿದೆ.

ವಿದ್ಯಾರ್ಥಿಗಳ ಬಿಡುಗಡೆ: ಬಿಬಿಸಿ ಸಾಕ್ಷ್ಯಚಿತ್ರ ಪ್ರದರ್ಶನವನ್ನು ಜಾಮಿಯಾದಲ್ಲಿ ಆಯೋಜಿಸಿದ ಆರೋಪದ ಮೇಲೆ ಬುಧವಾರ ವಶಕ್ಕೆ ಪಡೆಯಲಾಗಿದ್ದ 13 ವಿದ್ಯಾರ್ಥಿಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ಪೊಲೀಸರು ಗುರುವಾರ ಸಂಜೆ ಹೇಳಿದ್ದಾರೆ. ಗುರುವಾರ ಸಂಜೆ ಗಣರಾಜ್ಯೋತ್ಸವ ಪಥಸಂಚಲನದ ಬಳಿಕ ವಿದ್ಯಾರ್ಥಿಗಳನ್ನು ಬಿಟ್ಟು ಕಳುಹಿಸಲಾಗಿದೆ ಎಂದಿದ್ದಾರೆ.

ಆದರೆ, ವಿದ್ಯಾರ್ಥಿಗಳನ್ನು ಪೊಲೀಸರು ಇನ್ನೂ ಬಿಡುಗಡೆ ಮಾಡಿಲ್ಲ ಎಂದು ವಿದ್ಯಾರ್ಥಿ ಸಂಘಟನೆ ಎಸ್‌ಎಫ್‌ಐ ಗುರುವಾರ ಬೆಳಿಗ್ಗೆ ಆರೋಪಿಸಿತ್ತು.

ತೆಲಂಗಾಣ: ಭುಗಿಲೆದ್ದ ರಾಜಭವನ– ಸರ್ಕಾರದ ತಿಕ್ಕಾಟ • ಸಿ.ಎಂಗೆ ರಾಜ್ಯಪಾಲರ ತಿರುಗೇಟು

'ಅಭಿವೃದ್ಧಿ ಎಂದರೆ ತೋಟದ ಮನೆಯಲ್ಲ'

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಅಭಿವೃದ್ಧಿ ಎಂದರೆ ಕೆಲವರಷ್ಟೇ ತೋಟದ ಮನೆ ಹೊಂದುವುದಲ್ಲ ಬದಲಾಗಿ ಎಲ್ಲಾ ರೈತರು ಮತ್ತು ಸೌಲಭ್ಯವಂಚಿತ ಜನರು ತೋಟ ಮತ್ತು ಮನೆಯನ್ನು ಹೊಂದುವುದಾಗಿದೆ ಎಂದು ತೆಲಂಗಾಣ ರಾಜ್ಯಪಾಲೆ ತಮಿಳ್‌ಇಸೈ ಸೌಂದರರಾಜನ್ ಗುರುವಾರ ಹೇಳಿದ್ದಾರೆ.


ತಮಿಳ್‌ಇಸೈ ಸೌಂದರರಾಜನ್

ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಅವರ ಹೈದರಾಬಾದ್‌ನಿಂದ 60 ಕಿ.ಮೀ. ದೂರದಲ್ಲಿರುವ ವಿಶಾಲವಾದ ತೋಟದ ಮನೆಯನ್ನು ಉದ್ದೇಶಿಸಿ ಈ ಹೇಳಿಕೆ ನೀಡಿದ್ದಾರೆ.

ರಾಜಭವನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳದ ಸಿ.ಎಂ(ಪಿಟಿಐ ವರದಿ): ತೆಲಂಗಾಣದ ಭಾರತ ರಾಷ್ಟ್ರ ಸಮಿತಿ (ಬಿಆರ್‌ಎಸ್) ಸರ್ಕಾರ ಮತ್ತು ರಾಜ್ಯಪಾಲರ ನಡುವಿನ ಭಿನ್ನಾಭಿಪ್ರಾಯ ಮತ್ತೊಮ್ಮೆ ಪ್ರಕಟಗೊಂಡಿದ್ದು, ಗಣರಾಜ್ಯೋತ್ಸವದ ಅಂಗವಾಗಿ ರಾಜಭವನದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಿಂದ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಅವರು ದೂರ ಉಳಿದಿದ್ದಾರೆ.

ಕೇಂದ್ರ ಸರ್ಕಾರ ಹೊರಡಿಸಿರುವ ಸೂಚನೆಗಳ ಪ್ರಕಾರ ಗಣರಾಜ್ಯೋತ್ಸವವನ್ನು ಭವ್ಯವಾಗಿ ಆಚರಿಸಬೇಕು ಎಂದು ಬುಧವಾರ ತೆಲಂಗಾಣ ಹೈಕೋರ್ಟ್ ಸರ್ಕಾರಕ್ಕೆ ನಿರ್ದೇಶನ ನೀಡಿದ್ದರೂ ಈ ಬೆಳವಣಿಗೆ ನಡೆದಿದೆ.

ಚಂದ್ರಶೇಖರ ರಾವ್ ಅವರು ಗಣರಾಜ್ಯೋತ್ಸವದ ಅಂಗವಾಗಿ ತಮ್ಮ ಅಧಿಕೃತ ನಿವಾಸ ಪ್ರಗತಿ ಭವನದಲ್ಲಿ ಧ್ವಜಾರೋಹಣ ಮಾಡಿದರು.

ಕಳೆದ ವರ್ಷ ಸ್ಫೋಟ: ಕಳೆದ ವರ್ಷ ವಿಧಾನಸಭೆಯಲ್ಲಿ ರಾಜ್ಯಪಾಲರ ಭಾಷಣ ಮೊಟಕುಗೊಂಡ ಬಳಿಕ ರಾಜ್ಯಪಾಲೆ ಮತ್ತು ಸರ್ಕಾರದ ನಡುವಿನ ಭಿನ್ನಾಭಿಪ್ರಾಯ ಸ್ಫೋಟಗೊಂಡಿತ್ತು.

2019ರಲ್ಲಿ ರಾಜ್ಯಪಾಲೆಯಾಗಿ ಅಧಿಕಾರ ವಹಿಸಿಕೊಂಡಿರುವ ತಮಿಳ್‌ಇಸೈ ಅವರು, ತಮ್ಮ ಕಚೇರಿಗೆ ಸಂಬಂಧಿಸಿದಂತೆ ಸರ್ಕಾರವು ಶಿಷ್ಟಾಚಾರಗಳನ್ನು ಪಾಲಿಸುತ್ತಿಲ್ಲ ಎಂದು ಆರೋಪಿಸಿದ್ದರು.

ತಾವು ಜಿಲ್ಲೆಗಳಿಗೆ ಭೇಟಿ ನೀಡುವ ಸಂದರ್ಭದಲ್ಲಿ ಅಧಿಕಾರಿಗಳು ಶಿಷ್ಟಾಚಾರ ಪಾಲಿಸುತ್ತಿಲ್ಲ ಎಂದು ಉಲ್ಲೇಖಿಸಿದ್ದ ಅವರು, ರಾಜಭವನಕ್ಕೆ ಗೌರವ ನೀಡಬೇಕು ಎಂದಿದ್ದರು. ಈ ಆರೋಪವನ್ನು ತಳ್ಳಿ ಹಾಕಿದ್ದ ಬಿಆರ್‌ಎಸ್ ಪಕ್ಷ, ತಮಿಳ್‌ಇಸೈ ಅವರು ರಾಜ್ಯಪಾಲೆ ಆಗುವುದಕ್ಕಿಂತ ಮೊದಲು ತಮಿಳುನಾಡಿನಲ್ಲಿ ಬಿಜೆಪಿ ಅಧ್ಯಕ್ಷೆಯಾಗಿದ್ದರು ಎಂದು ಹೇಳಿತ್ತು.

ಸರ್ಕಾರವು ನನ್ನ ದೂರವಾಣಿ ಕರೆಗಳನ್ನು ಕದ್ದಾಲಿಸುತ್ತಿರುವ ಸಂಶಯವಿದೆ ಎಂದು ತಮಿಳ್‌ಇಸೈ ಅವರು ಕಳೆದ ವರ್ಷ ಆರೋಪ ಮಾಡಿದ್ದರು.

'ಗಡಿಭಾಗದ ಮರಾಠಿ ಭಾಷಿಕರ ಜೊತೆ ಸರ್ಕಾರವಿದೆ'

ಮುಂಬೈ: 'ರಾಜ್ಯ ಸರ್ಕಾರವು ಕರ್ನಾಟಕ–ಮಹಾರಾಷ್ಟ್ರ ಗಡಿ ಭಾಗದಲ್ಲಿ ನೆಲೆಸಿರುವ ಮರಾಠಿ ಭಾಷಿಕರ ಬೆನ್ನಿಗೆ ನಿಲ್ಲಲಿದೆ' ಎಂದು ಮಹಾರಾಷ್ಟ್ರ ರಾಜ್ಯಪಾಲ ಭಗತ್ ಸಿಂಗ್ ಕೋಶಿಯಾರಿ ಹೇಳಿದ್ದಾರೆ.

ದಾದರ್‌ನಲ್ಲಿಗುರುವಾರ ಹಮ್ಮಿಕೊಳ್ಳಲಾಗಿದ್ದ 74ನೇ ಗಣರಾಜ್ಯೋತ್ಸವದಲ್ಲಿ ರಾಜ್ಯವನ್ನು ಉದ್ದೇಶಿಸಿ ಮಾತನಾಡಿದ ಅವರು, 'ಗಡಿ ಬಿಕ್ಕಟ್ಟು ಶಮನದ ವಿಚಾರದಲ್ಲಿ ಮಹಾರಾಷ್ಟ್ರ ಸರ್ಕಾರವು ತನ್ನ ನಿಲುವಿಗೆ ಬದ್ಧವಾಗಿರಲಿದೆ' ಎಂದಿದ್ದಾರೆ.

ಮಹದಾಯಿ: ಗೋವಾ ಸಚಿವರ ಮನವಿ

ಪಣಜಿ: 'ಮಹದಾಯಿ ಹೋರಾಟಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರಿಗೆ ಗೋವಾ ಪ್ರಜೆಗಳು ಬೆಂಬಲ ನೀಡಬೇಕು' ಎಂದು ಬಿಜೆಪಿ ನೇತೃತ್ವದ ಗೋವಾ ಸಮ್ಮಿಶ್ರ ಸರ್ಕಾರದ ಇಬ್ಬರು ಸಚಿವರು ಗುರುವಾರ ಮನವಿ ಮಾಡಿದ್ದಾರೆ.

ಅಂತರರಾಜ್ಯ ನದಿ ನೀರು ಹಂಚಿಕೆ ವಿವಾದ ತೀವ್ರಗೊಂಡ ಬೆನ್ನಲ್ಲೇ ಸಚಿವರು ಈ ರೀತಿಯಾಗಿ ಮನವಿ ಮಾಡಿದ್ದಾರೆ.

ಗಣರಾಜ್ಯೋತ್ಸವದ ಅಂಗವಾಗಿ ಉಪ ಜಿಲ್ಲೆ ಧರಬಂದೋರಾದಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಗೋವಾದ ಕ್ರೀಡಾ ಸಚಿವ ಗೋವಿಂದ್ ಗೌಡೆ ಅವರು, 'ಭಾರತ ಸಂವಿಧಾನದ ಪ್ರಕಾರ, ಯಾವುದೇ ರಾಜ್ಯಕ್ಕೆ ಒಂದು ನದಿಯ ಪಥವನ್ನು ತಿರುಗಿಸುವ ಅಥವಾ ನೈಸರ್ಗಿಕ ಸಂಪನ್ಮೂಲಗಳನ್ನು ನಾಶಮಾಡುವ ಅಧಿಕಾರ ಇಲ್ಲ. ಕರ್ನಾಟಕದಿಂದ ಗೋವಾಕ್ಕೆ ಹರಿಯುವ ಮಹದಾಯಿ ನದಿಯನ್ನು ಉಳಿಸಲು ಗೋವಾದ ಜನರು ಒಗ್ಗೂಡಿ ದಂಗೆ ಏಳಬೇಕು' ಎಂದು ಒತ್ತಾಯಿಸಿದರು.

'ಮಹಾದಾಯಿ ನದಿಯಿ ಗೋವಾದ ಜನರಿಗೆ ತಾಯಿ ಇದ್ದಂತೆ. ಅದರ ಉಳಿವಿಗಾಗಿ ಹೋರಾಡಲು ನಾವೆಲ್ಲರೂ ಒಗ್ಗೂಡಬೇಕು. ಸಂವಿಧಾನವು ಹೋರಾಟದ ಹಕ್ಕನ್ನು ನೀಡಿದ್ದು, ಯಾರಾದರೂ ಸಂವಿಧಾನವನ್ನು ಪಾಲಿಸದಿದ್ದರೆ ಅವರ ವಿರುದ್ಧ ದಂಗೆ ಏಳಬೇಕಾಗುತ್ತದೆ' ಎಂದು ಹೇಳಿದರು.

ಗೋವಾದ ಪ್ರವಾಸೋದ್ಯಮ ಸಚಿವ ರೋಹನ್ ಖೌಂಟೆ ಅವರೂ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಅವರಿಗೆ ಬೆಂಬಲ ನೀಡುವಂತೆ ಜನರಲ್ಲಿ ಮನವಿ ಮಾಡಿದ್ದು, 'ರಾಜಕೀಯ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು, ರಾಜ್ಯದ ಹಿತಾಸಕ್ತಿಗಾಗಿ ಮುಖ್ಯಮತ್ರಿ ಅವರನ್ನು ಬೆಂಬಲಿಸಿ' ಎಂದು ಕೋರಿದ್ದಾರೆ.

ಛತ್ತೀಸಗಢ :ನಿರುದ್ಯೋಗಿ ಯುವಕರಿಗೆ ಮಾಸಿಕ ಭತ್ಯೆ–ಸಿಎಂ ಭರವಸೆ

ಜಗದಲ್ಪುರ(ಪಿಟಿಐ): ಛತ್ತೀಸಗಢದಲ್ಲಿ ಮುಂದಿನ ಹಣಕಾಸು ವರ್ಷದಿಂದ ನಿರುದ್ಯೋಗಿ ಯುವಕರಿಗೆ ಮಾಸಿಕ ಭತ್ಯೆಯನ್ನು ಸರ್ಕಾರದಿಂದ ನೀಡಲಾಗುವುದು ಎಂದು ಮುಖ್ಯಮಂತ್ರಿ ಭೂಪೇಶ್ ಬಘೇಲ್ ಹೇಳಿದ್ದಾರೆ. ಆದರೆ ಭತ್ಯೆಯ ಪ್ರಮಾಣವನ್ನು ಅವರು ತಿಳಿಸಿಲ್ಲ.

ಗುರುವಾರ ಇಲ್ಲಿ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಬಳಿಕ ಮಾತನಾಡಿದ ಅವರು, '2018ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನ ಪ್ರಮುಖ ಭರವಸೆಗಳಲ್ಲಿ ನಿರುದ್ಯೋಗ ಭತ್ಯೆ ನೀಡುವುದೂ ಒಂದಾಗಿತ್ತು. ಇದೇ ಕಾರಣಕ್ಕೆ 15 ವರ್ಷಗಳ ಬಳಿಕ ಪಕ್ಷ ಮತ್ತೆ ಅಧಿಕಾರಕ್ಕೆ ಬಂದಿದೆ' ಎಂದರು.

ಗುಡಿ ಕೈಗಾರಿಕೆ ಆಧಾರಿತ ಗ್ರಾಮೀಣ ಆರ್ಥಿಕತೆಯನ್ನು ಬಲಪಡಿಸಲು ರಾಜ್ಯದಲ್ಲಿ ಗ್ರಾಮೀಣ ಉದ್ಯಮ ನೀತಿಯನ್ನು ಜಾರಿಗೆ ತರಲಾಗುವುದು ಎಂದು ಅವರು ಭರವಸೆ ನೀಡಿದರು.


ಚಲನಚಿತ್ರ ಕಲಾವಿದರಾದ ವಸಿಷ್ಠ ಸಿಂಹ–ಹರಿಪ್ರಿಯಾ ವಿವಾಹ ಮೈಸೂರಿನ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಗುರುವಾರ ನೆರವೇರಿತು

ಐಟಿ ನಿಯಮಕ್ಕೆ ತಿದ್ದುಪಡಿ: ಅಭಿಪ್ರಾಯ ಸಂಗ್ರಹಣೆ ಕಾಲಾವಕಾಶ ವಿಸ್ತರಣೆ

ನವದೆಹಲಿ: ಮಾಹಿತಿ ತಂತ್ರಜ್ಞಾನ (ಮಧ್ಯಂತರ ಮಾರ್ಗಸೂಚಿ ಮತ್ತು ಡಿಜಿಟಲ್ ಮಾಧ್ಯಮ ನೀತಿ ಸಂಹಿತೆ) ನಿಯಮ– 2021ಕ್ಕೆ ಕರಡು ತಿದ್ದುಪಡಿ ತರುವ ಕುರಿತು ಸಂಬಂಧಪಟ್ಟವರ ಅಭಿಪ್ರಾಯ ಕಲೆಹಾಕಲು ನಿಗದಿಪಡಿಸಲಾಗಿದ್ದ ಕಾಲಮಿತಿಯನ್ನು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯವು ಗುರುವಾರ ವಿಸ್ತರಿಸಿದೆ.

ಪ್ರೆಸ್ ಇನ್‌ಫರ್ಮೇಷನ್ ಬ್ಯೂರೊ (ಪಿಐಬಿ) ಸುಳ್ಳು ಸುದ್ದಿ (ಫೇಕ್ ನ್ಯೂಸ್) ಎಂದು ವರ್ಗೀಕರಿಸುವ ಸುದ್ದಿಗಳನ್ನು ಸಾಮಾಜಿಕ ಜಾಲತಾಣಗಳಿಂದ ತೆಗೆದುಹಾಕಬೇಕು ಎಂದು ಉದ್ದೇಶಿತ ತಿದ್ದುಪಡಿ ನಿಯಮ ಇದಾಗಿದೆ. ಈ ತಿದ್ದುಪಡಿ ನಿಯಮಕ್ಕೆ ಸಂಬಂಧಿಸಿ 2023ರ ಫೆಬ್ರುವರಿ 20ರ ವರೆಗೆ ಸಂಬಂಧಪಟ್ಟವರು ಅಭಿಪ್ರಾಯಗಳನ್ನು ನೀಡಬಹುದು ಎಂದು ಸಚಿವಾಲಯ ಪ್ರಕಟಣೆ ಹೊರಡಿಸಿದೆ. ಇದಕ್ಕೂ ಮೊದಲು ಕಡೇ ದಿನಾಂಕವನ್ನು ಜನವರಿ 25ಕ್ಕೆ ನಿಗದಿಪಡಿಸಲಾಗಿತ್ತು.

ಈ ಕುರಿತು ಬುಧವಾರ ಮಾಹಿತಿ ನೀಡಿರುವ ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಖಾತೆ ಸಚಿವ ರಾಜೀವ್ ಚಂದ್ರಶೇಖರ್, ಕೇಂದ್ರದ ಈ ಪ್ರಸ್ತಾವನೆಯು ಜಾರಿಯಾಗುವ ಮುನ್ನ ಮುಂದಿನ ತಿಂಗಳು ಸಂಬಂಧಪಟ್ಟವರ ಜೊತೆ ಚರ್ಚೆ ನಡೆಸಲಾಗುವುದು ಎಂದು ಹೇಳಿದ್ದರು.

ಸಂಕ್ಷಿಪ್ತ ಸುದ್ದಿ

ಜೋಡೊ ಯಾತ್ರೆ ಸಮಾರೋಪ: ಜೆಡಿಯು ಗೈರು

ನವದೆಹಲಿ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದ ಭಾರತ್ ಜೋಡೊ ಯಾತ್ರೆಯ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗದು ಎಂದಿರುವ ಸಂಯುಕ್ತ ಜನತಾ ದಳದ (ಜೆಡಿಯು) ಅಧ್ಯಕ್ಷ ಲಲನ್ ಸಿಂಗ್, 'ವಿರೋಧ ಪಕ್ಷಗಳನ್ನು ಒಗ್ಗೂಡಿಸಲು ಕಾಂಗ್ರೆಸ್ ಮುಂದಾಗಬೇಕು' ಎಂದು ಗುರುವಾರ ಹೇಳಿದ್ದಾರೆ.

'ಚುನಾವಣೆ ನಡೆಯಲಿರುವ ನಾಗಾಲ್ಯಾಂಡ್‌ನಲ್ಲಿ ರಾಜಕೀಯ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಳ್ಳಬೇಕಾಗಿರುವುದರಿಂದ ಯಾತ್ರೆಯ ಸಮಾರೋಪ ಸಮಾರಂಭದಲ್ಲಿ ಭಾಗಿಯಾಗುವುದಿಲ್ಲ' ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಬರೆದಿರುವ ಪತ್ರದಲ್ಲಿ ಲಲನ್ ಸಿಂಗ್ ತಿಳಿಸಿದ್ದಾರೆ.

'ಏಕೀಕೃತ ವಿರೋಧ ಪಕ್ಷಗಳ ಅಗತ್ಯ ಇದೆ ಎಂಬುದನ್ನು ನಮ್ಮ ಪಕ್ಷವು ಮನಗಂಡಿದೆ. ಇದಕ್ಕಾಗಿ ಕಾಂಗ್ರೆಸ್ ಕಾರ್ಯಪ್ರವೃತ್ತವಾಗಲಿದೆ ಎಂಬುದನ್ನು ನಿರೀಕ್ಷಿಸುತ್ತಿದ್ದೇವೆ' ಎಂದೂ ಆಶಯ ವ್ಯಕ್ತಪಡಿಸಿದ್ದಾರೆ.

'ಯಾತ್ರೆಯ ಸಮಾರೋಪವು ಐತಿಹಾಸಿಕ ಕಾರ್ಯಕ್ರಮವಾಗಲಿದೆ ಮತ್ತು ಅದರ ಯಶಸ್ಸಿಗೆ ಶುಭ ಹಾರೈಸುತ್ತೇನೆ' ಎಂದಿದ್ದಾರೆ.

ಸಮಾರೋಪ ಸಮಾರಂಭದಲ್ಲಿ ಪಾಲ್ಗೊಳ್ಳುವಂತೆ ಕಾಂಗ್ರೆಸ್ ಹಲವು ಪಕ್ಷಗಳಿಗೆ ಆಹ್ವಾನ ನೀಡಿತ್ತು. ಕೆಲವು ಪ್ರಾದೇಶಿಕ ಪಕ್ಷಗಳ ಮುಖ್ಯಸ್ಥರು ತಮ್ಮ ಪ್ರತಿನಿಧಿಗಳನ್ನು ಕಳುಹಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಇದೇ 30ರಂದು ಯಾತ್ರೆಯ ಸಮಾರೋಪ ಸಮಾರಂಭವು ಶ್ರೀನಗರದಲ್ಲಿ ನಡೆಯಲಿದೆ.

'ನಾಗಾಲ್ಯಾಂಡ್‌ನಲ್ಲಿ ಎಎಪಿ ಸ್ಪರ್ಧೆ: ಮೈತ್ರಿ ಇಲ್ಲ'

ಕೊಹಿಮಾ (ಪಿಟಿಐ): ನಾಗಾಲ್ಯಾಂಡ್ ವಿಧಾನಸಭಾ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷ (ಎಎಪಿ) ರಾಜ್ಯದ ಯಾವುದೇ ಪಕ್ಷಗಳ ಜೊತೆ ಚುನಾವಣಾ ಪೂರ್ವ ಮೈತ್ರಿ ಮಾಡಿಕೊಳ್ಳುವುದಿಲ್ಲ ಎಂದು ಪಕ್ಷದ ಈಶಾನ್ಯ ರಾಜ್ಯಗಳ ಉಸ್ತುವಾರಿ ರಾಜೇಶ್ ಶರ್ಮಾ ಅವರು ಹೇಳಿದ್ದಾರೆ.

'ನಾವು ಸಾಧ್ಯವಾದಷ್ಟು ಹೆಚ್ಚಿನ ಸ್ಥಾನಗಳಲ್ಲಿ ಸ್ಪರ್ಧೆ ಮಾಡುತ್ತೇವೆ. ಆದರೆ ಯಾವುದೇ ಪಕ್ಷದ ಜೊತೆ ಚುನಾವಣಾ ಪೂರ್ವ ಮೈತ್ರಿ ಇರುವುದಿಲ್ಲ' ಎಂದು ಅವರು ಇಲ್ಲಿ ಹೇಳಿದರು.

ಮಾಜಿ ಶಾಸಕ ಆಸು ಕೀಹೋ ಎಎಪಿಯ ನಾಗಾಲ್ಯಾಂಡ್ ಘಟಕದ ಅಧ್ಯಕ್ಷರಾಗಿದ್ದಾರೆ. ಅವರ ನೇತೃತ್ವದಲ್ಲಿ ಪಕ್ಷ ಚುನಾವಣೆ ಎದುರಿಸಲಿದೆ ಎಂದು ಹೇಳಿದರು. ಉತ್ತಮ ಆಡಳಿತ, ಪ್ರಾಮಾಣಿಕ ರಾಜಕೀಯ ಮತ್ತು ಭ್ರಷ್ಟಾಚಾರ ನಿರ್ಮೂಲನೆಯನ್ನು ಬಯಸಿರುವ ರಾಜ್ಯದ ಜನರು ಎಎಪಿಯನ್ನು ಬೆಂಬಲಿಸುತ್ತಾರೆ ಎಂಬ ವಿಶ್ವಾಸ ಇದೆ ಎಂದರು. ರಾಜ್ಯದ ಒಟ್ಟಾರೆ ಅಭಿವೃದ್ಧಿಗಾಗಿ ನಾಗಾಲ್ಯಾಂಡ್ ಜನರು ಮತ ಚಲಾಯಿಸುವ ಸಮಯ ಬಂದಿದೆ ಎಂದು ಅವರು ಹೇಳಿದರು.

ದೆಹಲಿಯಲ್ಲಿರುವ ನಾಗಾಗಳು ಈಗಾಗಲೇ ಎಎಪಿಯನ್ನು ಬೆಂಬಲಿಸಿದ್ದಾರೆ. ರಾಜ್ಯದಲ್ಲೂ ಕೂಡ ಬೆಂಬಲಿಸುವ ವಿಶ್ವಾಸವಿದೆ. ರಾಜ್ಯದ ರಾಜಕೀಯ ಸನ್ನಿವೇಶದಲ್ಲಿ ಎಎಪಿ ಸ್ಪರ್ಧೆ ಅಗತ್ಯವಾದ ಬದಲಾವಣೆ ತರಲಿದೆ ಎಂದು ಅವರು ಹೇಳಿದರು.

ಬೆಚುವಾ ಉಚ್ಚಾಟಿಸಿದ ಎಂಎನ್‌ಎಫ್

ಅಯಿಜೋಲ್ (ಮಿಜೋರಾಂ) (ಪಿಟಿಐ): ಆಡಳಿತಾರೂಢ ಮಿಜೊ ನ್ಯಾಷನಲ್ ಫ್ರಂಟ್ (ಎಂಎನ್‌ಎಫ್) ಪಕ್ಷವು ತನ್ನ ಇಬ್ಬರು ಹಿರಿಯ ಮುಖಂಡರನ್ನು ಪಕ್ಷದಿಂದ ಉಚ್ಚಾಟಿಸಿದೆ. 'ಶಿಸ್ತು ಉಲ್ಲಂಘನೆ' ಹಾಗೂ 'ಪಕ್ಷ ವಿರೋಧಿ ಚಟುವಟಿಕೆ'ಗಳಲ್ಲಿ ಇಬ್ಬರೂ ಮುಖಂಡರು ತೊಡಗಿದ್ದರು ಎಂದು ಪಕ್ಷವು ಆರೋಪಿಸಿದೆ.

'ಮಾಜಿ ಸಚಿವ ಹಾಗೂ ಶಾಸಕ ಕೆ. ಬೆಚುವಾ ಹಾಗೂ ಮಾರಾ ಸ್ವಾಯತ್ತ ಜಿಲ್ಲಾ ಮಂಡಳಿ (ಎಂಎಡಿಸಿ) ಅಧ್ಯಕ್ಷ ಎನ್. ವೈಕು ಅವರನ್ನು ಪಕ್ಷದಿಂದ ಹೊರಹಾಕಲಾಗಿದೆ' ಎಂದು ಎಂಎನ್‌ಎಫ್‌ನ ಪ್ರಧಾನ ಕಾರ್ಯದರ್ಶಿ ಟಿ. ಲೈಸೈಮಾ ಬುಧವಾರ ಹೇಳಿದರು.

ಮುಖ್ಯಮಂತ್ರಿ ಹಾಗೂ ಎಂಎನ್‌ಎಫ್ ಪಕ್ಷದ ಅಧ್ಯಕ್ಷ ಜೋರಂಥಾಂಗ ಅವರು ಬೆಚುವಾ ಅವರಿಗೆ ಸಚಿವ ಸ್ಥಾನ ತೊರೆಯುವಂತೆ ಹೇಳಿದ್ದರು. ಇದೇ ಕಾರಣಕ್ಕೆ ಕಳೆದ ವರ್ಷದ ಡಿಸೆಂಬರ್‌ನಲ್ಲಿ ಬೆಚುವಾ ಅವರು ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

'ನನ್ನ ವಿರುದ್ಧ ಮಾಡಲಾದ ಆರೋಪಗಳಿಗೆ ಸ್ಪಷ್ಟನೆ ನೀಡುವುದಕ್ಕಾದರೂ ಪಕ್ಷ ನನಗೆ ಷೋಕಾಸ್ ನೋಟಿಸ್ ನೀಡಬೇಕಿತ್ತು' ಎಂದು ಉಚ್ಚಾಟಿತ ಶಾಸಕ ಬೆಚುವಾ ಅವರು ಅಸಮಾಧಾನ ವ್ಯಕ್ತಪಡಿಸಿದರು.

ಬೇರೆ ಪಕ್ಷಕ್ಕೆ ಸೇರ್ಪಡೆಗೊಳ್ಳುವ ಕುರಿತು ಬೆಚುವಾ ಅವರು ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

ರಣಜಿ ಕ್ರಿಕೆಟ್: ಗುಂಪು ಹಂತದಲ್ಲಿ ಅಜೇಯವಾಗುಳಿದ ಕರ್ನಾಟಕ

ಗೌತಮ್ ದಾಳಿ: ಜಾರ್ಖಂಡ್ ತತ್ತರ

ಜೆಮ್ಶೆಡ್‌ಪುರ: ಐದು ವಿಕೆಟ್‌ಗಳ ಗೊಂಚಲು ಗಳಿಸಿದ ಕೃಷ್ಣಪ್ಪ ಗೌತಮ್ ಸ್ಪಿನ್ ದಾಳಿಗೆ ಜಾರ್ಖಂಡ್ ತಂಡವು ತತ್ತರಿಸಿತು.

ಇದರೊಂದಿಗೆ ಕರ್ನಾಟಕ ತಂಡವು ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಸಿ ಗುಂಪಿನ ಕೊನೆಯ ಪಂದ್ಯದಲ್ಲಿ 9 ವಿಕೆಟ್‌ಗಳಿಂದ ಜಯಿಸಿತು. ಕೀನಾನ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯವು ಮೂರೇ ದಿನಗಳಲ್ಲಿ ಮುಕ್ತಾಯವಾಯಿತು. 66 ರನ್‌ಗಳ ಚಿಕ್ಕ ಗುರಿಯನ್ನು 18.1 ಓವರ್‌ಗಳಲ್ಲಿ 1 ವಿಕೆಟ್ ಕಳೆದುಕೊಂಡು ಮುಟ್ಟಿತು. ಮೊದಲ ಇನಿಂಗ್ಸ್‌ನಲ್ಲಿ ಶತಕ ಗಳಿಸಿದ್ದ ದೇವದತ್ತ ಎರಡನೇ ಇನಿಂಗ್ಸ್‌ನಲ್ಲಿ ಖಾತೆಯನ್ನೇ ತೆರೆಯದೇ ಔಟಾದರು.

ಕರ್ನಾಟಕವು ಗುಂಪಿನ ಅಂಕಪಟ್ಟಿಯಲ್ಲಿ 35 ಅಂಕಗಳೊಂದಿಗೆ ಅಗ್ರಸ್ಥಾನ ಉಳಿಸಿಕೊಂಡಿತು. ಲೀಗ್ ಹಂತದಲ್ಲಿ ಅಜೇಯವಾಗುಳಿದು ಎಂಟರ ಘಟ್ಟಕ್ಕೆ ಸಾಗಿತು.

ಕರ್ನಾಟಕ ತಂಡವು ಬುಧವಾರ ಮೊದಲ ಇನಿಂಗ್ಸ್‌ನಲ್ಲಿ 136 ರನ್‌ಗಳ ಮುನ್ನಡೆ ಸಾಧಿಸಿತ್ತು. ಎರಡನೇ ಇನಿಂಗ್ಸ್ ಆರಂಭಿಸಿದ್ದ ಆತಿಥೇಯ ತಂಡವು ದಿನದಾಟದ ಕೊನೆಗೆ 28 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 85 ರನ್ ಗಳಿಸಿತ್ತು. ಕ್ರೀಸ್‌ನಲ್ಲಿ ಕುಮಾರ್ ಮತ್ತು ಕುಶಾಗ್ರ ಉಳಿದಿದ್ದರು. ದೊಡ್ಡ ಜೊತೆಯಾಟವಾಡಿ ಕರ್ನಾಟಕ್ಕೆ ದೊಡ್ಡ ಮೊತ್ತದ ಗುರಿ ನೀಡುವ ಅವರ ಉದ್ದೇಶ ಈಡೇರಲಿಲ್ಲ. ದಿನದಾಟದ ಎರಡನೇ ಓವರ್‌ನಲ್ಲಿಯೇ ಗೌತಮ್ ಎಸೆತದಲ್ಲಿ ಕುಮಾರ್ ಕ್ಲೀನ್‌ಬೌಲ್ಡ್ ಆದರು.

ಪ್ರಮುಖ ಬ್ಯಾಟರ್‌ಗಳಾದ ವಿರಾಟ್ ಸಿಂಗ್, ಕುಶಾಗ್ರ ಮತ್ತು ಅರ್ಧಶತಕದತ್ತ ಸಾಗಿದ್ದ ಸುಪ್ರಿಯೊ ಚಕ್ರವರ್ತಿ (48; 93ಎ, 4X3, 6X2) ಅವರ ವಿಕೆಟ್ ಗಳಿಸಿ ಗೌತಮ್ ತಂಡದ ಜಯವನ್ನು ಸುಗಮಗೊಳಿಸಿದರು.

ಗೌತಮ್‌ಗೆ ಮಧ್ಯಮವೇಗಿ ವಾಸುಕಿ ಕೌಶಿಕ್ (21ಕ್ಕೆ3) ಉತ್ತಮ ಬೆಂಬಲ ನೀಡಿದರು. ಲೆಗ್‌ಸ್ಪಿನ್ನರ್ ಶ್ರೇಯಸ್ ಗೋಪಾಲ್ ಎರಡು ವಿಕೆಟ್ ಗಳಿಸಿ ಜಾರ್ಖಂಡ್ ಇನಿಂಗ್ಸ್‌ಗೆ ತೆರೆಯೆಳೆದರು!

ಈ ಸೋಲಿನಿಂದಾಗಿ ಜಾರ್ಖಂಡ್ ತಂಡವು ಎಂಟರ ಘಟ್ಟಕ್ಕೆ ಪ್ರವೇಶಿಸುವ ಹಾದಿ ಕಠಿಣವಾಗಿದೆ. ಪುದುಚೇರಿ ವಿರುದ್ಧ ಆಡುತ್ತಿರುವ ಕೇರಳ ಮತ್ತು ಸರ್ವಿಸಸ್ ಎದುರು ಆಡುತ್ತಿರುವ ರಾಜಸ್ಥಾನ ತಂಡಗಳ ಪಂದ್ಯಗಳು ಶುಕ್ರವಾರ ಮುಕ್ತಾಯವಾಗಲಿವೆ. ಆ ಪಂದ್ಯಗಳ ಫಲಿತಾಂಶದ ನಂತರವೇ ಜಾರ್ಖಂಡ್ ಪ್ರವೇಶದ ಕುರಿತು ಸ್ಪಷ್ಟವಾಗಲಿದೆ.



ಒಟ್ಟು ಒಂಬತ್ತು ವಿಕೆಟ್ ಪಡೆದ ಕೆ.ಗೌತಮ್

ಉತ್ತರಾಖಂಡ ಎದುರಾಳಿ?

ಕರ್ನಾಟಕ ತಂಡಕ್ಕೆ ಎ ಗುಂಪಿನಲ್ಲಿ ಎರಡನೇ ಸ್ಥಾನದಲ್ಲಿರುವ ಉತ್ತರಾಖಂಡ ತಂಡವು ಕ್ವಾರ್ಟರ್‌ಫೈನಲ್‌ನಲ್ಲಿ ಮುಖಾಮುಖಿಯಾಗುವ ಸಾಧ್ಯತೆ ಹೆಚ್ಚಿದೆ. ತನ್ನ ಗುಂಪಿನಲ್ಲಿ ಉತ್ತರಾಖಂಡ ತಂಡವು ಆರು ಪಂದ್ಯಗಳಿಂದ 26 ಅಂಕ ಗಳಿಸಿದೆ. ಹರಿಯಾಣ ವಿರುದ್ಧದ ಕೊನೆಯ ಪಂದ್ಯದಲ್ಲಿ ಆಡುತ್ತಿದೆ. ಈ ಗುಂಪಿನಲ್ಲಿ ಬಂಗಾಳ ತಂಡವು ಅಗ್ರಸ್ಥಾನದಲ್ಲಿದೆ.

ಸಂಕ್ಷಿಪ್ತ ಸ್ಕೋರು: ಸಿ ಗುಂಪು: ಮೊದಲ ಇನಿಂಗ್ಸ್: ಜಾರ್ಖಂಡ್ 164, ಕರ್ನಾಟಕ: 300. ಎರಡನೇ ಇನಿಂಗ್ಸ್:ಜಾರ್ಖಂಡ್: 78.5 ಓವರ್‌ಗಳಲ್ಲಿ 201 (ಕುಮಾರ್ ಸೂರಜ್ 34, ಕುಶಾಗ್ರ 36, ಅನುಕೂಲ್ ರಾಯ್ 36, ಸುಪ್ರಿಯೊ ಚಕ್ರವರ್ತಿ 48, ವಿ. ಕೌಶಿಕ್ 21ಕ್ಕೆ3, ಶ್ರೇಯಸ್ ಗೋಪಾಲ್ 58ಕ್ಕೆ2, ಕೆ. ಗೌತಮ್ 75ಕ್ಕೆ5). ಕರ್ನಾಟಕ: 18.1 ಓವರ್‌ಗಳಲ್ಲಿ 1 ವಿಕೆಟ್‌ಗೆ 66 (ಆರ್. ಸಮರ್ಥ್ ಔಟಾಗದೆ 24, ನಿಕಿನ್ ಜೋಸ್ ಔಟಾಗದೆ 42, ಶಹಬಾಜ್ ನದೀಂ 24ಕ್ಕೆ1) ಫಲಿತಾಂಶ: ಕರ್ನಾಟಕ ತಂಡಕ್ಕೆ 9 ವಿಕೆಟ್‌ಗಳ ಜಯ ಮತ್ತು ಆರು ಅಂಕ.

ಇತರ ಪಂದ್ಯಗಳ ಸ್ಕೋರ್

(ಜೋಧಪುರ): ಮೊದಲ ಇನಿಂಗ್ಸ್: ಸರ್ವಿಸಸ್: 178, ರಾಜಸ್ಥಾನ:136. ಎರಡನೇ ಇನಿಂಗ್ಸ್: ಸರ್ವಿಸಸ್: 103.5 ಓವರ್‌ಗಳಲ್ಲಿ 276 (ಲವಕೇಶ್ ಬನ್ಸಾಲ್ 50, ಪುಳಕಿತ್ ನಾರಂಗ್ 47, ಅನಿಕೇತ್ ಚೌಧರಿ 58ಕ್ಕೆ5) ರಾಜಸ್ಥಾನ: 38 ಓವರ್‌ಗಳಲ್ಲಿ 6ಕ್ಕೆ107 (ಯಶ್ ಕೊಠಾರಿ 72, ಕರಣ್ ಲಾಂಬಾ ಬ್ಯಾಟಿಂಗ್ 18, ಪೂನಮ್ ಪೂನಿಯಾ 18ಕ್ಕೆ2, ಪುಳಕಿತ್ ನಾರಂಗ್ 20ಕ್ಕೆ4)

ಪುದುಚೇರಿ ಸಿಚೆಮ್ ಮೈದಾನ: ಮೊದಲ ಇನಿಂಗ್ಸ್: ಪುದುಚೇರಿ: 371.ಕೇರಳ: 286. ಎರಡನೇ ಇನಿಂಗ್ಸ್: ಪುದುಚೇರಿ: 14 ಓವರ್‌ಗಳಲ್ಲಿ 1 ವಿಕೆಟ್‌ಗೆ 34 (ಪಾರಸ್ ಡೋಗ್ರಾ ಬ್ಯಾಟಿಂಗ್ 20)

ಎ ಗುಂಪು: (ರೋಹ್ಟಕ್): ಮೊದಲ ಇನಿಂಗ್ಸ್: ಹರಿಯಾಣ: 71.3 ಓವರ್‌ಗಳಲ್ಲಿ 233 (ಸುಮಿತ್ ಕುಮಾರ್ 86, ಜಯಂತ್ ಯಾದವ್ 20 ಅವನೀಶ್ ಸುಧಾ 31ಕ್ಕೆ6, ಸ್ವಪ್ನಿಲ್ ಸಿಂಗ್ 58ಕ್ಕೆ2)

ಟಿಟಿ ರ‍್ಯಾಂಕಿಂಗ್ 33ನೇ ಸ್ಥಾನಕ್ಕೇರಿದ ಮಣಿಕಾ ಬಾತ್ರಾ

ನವದೆಹಲಿ (ಪಿಟಿಐ): ಭಾರತದ ಟೇಬಲ್ ಟೆನಿಸ್ ಆಟಗಾರ್ತಿ ಮಣಿಕಾ ಬಾತ್ರಾ, ಐಟಿಟಿಎಫ್ ರ‍್ಯಾಂಕಿಂಗ್‌ನಲ್ಲಿ 33ನೇ ಸ್ಥಾನಕ್ಕೇರಿದ್ದಾರೆ. ವೃತ್ತಿಜೀವನದಲ್ಲಿ ಅವರ ಶ್ರೇಷ್ಠ ರ‍್ಯಾಂಕ್ ಇದಾಗಿದೆ.

27 ವರ್ಷದ ಮಣಿಕಾ ನವೆಂಬರ್‌ನಲ್ಲಿ ನಡೆದಿದ್ದ ಏಷ್ಯಾ ಕಪ್‌ನಲ್ಲಿ ಕಂಚು ಗೆದ್ದು ಐತಿಹಾಸಿಕ ಸಾಧನೆ ಮಾಡಿದ್ದರು. ಕಳೆದ ವಾರ ದೋಹಾದಲ್ಲಿ ನಡೆದಿದ್ದ ಕಂಟೆಂಡರ್ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶಿಸಿದ್ದರು. ಈ ಸಾಧನೆಯು ಅವರಿಗೆ 140 ಪಾಯಿಂಟ್ಸ್‌ಗಳನ್ನು ತಂದುಕೊಟ್ಟಿದೆ.

ಅನುಭವಿ ಆಟಗಾರ ಅಚಂತಾ ಶರತ್ ಕಮಲ್, ಪುರುಷರ ವಿಭಾಗದ ರ‍್ಯಾಂಕಿಂಗ್‌ನಲ್ಲಿ ಎರಡು ಕ್ರಮಾಂಕ ಮೇಲಕ್ಕೇರಿ 46ನೇ ಸ್ಥಾನ ಪಡೆದಿದ್ದಾರೆ. ಜಿ.ಸತ್ಯನ್ ಒಂದು ಕ್ರಮಾಂಕ ಕುಸಿತ ಕಂಡಿದ್ದು, 40ನೇ ಸ್ಥಾನದಲ್ಲಿದ್ದಾರೆ.

ಏಷ್ಯಾ ಕಪ್‌ನಲ್ಲಿ ಪದಕ ಗೆದ್ದ ಭಾರತದ ಮೊದಲ ಆಟಗಾರ್ತಿ ಎಂಬ ಗೌರವವನ್ನು ಮಣಿಕಾ ತಮ್ಮದಾಗಿಸಿಕೊಂಡಿದ್ದರು.



ಮಣಿಕಾ ಬಾತ್ರಾ

ಭಾರತಕ್ಕೆ ಕಿವೀಸ್ ಸವಾಲು

ಟಿ20 ಕ್ರಿಕೆಟ್ ಸರಣಿ: ಸೂರ್ಯಕುಮಾರ್ ಮೇಲೆ ಕಣ್ಣು

ರಾಂಚಿ (ಪಿಟಿಐ): ಏಕದಿನ ಕ್ರಿಕೆಟ್ ಸರಣಿಯಲ್ಲಿ ಭರ್ಜರಿ ಜಯ ಸಾಧಿಸಿದ ಸಂಭ್ರಮದಲ್ಲಿರುವ ಭಾರತ ತಂಡವು ನ್ಯೂಜಿಲೆಂಡ್ ಎದುರಿನ ಟಿ20 ಸರಣಿಯಲ್ಲಿ ಕಣಕ್ಕಿಳಿಯಲಿದೆ.

ಹಾರ್ದಿಕ್ ಪಾಂಡ್ಯ ನಾಯಕತ್ವದಲ್ಲಿ ಯುವ ಆಟಗಾರರು ತಮ್ಮ ಸಾಮರ್ಥ್ಯ ಮೆರೆಯಲು ತುದಿಗಾಲಿನಲ್ಲಿ ನಿಂತಿದ್ದಾರೆ. ಮುಂದಿನ ತಿಂಗಳು ಆಸ್ಟ್ರೇಲಿಯಾ ತಂಡವು ಭಾರತದಲ್ಲಿ ಟೆಸ್ಟ್ ಸರಣಿ ಆಡಲಿದೆ. ಫೆ 2ರಿಂದ ನಾಗಪುರದಲ್ಲಿ ಭಾರತ ತಂಡದ ಶಿಬಿರ ಆರಂಭವಾಗಲಿದೆ. ಅದರಿಂದಾಗಿ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಕೆ.ಎಲ್. ರಾಹುಲ್, ಮೊಹಮ್ಮದ್ ಸಿರಾಜ್ ಮತ್ತು ಮೊಹಮ್ಮದ್ ಶಮಿ ಅವರಿಗೆ ವಿಶ್ರಾಂತಿ ನೀಡಲಾಗಿದೆ.

ಶುಭಮನ್ ಗಿಲ್, ಸೂರ್ಯಕುಮಾರ್ ಯಾದವ್, ಇಶಾನ್ ಕಿಶನ್ ಮತ್ತು ಸ್ಪಿನ್ನರ್ ಕುಲದೀಪ್ ಯಾದವ್ ಟಿ20 ಸರಣಿಯಲ್ಲಿ ಆಡಿ ನಂತರ ಶಿಬಿರಕ್ಕೆ ಹೋಗಲಿದ್ದಾರೆ. ಏಕದಿನ ಸರಣಿಯಲ್ಲಿ ಒಂದು ದ್ವಿಶತಕ ಹಾಗೂ ಒಂದು ಶತಕ ಹೊಡೆದು ದಾಖಲೆ ಬರೆದಿರುವ ಗಿಲ್ ಮತ್ತು ಐಸಿಸಿ ವರ್ಷದ ಆಟಗಾರ ಗೌರವ ಗಳಿಸಿರುವ ಸೂರ್ಯಕುಮಾರ್ ಕಿವೀಸ್ ಬೌಲಿಂಗ್ ಪಡೆಗೆ ಪ್ರಮುಖ ಸವಾಲಾಗುವ ನಿರೀಕ್ಷೆ ಇದೆ. ಇಶಾನ್ ಕಿಶನ್, ಹಾರ್ದಿಕ್ ಮತ್ತು ದೀಪಕ್ ಹೂಡಾ ಕೂಡ ಉತ್ತಮ ಲಯದಲ್ಲಿದ್ದಾರೆ.

ಆಲ್‌ರೌಂಡರ್ ಮಿಚೆಲ್ ಸ್ಯಾಂಟನರ್ ಈ ಸರಣಿಯಲ್ಲಿ ಕಿವೀಸ್ ಬಳಗವನ್ನು ಮುನ್ನಡೆಸಲಿದ್ದಾರೆ. ಡೆವೊನ್ ಕಾನ್ವೆ, ಫಿನ್ ಅಲೆನ್, ಮೈಕಲ್ ಬ್ರೇಸ್‌ವೆಲ್ ಮತ್ತು ಗ್ಲೆನ್ ಫಿಲಿಪ್ಸ್ ಮೇಲೆ ಕಿವೀಸ್‌ಬ್ಯಾಟಿಂಗ್‌ಅವಲಂಬಿತವಾಗಿದೆ.

ತಂಡಗಳು: ಭಾರತ: ಹಾರ್ದಿಕ್ ಪಾಂಡ್ಯ (ನಾಯಕ), ಸೂರ್ಯಕುಮಾರ್ (ಉಪನಾಯಕ), ಇಶಾನ್ ಕಿಶನ್ (ವಿಕೆಟ್‌ಕೀಪರ್), ಶುಭಮನ್ ಗಿಲ್, ಪೃಥ್ವಿ ಶಾ, ಋತುರಾಜ್ ಗಾಯಕವಾಡ, ದೀಪಕ್ ಹೂಡಾ, ರಾಹುಲ್ ತ್ರಿಪಾಠಿ, ಜಿತೇಶ್ ಶರ್ಮಾ (ವಿಕೆಟ್‌ಕೀಪರ್), ವಾಷಿಂಗ್ಟನ್ ಸುಂದರ್, ಕುಲದೀಪ್ ಯಾದವ್, ಯಜುವೇಂದ್ರ ಚಾಹಲ್, ಅರ್ಷದೀಪ್, ಉಮ್ರಾನ್ ಮಲಿಕ್, ಶಿವಂ ಮಾವಿ, ಮುಖೇಶ್ ಕುಮಾರ್

ನ್ಯೂಜಿಲೆಂಡ್: ಮಿಚೆಲ್ ಸ್ಯಾಂಟನರ್ (ನಾಯಕ), ಫಿನ್ ಅಲೆನ್, ಮೈಕಲ್ ಬ್ರೇಸ್‌ವೆಲ್, ಮಾರ್ಕ್ ಚಾಪ್ಮನ್, ಡೆವೊನ್ ಕಾನ್ವೆ, ಡೇನ್ ಕ್ಲೆವರ್, ಡೇನ್ ಕ್ಲೀವರ್, ಗ್ಲೆನ್ ಫಿಲಿಪ್ಸ್ (ನಾಲ್ವರೂ ವಿಕೆಟ್‌ಕೀಪರ್), ಮಿಚೆಲ್ ರಿಪನ್, ಹೆನ್ರಿ ಶಿಪ್ಲಿ, ಈಶ್ ಸೋಧಿ, ಬ್ಲೇರ್ ಟಿಕ್ನರ್.

ಪಂದ್ಯ ಆರಂಭ: ರಾತ್ರಿ 7.30

ನೇರಪ್ರಸಾರ: ಸ್ಟಾರ್‌ಸ್ಪೋರ್ಟ್ಸ್



ರಾಂಚಿಯಲ್ಲಿ ಗುರುವಾರ ತಾಲೀಮು ನಡೆಸಿದ ಸೂರ್ಯಕುಮಾರ್ ಯಾದವ್, ಇಶಾನ್ ಕಿಶನ್ ಮತ್ತು ಸಹ ಆಟಗಾರರು –ಪಿಟಿಐ ಚಿತ್ರ

ಹಾರ್ದಿಕ್ –ಧೋನಿ ಭೇಟಿ

ಭಾರತ ತಂಡದ ಮಾಜಿ ನಾಯಕ ಮಹೇಂದ್ರಸಿಂಗ್ ಧೋನಿ ಅವರು ಭಾರತ ತಂಡದ ಆಟಗಾರರನ್ನು ಭೇಟಿಯಾದರು.

ಧೋನಿಯ ತವರೂರಾಗಿರುವ ರಾಂಚಿಯಲ್ಲಿ ಶುಕ್ರವಾರ ನಡೆಯಲಿರುವ ಟಿ20 ಪಂದ್ಯದಲ್ಲಿ ಭಾರತ ಮತ್ತು ನ್ಯೂಜಿಲೆಂಡ್ ಮುಖಾಮುಖಿಯಾಗಲಿವೆ.

ಗುರುವಾರ ತಂಡದ ಅಭ್ಯಾಸ ನಡೆದ ಸಂದರ್ಭದಲ್ಲಿ ಧೋನಿ ಭೇಟಿ ನೀಡಿದರು. ಅವರು ನಾಯಕ ಹಾರ್ದಿಕ್ ಪಾಂಡ್ಯ ಅವರೊಂದಿಗೆ ಕೆಲಹೊತ್ತು ಮಾತನಾಡಿದರು. ನಂತರ ವಿಕೆಟ್‌ಕೀಪರ್ –ಬ್ಯಾಟರ್ ಇಶಾನ್ ಕಿಶನ್, ಆರಂಭಿಕ ಬ್ಯಾಟರ್ ಶುಭಮನ್ ಗಿಲ್, ಸ್ಪಿನ್ನರ್ ಯಜುವೇಂದ್ರ ಚಾಹಲ್ ಅವರಿಗೆ ಬಹಳ ಹೊತ್ತು ಸಲಹೆಗಳನ್ನು ನೀಡಿದರು. ನೆರವು ಸಿಬ್ಬಂದಿಯನ್ನೂ ಭೇಟಿಯಾದರು.

ಹಿಂಡನ್‌ಬರ್ಗ್ ವಿರುದ್ಧ ಕ್ರಮ: ಅದಾನಿ ಪರಿಶೀಲನೆ

ನವದೆಹಲಿ (ಪಿಟಿಐ): ಅಮೆರಿಕದ ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯ ವಿರುದ್ಧ ಕಾನೂನು ಕ್ರಮಕ್ಕೆ ಮುಂದಾಗುವ ಬಗ್ಗೆ ಪರಿಶೀಲನೆ ನಡೆಸುತ್ತಿರುವುದಾಗಿ ಅದಾನಿ ಸಮೂಹ ಗುರುವಾರ ಹೇಳಿದೆ.

ಸಂಸ್ಥೆಯ ಆರೋಪವು, ತನ್ನ ಪ್ರಮುಖ ಕಂಪನಿಯೊಂದರ ಷೇರು ಮಾರಾಟ ಪ್ರಕ್ರಿಯೆಯನ್ನು (ಎಫ್‌ಪಿಒ) ಹಾಳುಮಾಡುವ ಬೇಜವಾಬ್ದಾರಿಯ ಯತ್ನ ಎಂದು ಸಮೂಹವು ಆರೋಪಿಸಿದೆ.

‘ಕೇಡುಬುದ್ಧಿಯಿಂದ ಕೂಡಿರುವ, ಹಾನಿ ಮಾಡುವ ಉದ್ದೇಶದ, ಅಧ್ಯಯನವನ್ನೇ ನಡೆಸದೆ ಸಿದ್ಧಪಡಿಸಿದ ವರದಿಯು ಅದಾನಿ ಸಮೂಹ, ಅದರ ಹೂಡಿಕೆದಾರರು ಹಾಗೂ ಷೇರುದಾರರ ಮೇಲೆ ಕೆಟ್ಟ ಪರಿಣಾಮ ಉಂಟುಮಾಡಿದೆ. ಈ ವರದಿಯಿಂದಾಗಿ ಭಾರತದ ಷೇರುಪೇಟೆಗಳಲ್ಲಿ ಉಂಟಾದ ಅನಿಶ್ಚಿತತೆಯು ಕಳವಳಕಾರಿಯಾದುದು ಹಾಗೂ ದೇಶದ ಪ್ರಜೆಗಳಿಗೆ ಅನಗತ್ಯವಾಗಿ ನೋವು ಉಂಟುಮಾಡುವಂಥದ್ದು’ ಎಂದು ಅದಾನಿ ಸಮೂಹದ ಮುಖ್ಯಸ್ಥ ಜತಿನ್ ಜಲುಂಧ್ವಾಲಾ ಪ್ರಕಟಣೆಯಲ್ಲಿ ಹೇಳಿದ್ದಾರೆ.

ವರದಿ ಹಾಗೂ ಅದರಲ್ಲಿ ಇರುವ ಆಧಾರರಹಿತ ಹೇಳಿಕೆಗಳು ಅದಾನಿ ಸಮೂಹದ ಕಂಪನಿಗಳ ಷೇರು ಮೌಲ್ಯದ ಮೇಲೆ ಕೆಟ್ಟ ಪರಿಣಾಮ ಉಂಟುಮಾಡುವಂತಿವೆ. ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯು ತಾನೇ ಒಪ್ಪಿಕೊಂಡಿರುವಂತೆ ಅದಾನಿ ಷೇರುಗಳ ಬೆಲೆ ಇಳಿಕೆಯಿಂದ ಲಾಭ ಮಾಡಿಕೊಳ್ಳುವ ಸ್ಥಿತಿಯಲ್ಲಿ ಇದೆ ಎಂದು ಜಲುಂಧ್ವಾಲಾ ವಿವರಿಸಿದ್ದಾರೆ.

ಅಮೆರಿಕ ಹಾಗೂ ಭಾರತದ ಕಾನೂನುಗಳ ಅಡಿಯಲ್ಲಿ ಕಾನೂನು ಕ್ರಮ ಜರುಗಿಸುವ ಕುರಿತು ಪರಿಶೀಲನೆ ನಡೆದಿದೆ ಎಂದು ಅವರು ತಿಳಿಸಿದ್ದಾರೆ. ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯ ವರದಿ ಬಹಿರಂಗವಾದ ನಂತರದಲ್ಲಿ, ಸಮೂಹದ ಪ್ರಮುಖ ಕಂಪನಿಗಳ ಷೇರು ಮೌಲ್ಯವು ಕುಸಿತ ಕಂಡಿದೆ.

ಎಸ್‌ಎಪಿ: ವರ್ಷದಲ್ಲಿ 3 ಸಾವಿರ ಉದ್ಯೋಗ ಕಡಿತ

ಫ್ರಾಂಕ್‌ಫರ್ಟ್, ಜರ್ಮನಿ (ಎಎಫ್‌ಪಿ): ಜರ್ಮನಿಯ ಸಾಫ್ಟ್‌ವೇರ್ ಕಂಪನಿ ಎಸ್‌ಎಪಿ ಈ ವರ್ಷದಲ್ಲಿ 3 ಸಾವಿರ ನೌಕರರನ್ನು ಕೆಲಸದಿಂದ ತೆಗೆಯಲು ಯೋಜಿಸಿರುವುದಾಗಿ ಗುರುವಾರ ಹೇಳಿದೆ.

ಮೂಲ ವಹಿವಾಟಿನ ಕಡೆಗೆ ಹೆಚ್ಚು ಗಮನ ಕೊಡುವ ಉದ್ದೇಶದಿಂದ ಕಂಪನಿಯಲ್ಲಿ ಕೆಲವು ಬದಲಾವಣೆಗಳನ್ನು ತರಲು ನಿರ್ಧರಿಸಲಾಗಿದೆ. ಇದರಿಂದಾಗಿ ಕಂಪನಿಯ ಒಟ್ಟು ಉದ್ಯೋಗಿಗಳಲ್ಲಿ ಶೇಕಡ 2.5ರಷ್ಟು ಮಂದಿಗೆ ಸಮಸ್ಯೆ ಆಗುವ ಅಂದಾಜು ಮಾಡಲಾಗಿದೆ ಎಂದು ಅದು ತಿಳಿಸಿದೆ. ಕಂಪನಿಯು ಜಾಗತಿಕವಾಗಿ ಒಟ್ಟು 1.20 ಲಕ್ಷ ಉದ್ಯೋಗಿಗಳನ್ನು ಹೊಂದಿದೆ.

ಸುಜುಕಿ: ಭಾರತದಲ್ಲಿ 6 ವಿದ್ಯುತ್ ಚಾಲಿತ ವಾಹನ

ನವದೆಹಲಿ (ಪಿಟಿಐ): 2029–30ನೆಯ ಹಣಕಾಸು ವರ್ಷಕ್ಕೆ ಮೊದಲು ಭಾರತದಲ್ಲಿ ಒಟ್ಟು ಆರು ಇ.ವಿ. (ವಿದ್ಯುತ್ ಚಾಲಿತ) ವಾಹನಗಳನ್ನು ಮಾರುಕಟ್ಟೆಗೆ ತರಲಾಗುವುದು ಎಂದು ಸುಜುಕಿ ಮೋಟರ್ ಕಾರ್ಪೊರೇಷನ್ ಗುರುವಾರ ಹೇಳಿದೆ.

ಇ.ವಿ. ಮಾತ್ರವೇ ಅಲ್ಲದೆ, ಇಂಗಾಲದ ಮಾಲಿನ್ಯ ಇಲ್ಲದ ಸಿಎನ್‌ಜಿ, ಜೈವಿಕ ಅನಿಲ ಹಾಗೂ ಎಥೆನಾಲ್ ಮಿಶ್ರಣದ ಇಂಧನ ಬಳಸುವ ವಾಹನಗಳನ್ನು ಕೂಡ ಮಾರುಕಟ್ಟೆಗೆ ಬಿಡುಗಡೆ ಮಾಡುವುದಾಗಿ ಮಾರುತಿ ಸುಜುಕಿ ಇಂಡಿಯಾ ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

‘ಈ ವರ್ಷದ ಆಟೊ ಎಕ್ಸ್‌ಪೊದಲ್ಲಿ ನಾವು ಪರಿಚಯಿಸಿದ ಎಸ್‌ಯುವಿ ಇ.ವಿ.ಯನ್ನು ಮುಂಬರುವ ಹಣಕಾಸು ವರ್ಷದಲ್ಲಿ ಮಾರುಕಟ್ಟೆಗೆ ತರಲಾಗುತ್ತದೆ’ ಎಂದು ಕಂಪನಿ ಹೇಳಿದೆ.

2029–30ಕ್ಕೆ ಮೊದಲು ಕಂಪನಿಯ ಒಟ್ಟು ವಾಹನ ಉತ್ಪಾದನೆಯಲ್ಲಿ ಇ.ವಿ. ಪಾಲು ಶೇ 15ರಷ್ಟು, ಸಾಂಪ್ರದಾಯಿಕ ಎಂಜಿನ್ ಇರುವ ವಾಹನಗಳ ಪಾಲು ಶೇ 60ರಷ್ಟು ಹಾಗೂ ಹೈಬ್ರಿಡ್ ಎಲೆಕ್ಟ್ರಿಕ್ ವಾಹನಗಳ ಪಾಲು ಶೇ 25ರಷ್ಟು ಇರಲಿದೆ ಎಂದು ತಿಳಿಸಿದೆ.

ಭಾರತದಲ್ಲಿ ಜೈವಿಕ ಅನಿಲದ ಬಗ್ಗೆ ಹೆಚ್ಚು ಗಮನ ಹರಿಸಲಾಗುವುದು ಎಂದು ಕೂಡ ಅದು ಹೇಳಿದೆ. ಸಗಣಿಯಿಂದ ಪಡೆಯುವ ಅನಿಲವನ್ನು ಸುಜುಕಿಯ ಸಿಎನ್‌ಜಿ ಮಾದರಿಗಳಲ್ಲಿ ಬಳಸಲು ಸಾಧ್ಯವಿದೆ ಎಂದು ಕಂಪನಿಯು ವಿವರಿಸಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹520
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹520

ಅಮೆರಿಕ ಅಧ್ಯಕ್ಷ ಜೋ ಬೈಡನ್ ಘೋಷಣೆ

ಉಕ್ರೇನ್ ಸೇನಾ ಬತ್ತಳಿಕೆಗೆ ಅತ್ಯಾಧುನಿಕ ‘ಅಬ್ರಾಮ್ಸ್’ ಯುದ್ಧ ಟ್ಯಾಂಕ್

ವಾಷಿಂಗ್ಟನ್/ಕೀವ್ (ಪಿಟಿಐ/ಎಪಿ): ಉಕ್ರೇನ್ ಪೂರ್ವದಿಂದ ರಷ್ಯಾ ಪಡೆಗಳನ್ನು ಹಿಮ್ಮೆಟ್ಟಿಸಲು ಉಕ್ರೇನ್ ಸೇನೆಗೆ ಬಲ ತುಂಬುವ ಅತ್ಯಾಧುನಿಕ 31 ‘ಅಬ್ರಾಮ್ಸ್’ ಯುದ್ಧ ಟ್ಯಾಂಕ್‌ಗಳನ್ನು ಕಳುಹಿಸುವುದಾಗಿ ಅಮೆರಿಕ ಅಧ್ಯಕ್ಷ ಜೋ ಬೈಡನ್ ಗುರುವಾರ ಘೋಷಿಸಿದರು.

ಉಕ್ರೇನ್‌ಗೆ ಸೇನಾ ನೆರವು ನೀಡುವ ಸಂಬಂಧ ಬೈಡನ್ ಅವರು ಬುಧವಾರ ಜರ್ಮನಿಯ ಚಾನ್ಸಲರ್ ಓಲಾಫ್ ಸ್ಕೋಲ್ಜ್, ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್, ಬ್ರಿಟನ್ ಪ್ರಧಾನಿ ರಿಷಿ ಸುನಕ್ ಅವರ ಜತೆಗೆ ಚರ್ಚೆ ನಡೆಸಿದ್ದರು. ನಂತರ ಅವರು ಈ ಘೋಷಣೆ ಮಾಡಿದ್ದಾರೆ.

ಉಕ್ರೇನ್‌ಗೆ ‘ಅಬ್ರಾಮ್ಸ್’ ಯುದ್ಧ ಟ್ಯಾಂಕ್ ನೀಡಲು ಅಮೆರಿಕ ಸಮ್ಮತಿಸಿದ್ದ ಬೆನ್ನಲ್ಲೇ ಜರ್ಮನಿ ಮತ್ತು ಅದರ ಮಿತ್ರ ರಾಷ್ಟ್ರಗಳು ತಮ್ಮಲ್ಲಿರುವ ಅತ್ಯಾಧುನಿಕ ಲೆಪರ್ಡ್–2 ಯುದ್ಧ ಟ್ಯಾಂಕ್‌ಗಳನ್ನು ಪೂರೈಸಲು ಒಪ್ಪಿ, ಅಧಿಕೃತ ಹೇಳಿಕೆ ಪ್ರಕಟಿಸಿದ್ದವು.

‘ಉಕ್ರೇನ್‌ಗೆ ತನ್ನ ನೆಲ ರಕ್ಷಿಸಿಕೊಳ್ಳಲು ಮತ್ತು ಕಾರ್ಯತಂತ್ರದ ಉದ್ದೇಶಗಳನ್ನು ಸಾಧಿಸಲು ಅಬ್ರಾಮ್ಸ್ ಟ್ಯಾಂಕ್ ನೆರವಾಗಲಿದ್ದು, ಇವುಗಳನ್ನು ನೀಡುವಂತೆ ರಕ್ಷಣಾ ಕಾರ್ಯದರ್ಶಿ ಲಾಯ್ಡ್ ಆಸ್ಟಿನ್ ಶಿಫಾರಸು ಮಾಡಿದ್ದರು. ಈ ಯುದ್ಧ ಟ್ಯಾಂಕ್ ವಿಶ್ವದಲ್ಲೇ ಅತ್ಯಂತ ಸಮರ್ಥವಾದುದು. ಒಂದು ಟ್ಯಾಂಕ್ ಉಕ್ರೇನ್‌ನ ಒಂದು ಬೆಟಾಲಿಯನ್‌ಗೆ ಸರಿಸಮ. ಇದರ ಕಾರ್ಯ-ನಿರ್ವಹಣೆ ಅತ್ಯಂತ ಸವಾಲಿನದು. ಉಕ್ರೇನ್ ಸೈನಿಕರಿಗೆ ಅಗತ್ಯ ತರಬೇತಿ ನೀಡಲಾಗುವುದು. ಜತೆಗೆ ಎಂಟು ಎ88 ಪೂರಕ ವಾಹನಗಳನ್ನೂ ಕಳುಹಿಸಲಾಗುವುದು’ ಎಂದು ಬೈಡನ್ ಹೇಳಿದ್ದಾರೆ.

ಸ್ವರಕ್ಷಣೆಗೆ ಸೀಮಿತಗೊಂಡಿದ್ದ ಕೀವ್ ಸೇನೆಗೆ ಇಂತಹ ಸುಧಾರಿತ ಯುದ್ಧ ಟ್ಯಾಂಕ್‌ಗಳು ಲಭಿಸಿದರೆ, 12ನೇ ತಿಂಗಳಿಗೆ ಕಾಲಿಟ್ಟಿರುವ ರಷ್ಯಾ ಪಡೆಗಳನ್ನು ಹೊರದಬ್ಬಲು ಭಾರಿ ಬಲಸಿಕ್ಕಂತಾಗಲಿದೆ ಎನ್ನುವುದು ಪಶ್ಚಿಮ ರಾಷ್ಟ್ರಗಳ ಸೇನಾ ತಜ್ಞರ ಲೆಕ್ಕಾಚಾರ.

ರಷ್ಯಾ ಕ್ಷಿಪಣಿ, ಡ್ರೋನ್ ದಾಳಿ ತೀವ್ರ

ರಷ್ಯಾ ಪಡೆಗಳು ಗುರುವಾರ ದೇಶದಾದ್ಯಂತ ಕ್ಷಿಪಣಿ ಮತ್ತು ಸ್ವಯಂ ಸ್ಫೋಟಿಸುವ ಡ್ರೋನ್‌ಗಳ ವ್ಯಾಪಕ ದಾಳಿ ನಡೆಸಿವೆ ಎಂದು ಉಕ್ರೇನ್ ಅಧಿಕಾರಿಗಳು ಹೇಳಿದ್ದಾರೆ.

ಅಮೆರಿಕ, ಜರ್ಮನಿ ಅತ್ಯಾಧುನಿಕ ಯುದ್ಧ ಟ್ಯಾಂಕ್‌ಗಳನ್ನು ಉಕ್ರೇನ್‌ಗೆ ಪೂರೈಸುವುದನ್ನು ಘೋಷಿಸಿದ ಬೆನ್ನಲ್ಲೇ ರಷ್ಯಾ ಮತ್ತೆ ದಾಳಿ ತೀವ್ರಗೊಳಿಸಿದೆ. ಈ ದಾಳಿಯಿಂದ 11 ಮಂದಿ ಮೃತಪಟ್ಟಿರುವುದಾಗಿ ವರದಿಯಾಗಿದೆ ನಗರಕ್ಕೆ ಅಪ್ಪಳಿಸಿದ 15 ಕ್ರೂಸ್ ಕ್ಷಿಪಣಿಗಳನ್ನು ವಾಯು ರಕ್ಷಣಾ ವ್ಯವಸ್ಥೆಯಿಂದ ಸೇನೆ ಹೊಡೆದುರುಳಿಸಿದೆ. ಕೀವ್‌ನ ನಿಪ್ರೊವ್‌ಸ್ಕಿಯಲ್ಲಿ ಪ್ರಬಲ ಸ್ಫೋಟದ ಶಬ್ದ ಕೇಳಿಸಿದೆ. ದೇಶದಾದ್ಯಂತ ವಾಯು ದಾಳಿ ಎಚ್ಚರಿಕೆಯ ಸಂದೇಶಗಳು ಇಡೀ ದಿನ ಮೊಳಗಿದವು ಎಂದು ಕೀವ್ ನಗರಾಡಳಿತದ ಮುಖ್ಯಸ್ಥರು ಹೇಳಿದ್ದಾರೆ.

ಹಣದುಬ್ಬರ ಏರಿಕೆ ಪ್ರಮಾಣಕ್ಕೆ ಸರಿಹೊಂದಿಸಲು ಬಜೆಟ್‌ನಲ್ಲಿ ಕ್ರಮ ಸಾಧ್ಯತೆ

ಮಧ್ಯಮ ವರ್ಗಕ್ಕೆ ತೆರಿಗೆ ವಿನಾಯಿತಿ?

ನವದೆಹಲಿ (ಪಿಟಿಐ): ಈ ಬಾರಿಯ ಬಜೆಟ್‌ನಲ್ಲಿ ಮಧ್ಯಮ ವರ್ಗಕ್ಕೆ ತೆರಿಗೆ ವಿನಾಯಿತಿ ನೀಡುವ ಕುರಿತು ಕೇಂದ್ರ ಹಣಕಾಸು ಸಚಿವಾಲಯ ಪರಿಶೀಲನೆ ನಡೆಸುತ್ತಿದೆ ಎಂದು ಮೂಲಗಳು ಹೇಳಿವೆ.

ಸರ್ಕಾರದ ವಿವಿಧ ಇಲಾಖೆಗಳು ಸಲ್ಲಿಸಿರುವ ಪ್ರಸ್ತಾವನೆಗಳನ್ನು ಹಣಕಾಸು ಸಚಿವಾಲಯವು ಪರಿಶೀಲಿಸುತ್ತಿದ್ದು, ಆ ಕುರಿತು ಬಜೆಟ್‌ನಲ್ಲಿ ಘೋಷಣೆ ಮಾಡುವ ಸಾಧ್ಯತೆ ಇದೆ. ಇದರಿಂದ ಮಧ್ಯಮ ವರ್ಗದವರಿಗೆ ಹೆಚ್ಚಿನ ಪ್ರಯೋಜನ ಲಭಿಸಬಹುದು ಎಂದು ತಿಳಿಸಿವೆ.

ಕೇಂದ್ರ ಸರ್ಕಾರವು ಆದಾಯ ತೆರಿಗೆ ವಿನಾಯಿತಿ ಮಿತಿಯನ್ನು 2014ರ ಬಳಿಕ ಹೆಚ್ಚಳ ಮಾಡಿಲ್ಲ. ಸ್ಟ್ಯಾಂಡರ್ಡ್ ಡಿಡಕ್ಷನ್ ಮೊತ್ತವು 2019ರಿಂದಲೂ ₹ 50 ಸಾವಿರದಲ್ಲಿಯೇ ಇದೆ.

ಹಣದುಬ್ಬರದಲ್ಲಿ ಆಗಿರುವ ಏರಿಕೆ ಪ್ರಮಾಣಕ್ಕೆ ಸರಿಹೊಂದಿಸಲು ಈ ಬಾರಿಯ ಬಜೆಟ್‌ನಲ್ಲಿ, ವೇತನ ಪಡೆಯುವ ಮಧ್ಯಮ ವರ್ಗದವರಿಗೆ ಆದಾಯ ತೆರಿಗೆ ಮತ್ತು ಸ್ಟ್ಯಾಂಡರ್ಡ್ ಡಿಡಕ್ಷನ್ ವಿನಾಯಿತಿ ಮಿತಿಯನ್ನು ಹೆಚ್ಚಿಸಬೇಕು ಎನ್ನುವುದು ಹಲವು ತಜ್ಞರ ಅಭಿಪ್ರಾಯವಾಗಿದೆ.

ಮಧ್ಯಮ ವರ್ಗದ ಜನರು ಎದುರಿಸುತ್ತಿರುವ ಒತ್ತಡದ ಅರಿವಿದೆ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಈಚೆಗಷ್ಟೇ ಹೇಳಿದ್ದಾರೆ. ಹೀಗಾಗಿ ಬಜೆಟ್‌ನಲ್ಲಿ ಮಧ್ಯಮ ವರ್ಗದ ಪಾಲಿಗೆ ಕೆಲವು ಉತ್ತೇಜಕ ನಿರ್ಧಾರಗಳು ಹೊರಬೀಳುವ ಭರವಸೆ ಮೂಡಿದೆ.

‘ನಾನೂ ಮಧ್ಯಮ ವರ್ಗಕ್ಕೆ ಸೇರಿದವಳು. ಹೀಗಾಗಿ ಮಧ್ಯಮ ವರ್ಗದ ಒತ್ತಡಗಳನ್ನು ಅರ್ಥಮಾಡಿಕೊಳ್ಳಬಲ್ಲೆ’ ಎಂದು ನಿರ್ಮಲಾ ಈಚೆಗೆ ಹೇಳಿದ್ದಾರೆ.

ಜೀವ ವಿಮೆ, ಎಫ್‌.ಡಿ, ಬಾಂಡ್‌ಗಳು, ಪಿಪಿಎಫ್ ಒಳಗೊಂಡು 80 ಸಿ ಅಡಿಯಲ್ಲಿ ವಿನಾಯಿತಿ ಮಿತಿಯನ್ನು ಹೆಚ್ಚಿಸುವ ಕುರಿತಾಗಿಯೂ ಸಚಿವಾಲಯವು ಆಲೋಚನೆ ನಡೆಸುತ್ತಿದೆ.

ಬಂಡವಾಳ ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಲು ಆರಂಭಿಸಿರುವ ಮಧ್ಯಮ ವರ್ಗದ ಹೂಡಿಕೆದಾರರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಬಂಡವಾಳ ಗಳಿಕೆ ತೆರಿಗೆ ನಿಯಮಗಳನ್ನು ಸರಳಗೊಳಿಸುವ ಸಾಧ್ಯತೆ ಇದೆ ಎಂದೂ ಮೂಲಗಳು ಹೇಳಿವೆ.



2023–24ನೇ ಸಾಲಿನ ಕೇಂದ್ರ ಬಜೆಟ್‌ನ ಅಂತಿಮ ಪ್ರಕ್ರಿಯೆಗಳಿಗೆ ಚಾಲನೆ ನೀಡುವ ಮುನ್ನ ಗುರುವಾರ ಹಲ್ವಾ ಸಮಾರಂಭ ನಡೆಯಿತು. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸಚಿವಾಲಯದ ಹಿರಿಯ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ಸಿಹಿ ಹಂಚಿದರು. ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಮತ್ತು ಭಾಗವತ್ ಕರಾಡ್ ಇದ್ದರು –ಪಿಟಿಐ ಚಿತ್ರ

‘ಭಾರತ ರತ್ನ ನೀಡದೆ ಮುಲಾಯಂಗೆ ಅಪಹಾಸ್ಯ’

ಲಖನೌ (ಪಿಟಿಐ): ‘ಮುಲಾಯಂ ಸಿಂಗ್ ಯಾದವ್ ಅವರಿಗೆ ಮರಣೋತ್ತರ ಪದ್ಮವಿಭೂಷಣ ನೀಡುವುದರ ಮೂಲಕ ಕೇಂದ್ರ ಸರ್ಕಾರ ಅವಮಾನ ಮಾಡಿದೆ. ಅವರ ವ್ಯಕ್ತಿತ್ವ ಹಾಗೂ ದೇಶಕ್ಕೆ ಅವರು ನೀಡಿದ ಕೊಡುಗೆಗಳಿಗಾಗಿ ಅವರಿಗೆ ಭಾರತ ರತ್ನ ನೀಡಬೇಕಿತ್ತು’ ಎಂದು ಸಮಾಜವಾದಿ ಪಕ್ಷದ ಮುಖಂಡ ಸ್ವಾಮಿ ಪ್ರಸಾದ್ ಮೌರ್ಯ ಗುರುವಾರ ಹೇಳಿದ್ದಾರೆ.




‘ಮುಲಾಯಂ ಅವರಿಗೆ ಪದ್ಮ ವಿಭೂಷಣ ನೀಡಿ, ಅವರನ್ನು ಅಪಹಾಸ್ಯ ಮಾಡಲಾಗಿದೆ’ ಎಂದು ಟ್ವೀಟ್ ಮಾಡಿದ್ದಾರೆ.

ಸಮಾಜವಾದಿ ಪಕ್ಷದ ವಕ್ತಾರ ಐ.ಪಿ. ಸಿಂಗ್ ಟ್ವೀಟ್ ಮಾಡಿ, ‘ಭಾರತ ರತ್ನ ಬಿಟ್ಟು ಬೇರೆಯಾವ ಪ್ರಶಸ್ತಿಯೂ ಮಣ್ಣಿನ ಮಗ ಮುಲಾಯಂ ಸಿಂಗ್ ಅವರಿಗೆ ಸರಿಹೊಂದುವುದಿಲ್ಲ. ಮುಲಾಯಂ ಸಿಂಗ್ ಅವರಿಗೆ ಭಾರತ ರತ್ನ ನೀಡುವ ಕುರಿತು ತಕ್ಷವೇ ಘೋಷಣೆ ಮಾಡಬೇಕು’ ಎಂದರು.

ಕೋವಿಡ್: ಚೀನಾದಲ್ಲಿ ತಗ್ಗಿದ ಸಾವು

ಬೀಜಿಂಗ್ (ಎಎಫ್‌ಪಿ): ‘ದೇಶದಲ್ಲಿ ಪ್ರತಿದಿನ ವರದಿಯಾಗುತ್ತಿದ್ದ ಕೋವಿಡ್ ಮರಣ ಪ್ರಕರಣಗಳು ಈ ತಿಂಗಳ ಆರಂಭದಿಂದ ಸುಮಾರು ಶೇ 80ರಷ್ಟು ಇಳಿಕೆಯಾಗಿವೆ’ ಎಂದು ಚೀನಾದ ಅಧಿಕಾರಿಗಳು ಗುರುವಾರ ಹೇಳಿದ್ದಾರೆ.



ಹೋದ ತಿಂಗಳು ಚೀನಾವು ಶೂನ್ಯ ಕೋವಿಡ್ ನೀತಿ ಹಿಂಪಡೆದಿತ್ತು. ಬಳಿಕ ಕೋವಿಡ್ ಸೋಂಕಿತರು ಹಾಗೂ ಮರಣ ಪ್ರಕರಣದಲ್ಲಿ ದಿಢೀರ್ ಏರಿಕೆ ಕಂಡುಬಂದಿತ್ತು.

‘ಜನವರಿ 13 ರಿಂದ 19ರ ಅವಧಿಯಲ್ಲಿ ಕೋವಿಡ್ ಸಂಬಂಧಿತ ಕಾಯಿಲೆಗಳಿಂದಾಗಿ ಸುಮಾರು 13 ಸಾವಿರ ಮಂದಿ ಮೃತಪಟ್ಟದ್ದಾರೆ’ ಎಂದು ಸೆಂಟರ್ ಫಾರ್ ಡಿಸೀಸ್ ಕಂಟ್ರೋಲ್ ಆ್ಯಂಡ್ ಪ್ರಿವೆನ್ಷನ್ (ಸಿ.ಡಿ.ಸಿ) ಕಳೆದ ವಾರ ತಿಳಿಸಿತ್ತು. ಕೋವಿಡ್ ಸಂಬಂಧಿತ ಕಾಯಿಲೆಗಳಿಂದಾಗಿ ದೇಶದಲ್ಲಿ ಒಂದೇ ತಿಂಗಳಲ್ಲಿ ಸುಮಾರು 60 ಸಾವಿರ ಮಂದಿ ಸಾವಿಗೀಡಾಗಿದ್ದಾರೆ ಎಂದು ಚೀನಾದ ರಾಷ್ಟ್ರೀಯ ಆರೋಗ್ಯ ಆಯೋಗವು (ಎನ್‌ಎಚ್‌ಸಿ) ಈ ಮೊದಲು ಮಾಹಿತಿ ನೀಡಿತ್ತು.

‘ಕೋವಿಡ್‌ನಿಂದಾಗಿ ಸೋಮವಾರ 896 ಮಂದಿ ಆಸ್ಪತ್ರೆಯಲ್ಲಿ ಅಸುನೀಗಿದ್ದಾರೆ. ಗಂಭೀರ ಪ್ರಕರಣಗಳ ಸಂಖ್ಯೆಯೂ 36 ಸಾವಿರಕ್ಕೆ ತಗ್ಗಿದೆ. ಜನವರಿ 4ರಿಂದ ಈಚೆಗೆ ಮರಣ ಪ್ರಕರಣ ಶೇ 79ರಷ್ಟು ಕಡಿಮೆಯಾಗಿದೆ’ ಎಂದು ಸಿ.ಡಿ.ಸಿ ಬುಧವಾರ ಹೊರಡಿಸಿರುವ ಪ್ರಕಟಣೆಯಲ್ಲಿ ಹೇಳಿದೆ.

ಗಣೇಶ್ ಠಾಕೂರ್ ಟಾಮೆಸ್ಟ್‌ನ ಉಪಾಧ್ಯಕ್ಷ

ಹ್ಯೂಸ್ಟನ್ (ಪಿಟಿಐ): ಭಾರತ ಮೂಲದ ಅಮೆರಿಕದ ಪ್ರೊಫೆಸರ್ ಗಣೇಶ್ ಠಾಕೂರ್ ಟೆಕ್ಸಾಸ್ ಅಕಾಡೆಮಿ ಆಫ್ ಮೆಡಿಸಿನ್, ಎಂಜಿನಿಯರಿಂಗ್, ಸೈನ್ಸ್ ಆ್ಯಂಡ್ ಟೆಕ್ನಾಲಜಿಯ (ಟಾಮೆಸ್ಟ್) ಉಪಾಧ್ಯಕ್ಷರಾಗಿ ನೇಮಕಗೊಂಡಿದ್ದಾರೆ.



ಜಾರ್ಖಂಡ್ ಮೂಲದ ಠಾಕೂರ್ ಹ್ಯೂಸ್ಟನ್ ವಿವಿಯಲ್ಲಿ ಪೆಟ್ರೋಲಿಯಂ ಎಂಜಿನಿಯರಿಂಗ್ ವಿಭಾಗದಲ್ಲಿ ಪ್ರೊಫೆಸರ್ ಆಗಿದ್ದಾರೆ. ಠಾಕೂರ್ ಅವರು ಹ್ಯೂಸ್ಟನ್ ವಿಶ್ವವಿದ್ಯಾಲಯದಿಂದ ಟಾಮೆಸ್ಟ್ ಸಂಸ್ಥೆಗೆ ನೇಮಕಗೊಂಡ ಮೊದಲಿಗರಾಗಿದ್ದಾರೆ.

‘ಅತ್ಯಾಚಾರ ಸಂತ್ರಸ್ತೆ ಮೇಲೆ ತಾಯ್ತನದ ಹೊಣೆ ಹೇರಿಕೆ ಸಲ್ಲ’

ನವದೆಹಲಿ (ಪಿಟಿಐ): ‘ಅತ್ಯಾಚಾರ ಸಂತ್ರಸ್ತೆಯ ಮೇಲೆ ತಾಯ್ತನದ ಹೊಣೆ ಹೇರುವುದು ಸಲ್ಲ. ಹಾಗೆ ಮಾಡುವುದರಿಂದ ಘನತೆಯಿಂದ ಬದುಕುವ ಆಕೆಯ ಹಕ್ಕನ್ನು ನಿರಾಕರಿಸಿದಂತಾಗುತ್ತದೆ’ ಎಂದು ದೆಹಲಿ ಹೈಕೋರ್ಟ್ ಗುರುವಾರ ಹೇಳಿದೆ.

ಅತ್ಯಾಚಾರಕ್ಕೊಳಗಾದ ನಂತರ ಗರ್ಭ ಧರಿಸಿದ್ದ 14 ವರ್ಷದ ಬಾಲಕಿಯೊಬ್ಬಳು 25 ವಾರಗಳ ಭ್ರೂಣ ತೆಗೆಸಲು ಅನುಮತಿ ಕೋರಿ ಸಲ್ಲಿಸಿದ್ದ ಅರ್ಜಿಯೊಂದರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸ್ವರ್ಣಕಾಂತ ಶರ್ಮಾ ಅವರಿದ್ದ ಏಕಸದಸ್ಯ ನ್ಯಾಯಪೀಠ, ಈ ಸಂಬಂಧ ಕೆಲ ಮಾರ್ಗಸೂಚಿಗಳನ್ನು ಹೊರಡಿಸಿದೆ.

‘ತನ್ನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ವ್ಯಕ್ತಿಯ ಮಗುವಿಗೆ ಜನ್ಮ ನೀಡುವಂತೆ ಸಂತ್ರಸ್ತೆಯನ್ನು ಬಲವಂತಪಡಿಸುವುದರಿಂದ ಆಕೆ ಅನುಭವಿಸಲಿರುವ ಸಂಕಟಗಳು ವಿವರಿಸಲಾರದಂತಹವು. ತನ್ನ ಜೀವನದ ಆ ಕರಾಳ ಘಟನೆಯ ನೆನಪುಗಳು ಪ್ರತಿ ದಿನವೂ ಆಕೆಯನ್ನು ಕಾಡಲಿದ್ದು, ಆ ಕೊರಗಲ್ಲೇ ಆಕೆ ನರಳಬೇಕಾಗುತ್ತದೆ’ ಎಂದು ನ್ಯಾಯಪೀಠ ಹೇಳಿದೆ.

ಸಂತ್ರಸ್ತೆಯ ಪೋಷಕರು ಕಟ್ಟಡ ನಿರ್ಮಾಣ ಕಾರ್ಮಿಕರಾಗಿದ್ದು, ಆಕೆಯ ತಾಯಿ ಕೆಲಸದ ನಿಮಿತ್ತ ಮನೆಯಿಂದ ಹೊರ ಹೋಗಿದ್ದಾಗ ಆರೋಪಿಯು ಬಾಲಕಿ ಮೇಲೆ ಅತ್ಯಾಚಾರ ನಡೆಸಿದ್ದಾನೆ ಎಂದು ಸಂತ್ರಸ್ತೆ ಪರ ವಕೀಲರು ನ್ಯಾಯಪೀಠಕ್ಕೆ ತಿಳಿಸಿದರು.

‘ಅತ್ಯಾಚಾರ ಸಂತ್ರಸ್ತೆಯರನ್ನು ಪರೀಕ್ಷೆಗೆ ಒಳಪಡಿಸುವಾಗ ಅವರು ಗರ್ಭ ಧರಿಸಿದ್ದಾರೊ ಇಲ್ಲವೇ ಎಂಬುದನ್ನು ಖಾತರಿಪಡಿಸಿಕೊಳ್ಳುವುದಕ್ಕಾಗಿ ಬಹುತೇಕ ಸಂದರ್ಭಗಳಲ್ಲಿ ತನಿಖಾಧಿಕಾರಿಗಳು ಆಕೆಯ ಮೂತ್ರದ ಪರೀಕ್ಷೆ ನಡೆಸುವುದೇ ಇಲ್ಲ. ಇನ್ನು ಮುಂದೆ ಈ ಪರೀಕ್ಷೆಯನ್ನು ಕಡ್ಡಾಯವಾಗಿ ಕೈಗೊಳ್ಳಬೇಕು’ ಎಂದು ನ್ಯಾಯಪೀಠವು ಪ್ರಕಟಿಸಿರುವ ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

ವೈದ್ಯರ ಪಾತ್ರವೂ ದೊಡ್ಡದು: ಆರೋಪಿಯ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಾಗಿರುತ್ತದೆ. ಹೀಗಾಗಿ ವೈದ್ಯರು ಭ್ರೂಣದ ಕೋಶವನ್ನು ಕಾಪಿಟ್ಟಿರಬೇಕು ಎಂದು ನ್ಯಾಯಪೀಠ ಸೂಚಿಸಿದೆ.

ಗರ್ಭಪಾತ ಮಾಡಿಸುವ ಯತ್ನ ವಿಫಲವಾಗಿ ಮಗು ಜನಿಸಿದ್ದೇ ಆದರೆ, ಅಂತಹ ಮಗುವನ್ನು ಆರೋಗ್ಯಯುತವಾಗಿ ಬೆಳೆಸುವುದಕ್ಕೆ ಸೂಕ್ತವಾದ ವ್ಯವಸ್ಥೆಯನ್ನು ಮಾಡಿಕೊಂಡಿದ್ದನ್ನು ವೈದ್ಯರು ದೃಢಪಡಿಸಿಕೊಳ್ಳಬೇಕು ಎಂದು ತಿಳಿಸಲಾಗಿದೆ.

ಭಾರತವು ಜ್ಞಾನಿಗಳ ದೇಶವಾಗಲಿ: ಭಾಗವತ್

ಜೈಪುರ (ಪಿಟಿಐ): ಭಾರತವನ್ನು ಜ್ಞಾನವುಳ್ಳ ಜನರ ದೇಶವನ್ನಾಗಿ ಮಾಡಿ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಸರಸಂಘಚಾಲಕ ಮೋಹನ್ ಭಾಗವತ್ ಗುರುವಾರ ಸಲಹೆ ನೀಡಿದರು.

ಇಲ್ಲಿಗೆ ಸಮೀಪದ ಜಾಮ್ಡೋಲಿಯ ಕೇಶವ ವಿದ್ಯಾಪೀಠದಲ್ಲಿ ಹಮ್ಮಿಕೊಂಡಿದ್ದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಷ್ಟ್ರಧ್ವಜದ ಮೂರು ಬಣ್ಣಗಳ ಮಹತ್ವವನ್ನು ಬಣ್ಣಿಸಿದರು.

‘ರಾಷ್ಟ್ರಧ್ವಜದಲ್ಲಿರುವ ಕೇಸರಿ ಬಣ್ಣವು ಭಾರತದ ಸ್ವರೂಪವನ್ನು ಪ್ರತಿನಿಧಿಸುತ್ತದೆ. ಅದು ಶಾಶ್ವತ ಬದುಕಿನ, ಜ್ಞಾನ ಮತ್ತು ಕಠಿಣ ಪರಿಶ್ರಮದ ಸಂಕೇತವೂ ಹೌದು’ ಎಂದರು.

‘ಬಿಳಿ ಬಣ್ಣವು ಪರಿಶುದ್ಧತೆಯ ಸಂಕೇತವಾದರೆ, ಹಸಿರು ಬಣ್ಣವು ಸಮೃದ್ಧಿಯ ಸಂಕೇತ’ ಎಂದೂ ಹೇಳಿದರು.

‘ಗುಲಾಮತನದ ಸಂಕೋಲೆಯನ್ನು ಮುರಿಯುವುದು ನಮ್ಮ ಸಂಕಲ್ಪವಾಗಿದೆ. ಪ್ರಪಂಚದ ಹಿತಾಸಕ್ತಿಯಲ್ಲಿ ನಿರಂತರ ಸಕ್ರಿಯರಾಗಿರುವ ಜನರಿರುವ ದೇಶ ನಮ್ಮದು’ ಎಂದು ತಿಳಿಸಿದರು.

‘ಸಂವಿಧಾನವನ್ನು ಲೋಕಾರ್ಪಣೆ ಮಾಡಿದ ಡಾ.ಬಿ.ಆರ್. ಅಂಬೇಡ್ಕರ್ ಅವರು ಸಂಸತ್‌ನಲ್ಲಿ ಮಾಡಿರುವ ಭಾಷಣವನ್ನು ಜನರು ಓದಬೇಕು’ ಎಂದೂ ಭಾಗವತ್ ಅವರು ಸಲಹೆ ನೀಡಿದರು.

ಆರ್‌ಎಸ್‌ಎಸ್ ಪ್ರಧಾನ ಕಚೇರಿಯಲ್ಲಿ ಧ್ವಜಾರೋಹಣ (ನಾಗ್ಪುರ ವರದಿ): ಗಣರಾಜ್ಯೋತ್ಸವದ ಅಂಗವಾಗಿ ಮಹಾರಾಷ್ಟ್ರದ ನಾಗ್ಪುರದಲ್ಲಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಪ್ರಧಾನ ಕಚೇರಿಯಲ್ಲಿ ಗುರುವಾರ ರಾಷ್ಟ್ರಧ್ವಜ ಹಾರಿಸಲಾಯಿತು. ನಾಗ್ಪುರ ಮಹಾನಗರ ಸಹ ಸಂಘಚಾಲಕ ಶ್ರೀಧರ ಗಾಡ್ಗೆ ಧ್ವಜಾರೋಹಣ ನೆರವೇರಿಸಿದರು.

‘ಭಾರತದ ಜತೆ ಹಿಂಬಾಗಿಲ ಮೂಲಕ ಮಾತುಕತೆ ಇಲ್ಲ’

ಇಸ್ಲಾಮಾಬಾದ್(ಪಿಟಿಐ): ಭಾರತ ಮತ್ತು ಪಾಕಿಸ್ತಾನ ನಡುವೆ ಹಿಂಬಾಗಿಲ ಮೂಲಕ ಮಾತುಕತೆ ನಡೆಯುತ್ತಿಲ್ಲ ಎಂದು ಪಾಕಿಸ್ತಾನ ಗುರುವಾರ ಹೇಳಿದೆ.

‘ಮಾತುಕತೆಯು ಫಲಿತಾಂಶ ಆಧಾರಿತವಾಗಿದ್ದಾಗ ಮಾತ್ರ ಹಿಂಬಾಗಿಲಿನ ರಾಜತಾಂತ್ರಿಕತೆ ಅಪೇಕ್ಷಣೀಯವಾದುದು. ಈ ಕ್ಷಣದಲ್ಲಿ ಅಂತಹ ಯಾವುದೇ ಬೆಳವಣಿಗೆ ಇಲ್ಲ’ ಎಂದು ವಿದೇಶಾಂಗ ವ್ಯವಹಾರಗಳ ರಾಜ್ಯ ಸಚಿವೆ ಹೀನಾ ರಬ್ಬಾನಿ ಖಾರ್ ಸೆನೆಟ್‌ಗೆ ತಿಳಿಸಿದರು.

ಮೇನಲ್ಲಿ ಗೋವಾದಲ್ಲಿ ನಡೆಯಲಿರುವ ಶಾಂಘೈ ಸಹಕಾರ ಸಂಘಟನೆಯ ಸಭೆಗೆ ಪಾಕ್ ವಿದೇಶಾಂಗ ಸಚಿವ ಬಿಲಾವಲ್ ಭುಟ್ಟೊ ಜರ್ದಾರಿ ಮತ್ತು ಮುಖ್ಯ ನ್ಯಾಯಮೂರ್ತಿ ಉಮರ್ ಅಟಾ ಬಂಡಿಯಲ್‌ರನ್ನು ಆಹ್ವಾನಿಸಲಾಗದೆ ಎಂದು ಭಾರತೀಯ ಮಾಧ್ಯಮಗಳು ವರದಿ ಮಾಡಿದ ಕೆಲವೇ ದಿನಗಳ ನಂತರ ಖಾರ್ ಈ ಹೇಳಿಕೆ ನೀಡಿದರು.

ಎಸ್‌ಸಿಒ ಸಭೆಗೆ ಭಾರತದ ಆಹ್ವಾನವನ್ನು ಪಾಕಿಸ್ತಾನ ಸ್ವೀಕರಿಸಿದ್ದು ಅದನ್ನು ಪರಿಶೀಲಿಸಲಾಗುತ್ತಿದೆ. ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ಬಲೋಚ್ ಹೇಳಿದರು.

ಆಸ್ಟ್ರೇಲಿಯಾದಲ್ಲಿ ಹಿಂದೂ ದೇಗುಲಗಳ ಧ್ವಂಸ: ಖಂಡನೆ

ಮೆಲ್ಬರ್ನ್ (ಪಿಟಿಐ): ಆಸ್ಟ್ರೇಲಿಯಾದಲ್ಲಿ ಹಿಂದೂ ದೇವಸ್ಥಾನಗಳ ಮೇಲೆ ಭಾರತ ವಿರೋಧಿ ಬರಹಗಳನ್ನು ಬರೆಯುವುದು ಹಾಗೂ ದೇವಸ್ಥಾನಗಳನ್ನು ಧ್ವಂಸ ಮಾಡುತ್ತಿರುವುದನ್ನು ಭಾರತ ತೀವ್ರವಾಗಿ ಖಂಡಿಸಿದೆ.

ಕಳೆದ ತಿಂಗಳಿಂದ ಈವರೆಗೆ, ಸ್ವಾಮಿನಾರಾಯಣ ಹಾಗೂ ಇಸ್ಕಾನ್ ದೇವಸ್ಥಾನ, ಕಾರಂ ಡೌನ್ಸ್‌ನಲ್ಲಿರುವ ಐತಿಹಾಸಿಕ ಶಿವ–ವಿಷ್ಣು ದೇವಸ್ಥಾನಗಳ ಮೇಲೆ ಭಾರತ ವಿರೋಧಿ ಬರಹ ಬರೆದು, ದೇವಸ್ಥಾನವನ್ನು ಧ್ವಂಸಗೊಳಿಸಲಾಗಿದೆ.

‘ಭಾರತ ವಿರೋಧಿ ಭಯೋತ್ಪಾದಕರನ್ನು ವೈಭವೀಕರಿಸಿ, ಹಿಂದೂ ದೇವಸ್ಥಾನಗಳನ್ನು ಧ್ವಂಸ ಮಾಡುವುದನ್ನು ನಿರ್ಭೀಡೆಯಿಂದ, ಪದೇ ಪದೇ ಮಾಡಲಾಗುತ್ತಿದೆ. ಇದನ್ನು ಗಂಭೀರವಾಗಿ ಪರಿಗಣಿಸಬೇಕಿದೆ. ಇದು ಎಚ್ಚರಿಕೆ ಗಂಟೆಯಾಗಿದೆ’ ಎಂದು ಕ್ಯಾನ್‌ಬೆರಾದಲ್ಲಿರುವ ಭಾರತದ ರಾಯಭಾರ ಕಚೇರಿಯು ಗುರುವಾರ ಹೇಳಿಕೆ ಬಿಡುಗಡೆ ಮಾಡಿದೆ.

ಈ ಕೃತ್ಯ ನಡೆಸುತ್ತಿರುವವರಿಗೆ ಶಿಕ್ಷೆಯಾಗಬೇಕು. ಜೊತೆಗೆ ಇಂಥ ಘಟನೆಗಳು ಮರುಕಳಿಸದಂತೆ ಕ್ರಮ ಕೈಗೊಳ್ಳಬೇಕು

ಭಾರತ

‘ಆಸ್ಟ್ರೇಲಿಯಾದಲ್ಲಿ ಖಾಲಿಸ್ತಾನಿ ಬೆಂಬಲಿಗರ ಚಟುವಟಿಕೆಗಳು ಹೆಚ್ಚಾಗುತ್ತಿವೆ. ಸಿಖ್ಸ್ ಫಾರ್ ಜಸ್ಟೀಸ್ (ಎಸ್‌ಎಫ್‌ಜೆ) ಎನ್ನುವ ನಿಷೇಧಿತ ಭಯೋತ್ಪಾದನಾ ಸಂಸ್ಥೆ ಹಾಗೂ ಆಸ್ಟ್ರೇಲಿಯಾದ ಹೊರಗೆ ಇರುವ ಇಂಥ ಸಂಸ್ಥೆಗಳು ಈ ಚಟುವಟಿಕೆಗಳಿಗೆ ಕುಮ್ಮಕ್ಕು ನೀಡುತ್ತಿವೆ’ ಎಂದು ಭಾರತ ಆರೋಪಿಸಿದೆ.

‘ಹಿಂದೂ ದೇವಸ್ಥಾನಗಳನ್ನು ಧ್ವಂಸಗೊಳಿಸುತ್ತಿರುವ ಘಟನೆಗಳಿಂದ ಆಘಾತವಾಗಿದೆ. ಈ ಕುರಿತು ತನಿಖೆ ನಡೆಯುತ್ತಿದೆ’ ಎಂದು ಭಾರತದಲ್ಲಿರುವ ಆಸ್ಟ್ರೇಲಿಯಾದ ರಾಯಭಾರ ಕಚೇರಿಯು ಹೇಳಿದೆ.




ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಗುರುವಾರ ನಡೆದ ವೂಲ್ಫ್ 777 ಚಳಿಗಾಲದ ಡರ್ಬಿ ರೇಸ್‌ನಲ್ಲಿ ಪ್ರಥಮ ಸ್ಥಾನ ಗೆದ್ದ ಲಾ ರೀನಾ ಕುದುರೆ ಮತ್ತು ಜಾಕಿ ನೀರಜ್ ರಾವಲ್ (ಎಡ) ಲಾ ರೀನಾ ಅಶ್ವದ ಮಾಲೀಕರಾದ ಕ್ವೀನ್ ಗ್ಯಾಂಬಿಟ್ ರೇಸಿಂಗ್ ಸಿಂಡಿಕೇಟ್‌ನ ವಿಜಯಸಿಂಹ ದೊರೆಸ್ವಾಮಿ, ಮಾದಪ್ಪ ಪಿ ಬೆಳ್ಳಿಯಪ್ಪ, ಅಶೋಕ್ ಎನ್ ಶರ್ಮಾ, ಪಿ.ಜಿ. ಬೆಳ್ಳಿಯಪ್ಪ ಮತ್ತು ಆರ್. ಜಗದೀಪ್ ಅವರಿಗೆ ನಟಿ ಸಂಯುಕ್ತಾ ಹೆಗಡೆ ಟ್ರೋಫಿ ಪ್ರದಾನ ಮಾಡಿದರು. ಜಾಕಿ ನೀರಜ್ ರಾವಲ್, ಟ್ರೇನರ್ ಎಸ್. ಪದ್ಮನಾಭನ್, ಬೆಂಗಳೂರು ಟರ್ಫ್ ಕ್ಲಬ್ ಚೇರ್ಮನ್ ಶಿವಕುಮಾರ್ ಖೇಣಿ ಹಾಜರಿದ್ದರು –ಪ್ರಜಾವಾಣಿ ಚಿತ್ರಗಳು/ ಎಸ್.ಕೆ. ದಿನೇಶ್

ವೂಲ್ಫ್777 ಡರ್ಬಿ ಕಣ್ತುಂಬಿಕೊಂಡ ರೇಸ್ ಅಭಿಮಾನಿಗಳು: ಲಾಸ್ಟ್ ವಿಶ್‌ಗೆ ಎರಡನೇ ಸ್ಥಾನ

ಲಾ ರೀನಾಗೆ ಬೆಂಗಳೂರು ಡರ್ಬಿ ಕಿರೀಟ

• ರವಿಕುಮಾರ್

ಡರ್ಬಿ ಫಲಿತಾಂಶ (ಮೊದಲ ಆರು ಕುದುರೆಗಳ ವಿವರ)

ಕುದುರೆ ಸಂಖ್ಯೆ	ಕುದುರೆ ಹೆಸರು	ಟ್ರೈನರ್	ಜಾಕಿ	ಸಮಯ	ಬಹುಮಾನದ ಮೊತ್ತ (₹)
10	ಲಾ ರೀನಾ	ಪದ್ಮನಾಭನ್	ನೀರಜ್ ರಾವಲ್	2:31.62	73,25,022
4	ಲಾಸ್ಟ್ ವಿಶ್	ನೀಲ್ ಬಿ.ದೇವಾನಿ	ಸಿ.ಎಸ್.ಜೋಧ	2:32.16	24,41,674
1	ಅಶ್ವಮಗಧೀರ	ಎಸ್.ನರೇಡು	ಸೂರಜ್ ನರೇಡು	2:32.26	12,20,837
9	ಟ್ರೆವಾಲಿಯಸ್	ಜೇಮ್ಸ್ ಮೇಕ್‌ಓನ್	ಶ್ರೀನಾಥ್	2:32.32	6,10,419
8	ಸ್ವಾರ್ಮಿ ಓಷನ್	ಅರ್ಜುನ್ ಮಂಗ್ಳೋರ್ಕರ್	ಆಂಥೋಣಿ ರಾಜ್	2:32.92	3,66,250
7	ಸ್ಪೆಲೆಂಡಿಡೊ	ಪದ್ಮನಾಭನ್	ಎ. ಸಂದೇಶ್	2:33.12	2,44,167

ಅಂತರ: 3 1/4, 1/2, Lnk, 3 3/4, 1 1/4 • ಟ್ರೈನರ್: ಪದ್ಮನಾಭನ್ • ಮಾಲೀಕರು: ಕ್ವೀನ್ಸ್ ಗ್ಯಾಂಬಿಟ್ ಸಿಂಡಿಕೇಟ್

ಬೆಂಗಳೂರು: ಗುರುವಾರ ಸಂಜೆ ಬೆಂಗಳೂರು ಟರ್ಫ್ ಕ್ಲಬ್ ಟ್ರ್ಯಾಕ್‌ನಲ್ಲಿ ಶರವೇಗದಿಂದ ನುಗ್ಗಿದ ಲಾ ರೀನಾ ಕುದುರೆ, ವೂಲ್ಫ್ 777 ಬೆಂಗಳೂರು ಡರ್ಬಿ ಪ್ರಶಸ್ತಿಯನ್ನು ಗೆದ್ದಿತು.

ಈ ಹಿಂದೆ ನಡೆದಿದ್ದ ವೂಲ್ಫ್777 ಬೆಂಗಳೂರು ಓಕ್ಸ್ ನಲ್ಲಿ ಲಾ ರೀನಾ ಭರವಸೆ ಮೂಡಿಸಿತ್ತು. ಅದನ್ನು ಇಲ್ಲಿಯೂ ಉಳಿಸಿಕೊಂಡಿತು. 2400 ಮೀಟರ್ಸ್ ದೂರದ ಈ ಡರ್ಬಿ ರೇಸ್ ಕ್ರಮಿಸಲು ಲಾ ರೀನ 2 ನಿಮಿಷ 31.62 ಸೆಕೆಂಡುಗಳನ್ನು ತೆಗೆದುಕೊಂಡಿತು. ಇದರೊಂದಿಗೆ ಕುದುರೆಯ ಮಾಲೀಕರಾದ ಕ್ವೀನ್ಸ್ ಗ್ಯಾಂಬಿಟ್ ಸಿಂಡಿಕೇಟ್‌ಗೆ ₹ 73,25,022 ಮತ್ತು ಚೆಂದದ ಟ್ರೋಫಿ ಒಲಿಯಿತು.


ಅಪಾರ ಸಂಖ್ಯೆಯಲ್ಲಿ ಸೇರಿದ್ದ ರೇಸ್ ಅಭಿಮಾನಿಗಳು ಚಳಿಗಾಲದ ರೇಸ್ ಅನ್ನು ಕಣ್ತುಂಬಿಕೊಂಡರು.

ಬೆಟ್ಟಿಂಗ್‌ನಲ್ಲಿ ಅಶ್ವಮಗಧೀರ ಮೂರುವರೆ ಬೆಲೆಯ ಫೇವರಿಟ್ ಆಗಿದ್ದರೆ, ಲಾ ರೀನಾ ಮತ್ತು ಉಳಿದ ಕುದುರೆಗಳಿಗೆ ನಾಲ್ಕಕ್ಕಿಂತಲೂ ಹೆಚ್ಚಿನ ಬೆಲೆ ಇತ್ತು. ತುರುಸಿನ ಸ್ಪರ್ಧೆ ನಿರೀಕ್ಷಿಸಲಾಗಿತ್ತು. ಆದರೆ, ಪದ್ಮನಾಭನ್ ತರಬೇತಿಯಲ್ಲಿ ಪಳಗಿದ್ದ ಲಾ ರೀನಾ ಜಾಕಿ ನೀರಜ್ ರಾವಲ್ ಸವಾರಿಯಲ್ಲಿ ಗೆದ್ದು ಪಾರಮ್ಯ ಮೆರೆಯಿತು.

ಡರ್ಬಿಗೆ ಚಾಲನೆ ದೊರೆತ ಕೂಡಲೇ ಪ್ರೇಗ್ ಮುನ್ನಡೆಯಲ್ಲಿತ್ತು. ಲಾ ರೀನಾ ಎರಡನೇ ಸ್ಥಾನದಲ್ಲಿ ಮತ್ತು ನಂತರದ ಸ್ಥಾನಗಳಲ್ಲಿ ಕ್ರಮವಾಗಿ ಜಾರ್ಜ್ ಎವರೆಸ್ಟ್, ಅಶ್ವಮಗಧೀರ, ಟ್ರೆವಾಲಿಯಸ್, ವಿಕ್ಟೋರಿಯಾ ಪಂಚ್, ಫಾರ್‌ಸೆಟಿ, ಡಿಸ್‌ರಪ್ಟರ್, ಸ್ಪ್ಲೆಂಡಿಡೊ, ಸ್ವಾರ್ಮಿ ಓಷನ್, ಟ್ರ್ಯಾಂಕ್ವಿಲೊ ಮತ್ತು ಲಾಸ್ಟ್ ವಿಶ್ ಓಡಿದವು.

ಕೊನೆಯ ನೇರ ಓಟದಲ್ಲಿ, 300 ಮೀಟರ್ಸ್ ಬಾಕಿ ಇರುವಂತೆಯೇ ಲಾ ರೀನಾ ಮುನ್ನಡೆ ಪಡೆದು ಗೆಲುವಿನ ಅಂತರವನ್ನು ಹೆಚ್ಚಿಸಿಕೊಂಡು ಕೊನೆಯಲ್ಲಿ 3 ¼ ಲೆಂತ್‌ಗಳಿಂದ ನಿರಾಯಾಸವಾಗಿ ಜಯಿಸಿತು. ಕೊನೆಯ ಸ್ಥಾನದಲ್ಲಿ ಓಡುತ್ತಿದ್ದ ಲಾಸ್ಟ್ ವಿಶ್ ಕೊನೆಯ ಫರ್ಲಾಂಗ್‌ನಲ್ಲಿ ಮಿಂಚಿನಂತೆ ಓಡಿಬಂದು ಎರಡನೇ ಸ್ಥಾನ ಪಡೆಯಿತು.

ಕೊನೆಯ ಫರ್ಲಾಂಗ್‌ನಲ್ಲಿ ಉಳಿದ ಸ್ಥಾನಗಳಿಗಾಗಿ ಅಶ್ವಮಗಧೀರ ಮತ್ತು ಟ್ರೆವಾಲಿಸ್ ತೀವ್ರ ಪ್ರತಿಸ್ಪರ್ಧೆ ನಡೆಸಿದವು. ಕೊನೆಯಲ್ಲಿ ಅಶ್ವಮಗಧೀರ ಮೂರನೇ ಸ್ಥಾನ ಪಡೆಯುವಲ್ಲಿ ಸಫಲವಾಯಿತು.



ಗುರುವಾರ ನಡೆದ ಬೆಂಗಳೂರು ಡರ್ಬಿ ವೀಕ್ಷಿಸಲು ಬಂದಿದ್ದ ರೇಸ್ ಪ್ರಿಯರ ಸೆಲ್ಫಿ ಸಂಭ್ರಮ –ಪ್ರಜಾವಾಣಿ ಚಿತ್ರ

ವಿಶ್ವಕಪ್ ಹಾಕಿ ಟೂರ್ನಿ: 8–0 ಗೋಲುಗಳ ಗೆಲುವು

ಜಪಾನ್ ವಿರುದ್ಧ ಭಾರತ ಜಯಭೇರಿ

ರೂರ್ಕೆಲಾ (ಪಿಟಿಐ): ವಿಶ್ವಕಪ್ ಹಾಕಿ ಟೂರ್ನಿಯಲ್ಲಿ ತಡವಾಗಿ ತಮ್ಮ ಸಾಮರ್ಥ್ಯ ಮೆರೆದ ಭಾರತ ತಂಡದ ಆಟಗಾರರು ಗುರುವಾರ ಜಪಾನ್ ವಿರುದ್ಧ ಮಿಂಚಿದರು.

ಅಂತರರಾಷ್ಟ್ರೀಯ ಹಾಕಿ ಕ್ರೀಡಾಂಗಣದಲ್ಲಿ ನಡೆದ 'ಸ್ಥಾನ ನಿರ್ಣಯ' ಪಂದ್ಯದಲ್ಲಿ ಭಾರತ ತಂಡವು 8-0 ಗೋಲುಗಳಿಂದ ಜಪಾನ್ ವಿರುದ್ಧ ಗೆದ್ದಿತು. 9 ರಿಂದ 12ನೇ ಸ್ಥಾನಗಳ ನಿರ್ಣಯ ಸುತ್ತಿನ ಇನ್ನೊಂದು ಪಂದ್ಯವು ಶನಿವಾರ ನಡೆಯಲಿದೆ. ಅದರಲ್ಲಿ ಭಾರತವು ದಕ್ಷಿಣ ಆಫ್ರಿಕಾ ತಂಡವನ್ನು ಎದುರಿಸಲಿದೆ.

ಆತಿಥೇಯ ಭಾರತ ತಂಡವು ಕ್ರಾಸ್ ಓವರ್ ಪಂದ್ಯದಲ್ಲಿ ಸೋತು ಹೊರಬಿದ್ದಿತ್ತು. ಎಂಟರ ಘಟ್ಟಕ್ಕೆ ಪ್ರವೇಶಿಸುವಲ್ಲಿ ವಿಫಲವಾಗಿತ್ತು.

ಗುಂಪು ಹಂತದ ಪಂದ್ಯಗಳಲ್ಲಿ ಆಡಿದ್ದಕ್ಕಿಂತ ಇಲ್ಲಿ ಭಾರತ ತಂಡವು ಉತ್ತಮವಾಗಿ ಆಡಿತು. ಡ್ರ್ಯಾಗ್ ಫ್ಲಿಕ್‌ನಲ್ಲಿ ಕೊನೆಗೂ ಮಿಂಚಿದ ನಾಯಕ ಹರ್ಮನ್‌ಪ್ರೀತ್ ಸಿಂಗ್ (46ನಿ ಮತ್ತು 59ನಿ) ನಾಲ್ಕನೇ ಕ್ವಾರ್ಟರ್‌ನಲ್ಲಿ ಪೆನಾಲ್ಟಿ ಕಾರ್ನರ್‌ಗಳನ್ನು ಗೋಲುಗಳನ್ನಾಗಿ ಪರಿವರ್ತಿಸಿದರು. ಗುಂಪು ಹಂತದಲ್ಲಿ ಅವರು ಪೆನಾಲ್ಟಿ ಅವಕಾಶಗಳಲ್ಲಿ ಗೋಲು ಗಳಿಸುವಲ್ಲಿ ಎಡವಿದ್ದರು.

23 ವರ್ಷದ ಅಭಿಷೇಕ್ (36ನಿ ಮತ್ತು 44ನಿ) ಫೀಲ್ಡ್ ಗೋಲುಗಳನ್ನು ಹೊಡೆದರು. ಮನದೀಪ್ ಸಿಂಗ್ (33ನಿ), ವಿವೇಕ್ ಸಾಗರ್ ಪ್ರಸಾದ್ (40ನಿ), ಮನಪ್ರೀತ್ ಸಿಂಗ್ (59ನಿ) ಮತ್ತು ಸುಖಜೀತ್ ಸಿಂಗ್ (60ನಿ) ತಂಡಕ್ಕೆ ಗೋಲುಗಳ ಕಾಣಿಕೆ ನೀಡಿದರು.

ಏಷ್ಯನ್ ಚಾಂಪಿಯನ್ ಜಪಾನ್ ತಂಡವು ಭಾರತದ ರಕ್ಷಣಾ ವ್ಯೂಹವನ್ನು ದಾಟಿ ಗೋಲು ಗಳಿಸುವಲ್ಲಿ ವಿಫಲವಾಯಿತು.



ಭಾರತದ ಹರ್ಮನ್‌ಪ್ರೀತ್ ಸಿಂಗ್

ಇಂದಿನ ಪಂದ್ಯಗಳು (ಸೆಮಿಫೈನಲ್)

ಆಸ್ಟ್ರೇಲಿಯಾ– ಜರ್ಮನಿ
ಸಂಜೆ 4.30ರಿಂದ
ಬೆಲ್ಜಿಯಂ– ನೆದರ್ಲೆಂಡ್ಸ್
ಸಂಜೆ 7ರಿಂದ
ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್

ಮಹಿಳಾ ಹಾಕಿ: ಭಾರತಕ್ಕೆ ಸೋಲು

ಕೇಪ್‌ಟೌನ್ (ಪಿಟಿಐ): ಭಾರತ ಮಹಿಳಾ ತಂಡದವರು ನೆದರ್ಲೆಂಡ್ಸ್ ವಿರುದ್ಧದ ಹಾಕಿ ಸರಣಿಯ ಎರಡನೇ ಪಂದ್ಯದಲ್ಲೂ ಸೋತರು.

ಗುರುವಾರ ನಡೆದ ಪಂದ್ಯವನ್ನು ನೆದರ್ಲೆಂಡ್ಸ್ 3–1 ರಲ್ಲಿ ಗೆದ್ದುಕೊಂಡಿತು. ಮರಿಯೆನ್ ವೀನ್ (4ನೇ ನಿ.) ಮತ್ತು ಲಿಡ್ವಿಜ್ ವೆಲ್ಟನ್ (13 ಹಾಗೂ 29ನೇ ನಿ.) ಅವರು ನೆದರ್ಲೆಂಡ್ಸ್ ಪರ ಗೋಲು ಗಳಿಸಿದರು.

ಭಾರತ ತಂಡದ ಏಕೈಕ ಗೋಲನ್ನು ಸಲಿಮಾ ಟೇಟೆ 50ನೇ ನಿಮಿಷದಲ್ಲಿ ತಂದಿತ್ತರು. ಮೂರನೇ ಪಂದ್ಯ ಜ.28 ರಂದು ನಡೆಯಲಿದೆ.

ವಾಲಿಬಾಲ್: ದಾವಣಗೆರೆಗೆ ಜಯ

ಮೈಸೂರು: ಉತ್ತಮ ಆಟವಾಡಿದ ಮುಬಾರಕ್ ನೆರವಿನಿಂದ ದಾವಣಗೆರೆ ತಂಡದವರು ರಾಜ್ಯಮಟ್ಟದ 25ನೇ ವಾಲಿಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಗದುಗಿನ ವಿರುದ್ಧ ಜಯ ಸಾಧಿಸಿದರು.

ಇಲ್ಲಿನ ಮೈಸೂರು ವಿಶ್ವವಿದ್ಯಾಲಯದ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ ಗುರುವಾರ ನಡೆದ ಪಂದ್ಯದಲ್ಲಿ 23–25, 25–11, 15–11ರಿಂದ ಎದುರಾಳಿ ತಂಡದವರನ್ನು ಮಣಿಸಿದರು.

ಮೊದಲ ಸೆಟ್‌ನಲ್ಲಿ ಸೋತರೂ, ಪುಟಿದೆದ್ದ ದಾವಣಗೆರೆ ತಂಡದವರು 25–11 ಅಂತರದಲ್ಲಿ ಸಮಬಲ ಸಾಧಿಸಿದ್ದರು. 3ನೇ ಸೆಟ್‌ನಲ್ಲಿ ಅತ್ಯುತ್ತಮ ಸರ್ವ್, ಬ್ಲಾಕಿಂಗ್ ಹಾಗೂ ಪಾಸಿಂಗ್ ಮೂಲಕ ಎಂ.ಪಿ.ಮುಬಾರಕ್ ಗೆಲುವು ತಂದುಕೊಟ್ಟರು.

ಇದಕ್ಕೂ ಮೊದಲು ನಡೆದಿದ್ದ ಪಂದ್ಯದಲ್ಲಿ ಚಿಕ್ಕಬಳ್ಳಾಪುರ ತಂಡದವರು 25–20, 25–19ರಿಂದ ದಾವಣಗೆರೆ ವಿರುದ್ಧ ಗೆದ್ದಿದ್ದರು.

ಕ್ವಾರ್ಟರ್ ಫೈನಲ್‌ಗೆ ಲಕ್ಷ್ಯ ಸೇನ್

ಜಕಾರ್ತ: ಚುರುಕಿನ ಆಟವಾಡಿದ ಲಕ್ಷ್ಯ ಸೇನ್ ಅವರು ಇಂಡೋನೇಷ್ಯಾ ಮಾಸ್ಟರ್ಸ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಗುರುವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ 16ರ ಘಟ್ಟದ ಪಂದ್ಯದಲ್ಲಿ ಅವರು 19–21, 21–8, 21–17 ರಲ್ಲಿ ಮಲೇಷ್ಯಾದ ಎಂಗ್ ತ್ಸೆ ಯೊಂಗ್ ವಿರುದ್ಧ ಗೆದ್ದರು. ಮೊದಲ ಗೇಮ್‌ನಲ್ಲಿ ಸೋತರೂ ಪುಟಿದೆದ್ದು ನಿಲ್ಲುವಲ್ಲಿ ಸೇನ್ ಯಶಸ್ವಿಯಾದರು.

ಸೇನ್, ಶುಕ್ರವಾರ ನಡೆಯಲಿರುವ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಇಂಡೊನೇಷ್ಯಾದ ಜೊನಾಥನ್ ಕ್ರಿಸ್ಟಿ ವಿರುದ್ಧ ಸೆಣಸುವರು. ಕ್ರಿಸ್ಟಿ ಅವರು ಇನ್ನೊಂದು ಪಂದ್ಯದಲ್ಲಿ 21–16, 21–15 ರಲ್ಲಿ ತಮ್ಮದೇ ದೇಶದ ಶೆಸರ್ ಹಿರೆನ್ ರುಸ್ತವಿಟೊ ಅವರನ್ನು ಸೋಲಿಸಿದರು.

ಸೈನಾ ನೆಹ್ವಾಲ್‌ಗೆ ನಿರಾಸೆ: ಅನುಭವಿ ಆಟಗಾರ್ತಿ ಸೈನಾ ನೆಹ್ವಾಲ್ ಅವರು ಮಹಿಳೆಯರ ಸಿಂಗಲ್ಸ್ ವಿಭಾಗದ 16ರ ಘಟ್ಟದಲ್ಲಿ ಸೋತು ಹೊರಬಿದ್ದರು.

ಚೀನಾದ ಯು ಹಾನ್ 21–15, 21–7 ರಲ್ಲಿ ಸೈನಾ ಅವರನ್ನು ಮಣಿಸಿದರು. ಮೊದಲ ಗೇಮ್‌ನಲ್ಲಿ ಎದುರಾಳಿಗೆ ಅಲ್ಪ ಪೈಪೋಟಿ ಒಡ್ಡಿದ ಭಾರತದ ಆಟಗಾರ್ತಿ, ಎರಡನೇ ಗೇಮ್‌ನಲ್ಲಿ ವೈಫಲ್ಯ ಅನುಭವಿಸಿದರು.

ಅಶ್ವಿನಿ ಪೊನ್ನಪ್ಪ ಮತ್ತು ತನಿಶಾ ಕ್ರಾಸ್ಟೊ ಮಹಿಳೆಯರ ಡಬಲ್ಸ್ ವಿಭಾಗದ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಭಾರತದ ಜೋಡಿ 19–21, 21–18, 23–21 ರಲ್ಲಿ ಇಂಡೊನೇಷ್ಯಾದ ಲ್ಯಾನಿ ತ್ರಿಯಾ ಮಯಸರಿ ಮತ್ತು ರಿಬಕಾ ಸುಗಿಯಾರ್ತೊ ಎದುರು ರೋಚಕವಾಗಿ ಗೆದ್ದಿತು. ಈ ಜಿದ್ದಾಜಿದ್ದಿನ ಹೋರಾಟ 1 ಗಂಟೆ 3 ನಿಮಿಷ ನಡೆಯಿತು.

ಎಚ್.ಎಸ್.ಪ್ರಣಯ್ ಅವರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಸೋತಿದ್ದರು.

ಪ್ರಶಸ್ತಿಗೆ ರಿಬಾಕಿನಾ–ಸಬಲೆಂಕಾ ಸೆಣಸು

ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿ: ಸೆಮಿಯಲ್ಲಿ ಎಡವಿದ ಅಜರೆಂಕಾ

ಮೆಲ್ಬರ್ನ್ (ಎಎಫ್‌ಪಿ): ಎಲೆನಾ ರಿಬಾಕಿನಾ ಮತ್ತು ಅರಿನಾ ಸಬಲೆಂಕಾ ಅವರು ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ವಿಭಾಗದ ಪ್ರಶಸ್ತಿಗೆ ಪೈಪೋಟಿ ನಡೆಸಲಿದ್ದಾರೆ.

ವಿಂಬಲ್ಡನ್ ಚಾಂಪಿಯನ್ ಆಗಿರುವ ಕಜಕಸ್ತಾನದ ರಿಬಾಕಿನಾ ಅವರು ರಾಡ್ ಲೇವರ್ ಅರೆನಾದಲ್ಲಿ ಗುರುವಾರ ನಡೆದ ಸೆಮಿಫೈನಲ್‌ನಲ್ಲಿ 7-6 (7/4), 6-3 ರಲ್ಲಿ ಬೆಲಾರಸ್‌ನ ವಿಕ್ಟೋರಿಯಾ ಅಜರೆಂಕಾ ಅವರನ್ನು ಮಣಿಸಿದರು.

ಇನ್ನೊಂದು ನಾಲ್ಕರಘಟ್ಟದ ಹಣಾಹಣಿಯಲ್ಲಿ ಬೆಲಾರಸ್‌ನ ಅರಿನಾ ಸಬಲೆಂಕಾ ಅವರು 7-6 (7/1), 6-2 ರಲ್ಲಿ ಪೋಲೆಂಡ್‌ನ ಮಗ್ದಾ ಲಿನೆಟ್ ವಿರುದ್ಧ ಗೆದ್ದರು. ಮಹಿಳೆಯರ ಸಿಂಗಲ್ಸ್ ವಿಭಾಗದ ಫೈನಲ್ ಶನಿವಾರ ನಡೆಯಲಿದೆ.

ಇಲ್ಲಿ 22ನೇ ಶ್ರೇಯಾಂಕ ಪಡೆದಿರುವ ರಿಬಾಕಿನಾ ನಾಲ್ಕನೇ ಸುತ್ತಿನಲ್ಲಿ ಫ್ರೆಂಚ್ ಮತ್ತು ಅಮೆರಿಕ ಓಪನ್ ಚಾಂಪಿಯನ್ ಇಗಾ ಶ್ವಾಂಟೆಕ್ ಅವರಿಗೆ ಸೋಲುಣಿಸಿದ್ದರು. ಅಜರೆಂಕಾ ವಿರುದ್ಧವೂ ಶಿಸ್ತಿನ ಆಟವಾಡಿದರು.

'ನನಗೆ ನಿಜವಾಗಿಯೂ ಆಕ್ರಮಣಕಾರಿ ಆಟವಾಡಲು ಆಗಲಿಲ್ಲ. ಇಲ್ಲಿನ ಪರಿಸ್ಥಿತಿಯಲ್ಲಿ ಚೆಂಡು ತುಂಬಾ ನಿಧಾನವಾಗಿ ಸಾಗುತ್ತಿತ್ತು. ಆದರೂ ಗೆಲುವು ಪಡೆಯಲು ಸಾಧ್ಯವಾದದ್ದು ಸಂತಸ ಉಂಟುಮಾಡಿದೆ' ಎಂದು ಪಂದ್ಯದ ಬಳಿಕ ರಿಬಾಕಿನಾ ಪ್ರತಿಕ್ರಿಯಿಸಿದ್ದಾರೆ.

ಮೆಲ್ಬರ್ನ್ ಪಾರ್ಕ್‌ನಲ್ಲಿ ಚೊಚ್ಚಲ ಸೆಮಿಫೈನಲ್ ಆಡಿದ ರಿಬಾಕಿನಾ ಮೊದಲ ಸೆಟ್‌ನಲ್ಲಿ ಎರಡು ಸಲ ಎದುರಾಳಿಯ ಸರ್ವ್ ಬ್ರೇಕ್ ಮಾಡಿ 5–3 ರಲ್ಲಿ ಮುನ್ನಡೆ ಪಡೆದರು. ಅನುಭವಿ ಅಜರೆಂಕಾ ಮರುಹೋರಾಟ ನಡೆಸಿ 5–5 ಹಾಗೂ 6–6 ರಲ್ಲಿ ಸಮಬಲ ಸಾಧಿಸಿದರು. ಟೈಬ್ರೇಕರ್‌ನಲ್ಲಿ ಲಯ ಕಂಡುಕೊಂಡ ರಿಬಾಕಿನಾ ಸೆಟ್ ತಮ್ಮದಾಗಿಸಿಕೊಂಡರು.

ಎರಡನೇ ಸೆಟ್‌ನ ಆರಂಭದಲ್ಲೇ ಏಸ್‌ಗಳು ಮತ್ತು ವಿನ್ನರ್‌ಗಳನ್ನು ಸಿಡಿಸಿದ ಕಜಕಸ್ತಾನದ ಆಟಗಾರ್ತಿ 5–2 ರಲ್ಲಿ ಮುನ್ನಡೆ ಪಡೆದು ಎದುರಾಳಿಯ ಮೇಲೆ ಒತ್ತಡ ಹೇರಿದರು. ಆ ಬಳಿಕ ಒಂದು ಗೇಮ್ ಬಿಟ್ಟುಕೊಟ್ಟು ಪಂದ್ಯ ಜಯಿಸಿದರು.

ಸಬಲೆಂಕಾ– ಲಿನೆಟ್ ನಡುವಣ ಪಂದ್ಯದ ಮೊದಲ ಸೆಟ್‌ನಲ್ಲಿ ತುರುಸಿನ ಪೈಪೋಟಿ ನಡೆಯಿತು. ಟೈಬ್ರೇಕರ್‌ನಲ್ಲಿ ಸೆಟ್ ಗೆದ್ದ ಸಬಲೆಂಕಾ, ಎರಡನೇ ಸೆಟ್‌ನಲ್ಲಿ ಕೇವಲ ಎರಡು ಗೇಮ್ ಮಾತ್ರ ಎದುರಾಳಿಗೆ ಬಿಟ್ಟುಕೊಟ್ಟರು.

ಗ್ರ್ಯಾನ್‌ಸ್ಲಾಮ್ ಟೂರ್ನಿಗಳಲ್ಲಿ ಈ ಹಿಂದೆ ಮೂರು ಸಲ ಸೆಮಿ ತಡೆ ದಾಟುವಲ್ಲಿ ವಿಫಲರಾಗಿದ್ದ ಸಬಲೆಂಕಾ, ಕೊನೆಗೂ ಫೈನಲ್ ತಲುಪುವಲ್ಲಿ ಯಶಸ್ವಿಯಾದರು.

ಪುರುಷರ ವಿಭಾಗದ ಸೆಮಿ ಇಂದು: ಪುರುಷರ ವಿಭಾಗದ ಸೆಮಿಫೈನಲ್ ಪಂದ್ಯಗಳು ಶುಕ್ರವಾರ ನಡೆಯಲಿದ್ದು, ಸರ್ಬಿಯದ ನೊವಾಕ್ ಜೊಕೊವಿಚ್ ಅವರು ಅಮೆರಿಕದ ಟಾಮಿ ಪಾಲ್ ಸವಾಲನ್ನು ಎದುರಿಸಲಿದ್ದಾರೆ. ಇನ್ನೊಂದು ಪಂದ್ಯದಲ್ಲಿ ಗ್ರೀಸ್‌ನ ಸ್ಟೆಫಾನೊಸ್ ಸಿಟ್ಸಿಪಸ್ ಮತ್ತು ರಷ್ಯಾದ ಕರೆನ್ ಕಚನೊವ್ ಎದುರಾಗುವರು.

ಮಿಶ್ರ ಡಬಲ್ಸ್ ಫೈನಲ್: ಶುಕ್ರವಾರ ನಡೆಯುವ ಮಿಶ್ರ ಡಬಲ್ಸ್ ವಿಭಾಗದ ಫೈನಲ್‌ನಲ್ಲಿ ಸಾನಿಯಾ ಮಿರ್ಜಾ–ರೋಹನ್ ಬೋಪಣ್ಣ ಜೋಡಿ ಬ್ರೆಜಿಲ್‌ನ ಲೂಯಿಸಾ ಸ್ಟೆಫಾನಿ– ರಫೇಲ್ ಮಟೊಸ್ ಅವರನ್ನು ಎದುರಿಸಲಿದೆ. ಸೋನಿ ಸ್ಪೋರ್ಟ್ಸ್‌ನಲ್ಲಿ ಬೆಳಿಗ್ಗೆ 6 ರಿಂದ ನೇರ ಪ್ರಸಾರ ಇರಲಿದೆ.




ಗೆದ್ದ ಸಂಭ್ರಮದಲ್ಲಿ ಕಜಕಸ್ತಾನದ ಅರಿನಾ ಸಬಲೆಂಕಾ (ಎಡ) ಎಲೆನಾ ರಿಬಾಕಿನಾ ಆಟದ ವೈಖರಿ –ಎಎಫ್‌ಪಿ ಚಿತ್ರಗಳು

ಕುಸ್ತಿ ತಂಡಕ್ಕೆ ಅನುಮತಿ

ನವದೆಹಲಿ (ಪಿಟಿಐ): ಕ್ರೊವೇಷ್ಯದ ಜಗ್ರೆಬ್‌ನಲ್ಲಿ ಫೆ. 1 ರಿಂದ 5ರ ವರೆಗೆ ನಡೆಯಲಿರುವ ಜಗ್ರೆಬ್ ಓಪನ್ ಗ್ರ್ಯಾನ್ ಪ್ರಿ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳಲು ಭಾರತದ 55 ಸದಸ್ಯರ ಕುಸ್ತಿ ತಂಡಕ್ಕೆ ಕೇಂದ್ರ ಸರ್ಕಾರ ಅನುಮತಿ ನೀಡಿದೆ.

ಡಬ್ಲ್ಯುಎಫ್‌ಐ ಆಡಳಿತ ನೋಡಿಕೊಳ್ಳಲು ಕ್ರೀಡಾ ಸಚಿವಾಲಯ ನೇಮಿಸಿರುವ ಮೇಲುಸ್ತುವಾರಿ ಸಮಿತಿಯು ಭಾರತದ ಗ್ರೀಕೊ ರೋಮನ್ ಮತ್ತು ಫ್ರೀಸ್ಟೈಲ್ ಕುಸ್ತಿ ತಂಡವನ್ನು ಆಯ್ಕೆ ಮಾಡಿದೆ.

ಬಜರಂಗ್ ಪೂನಿಯಾ, ವಿನೇಶಾ ಪೋಗಟ್, ರವಿ ಕುಮಾರ್ ದಹಿಯಾ, ಅನ್ಶು ಮಲಿಕ್ ಮತ್ತು ದೀಪಕ್ ಪೂನಿಯಾ ಅವರು ತಂಡದಲ್ಲಿದ್ದಾರೆ ಎಂದು ಕ್ರೀಡಾ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಲೈಂಗಿಕ ದೌರ್ಜನ್ಯ ಆರೋಪಕ್ಕೆ ಗುರಿಯಾಗಿರುವ ಡಬ್ಲ್ಯುಎಫ್‌ಐ ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ಅವರಿಗೆ ಫೆಡರೇಷನ್‌ನ ಎಲ್ಲ ಚಟುವಟಿಕೆಗಳಿಂದ ದೂರವಿರುವಂತೆ ಕ್ರೀಡಾ ಸಚಿವಾಲಯ ಸೂಚಿಸಿತ್ತು.

ಐಸಿಸಿ ಪ್ರಶಸ್ತಿ: ಬಾಬರ್, ಬೆನ್ ಸ್ಟೋಕ್ಸ್‌ಗೆ ಗೌರವ

ದುಬೈ (ಪಿಟಿಐ): ಪಾಕಿಸ್ತಾನ ಕ್ರಿಕೆಟ್ ತಂಡದ ನಾಯಕ ಬಾಬರ್ ಅಜಂ ಅವರು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ನೀಡುವ ವಾರ್ಷಿಕ ಪ್ರಶಸ್ತಿಯಲ್ಲಿ ಅವಳಿ ಗೌರವ ಪಡೆದುಕೊಂಡಿದ್ದಾರೆ.

'ಐಸಿಸಿ ವರ್ಷದ ಏಕದಿನ ಕ್ರಿಕೆಟಿಗ' ಪ್ರಶಸ್ತಿ ಮತ್ತು 2022ರ ಸಾಲಿನ 'ಐಸಿಸಿ ವರ್ಷದ ಕ್ರಿಕೆಟಿಗ'ನಿಗೆ ನೀಡುವ ಸರ್ ಗ್ಯಾರಿ ಸೋಬರ್ಸ್ ಟ್ರೋಫಿಗೆ ಭಾಜನರಾಗಿದ್ದಾರೆ.

ಬಾಬರ್ ಅಜಂ ಅವರು 2022ರ ಸಾಲಿನಲ್ಲಿ ಕ್ರಿಕೆಟ್‌ನ ಎಲ್ಲ ಮೂರು ಮಾದರಿಗಳಲ್ಲಿ ಒಟ್ಟು 2,598 ರನ್‌ಗಳನ್ನು ಕಲೆಹಾಕಿದ್ದರು. ಕಳೆದ ಋತುವಿನಲ್ಲಿ 2,000 ಕ್ಕಿಂತ ಅಧಿಕ ರನ್ ಗಳಿಸಿದ್ದ ಏಕೈಕ ಬ್ಯಾಟರ್ ಎನಿಸಿಕೊಂಡಿದ್ದರು. ಎಂಟು ಶತಕ ಮತ್ತು 17 ಅರ್ಧಶತಕ ಗಳಿಸಿದ್ದರು.

ಇಂಗ್ಲೆಂಡ್ ತಂಡದ ನಾಯಕ ಬೆನ್ ಸ್ಟೋಕ್ಸ್ ಅವರು 'ಐಸಿಸಿ ವರ್ಷದ ಟೆಸ್ಟ್ ಕ್ರಿಕೆಟಿಗ' ಗೌರವಕ್ಕೆ ಪಾತ್ರರಾದರು. ಸ್ಟೋಕ್ಸ್ ನಾಯಕತ್ವದಲ್ಲಿ ಇಂಗ್ಲೆಂಡ್ ತಂಡ ಕಳೆದ ವರ್ಷ ಆಡಿದ್ದ 10 ಪಂದ್ಯಗಳಲ್ಲಿ ಒಂಬತ್ತರಲ್ಲೂ ಗೆದ್ದಿತ್ತು.

ಸ್ಟೋಕ್ಸ್ ಅವರು 36.25ರ ಸರಾಸರಿಯಲ್ಲಿ 870 ರನ್ ಗಳಿಸಿದ್ದಲ್ಲದೆ, 26 ವಿಕೆಟ್‌ಗಳನ್ನೂ ಪಡೆದುಕೊಂಡಿದ್ದರು.

ಭಾರತದ ಸೂರ್ಯಕುಮಾರ್ ಯಾದವ್ ಅವರು ಬುಧವಾರ ಪ್ರಕಟಿಸಿದ್ದ 'ಐಸಿಸಿ ವರ್ಷದ ಟಿ20 ಕ್ರಿಕೆಟಿಗ' ಪ್ರಶಸ್ತಿ ಪಡೆದುಕೊಂಡಿದ್ದರು.



ಬಾಬರ್ ಅಜಂ

ಹಾಕಿ: ಗುರು ಹಾಕಿ ಕ್ಲಬ್‌ಗೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಂದಾಣಿಕೆಯ ಆಟವಾಡಿದ ಗುರು ಹಾಕಿ ಕ್ಲಬ್ ತಂಡದವರು ಕೆಎಸ್‌ಎಚ್‌ಎ 'ಎ' ಡಿವಿಷನ್ ಹಾಕಿ ಲೀಗ್‌ನಲ್ಲಿ ಗೆದ್ದರು.

ಗುರುವಾರ ನಡೆದ ಪಂದ್ಯದಲ್ಲಿ ಗುರು ಹಾಕಿ ಕ್ಲಬ್ 4–1 ಗೋಲುಗಳಿಂದ ಬಾಂಬರ್ಸ್ ಹಾಕಿ ಕ್ಲಬ್ ತಂಡವನ್ನು ಮಣಿಸಿತು.

ವಿಜಯಿ ತಂಡದ ಪರ ಕೊಗೇಶ್ವರ್ (53 ಮತ್ತು 58ನೇ ನಿ.) ಎರಡು ಗೋಲುಗಳನ್ನು ತಂದಿತ್ತರೆ, ಗಂಗಾಧರ್ ರೆಡ್ಡಿ ಮತ್ತು ವಿಷ್ಣು ಯಾದವ್ ತಲಾ ಒಂದು ಗೋಲು ಗಳಿಸಿದರು.

ಬಾಂಬರ್ಸ್ ತಂಡಕ್ಕೆ ಮಯೂರ್ ಬೋಪಯ್ಯ ಅವರು ಮೂರನೇ ನಿಮಿಷದಲ್ಲಿ ಗೋಲು ತಂದಿತ್ತರು.

ಇನ್ನೊಂದು ಪಂದ್ಯದಲ್ಲಿ ರಾಯಚೂರಿನ ಯಂಗ್‌ಸ್ಟಾರ್ ಹಾಕಿ ಕ್ಲಬ್ ತಂಡ 3–0 ಗೋಲುಗಳಿಂದ ಎಚ್‌ಎಂಟಿ ವಿರುದ್ಧ ಜಯಿಸಿತು.

ಶುಕ್ರವಾರ ನಡೆಯುವ ಪಂದ್ಯದಲ್ಲಿ ಗುರು ಹಾಕಿ ಕ್ಲಬ್ ಮತ್ತು ರೈಸಿಂಗ್ ಸ್ಟಾರ್ ಹಾಕಿ ಕ್ಲಬ್ ತಂಡಗಳು ಎದುರಾಗಲಿವೆ.